# ಅಧ್ಯಾಯ

# 8

# ಅರ್ಥಶಾಸ್ತ್ರದ ಅಧ್ಯಯನ ಹಾಗೂ ಬೋಧನೆ

**ಸುಝಾನ್ ವಿಗಿನ್ಸ್ ಹೆಲ್ಬರ್ನ್ ಮತ್ತು ಹೆಚ್ಟ್ ಮೈಕಲ್ ಹಾರ್ಟೂನಿಯನ್**

**ಚಟುವಟಿಕೆಯ ಪಟ್ಟಿ**

ರೇಖಾತ್ಮಕ ಚಿತ್ರಣವನ್ನು ರಚಿಸುವುದು
ಒಮ್ಮತ ಸೃಷ್ಟಿಸುವುದು
ಅಧ್ಯಯನ ನಿದರ್ಶನದ ವಿಶ್ಲೇಷಣೆ
ಪಠ್ಯಪುಸ್ತಕಗಳ ವಿಶ್ಲೇಷಣೆ
ಮರುಪಡೆದುಕೊಳ್ಳಬಹುದಾದ ಚಾರ್ಟ್ ರೂಪಿಸುವುದು/ಚರ್ಚೆ
ಚರ್ಚೆ
ಅಧ್ಯಯನದ ನಿದರ್ಶನವೊಂದನ್ನು ವಿನ್ಯಾಸಗೊಳಿಸುವುದು
ದಿನಚರಿ ಪುಸ್ತಕದಲ್ಲಿ ಬರೆಯುವುದು

**ಚಟುವಟಿಕೆ**

**ಅರ್ಥಶಾಸ್ತ್ರ ಎಂದರೇನು?**

11 ಇಂಚು ಉದ್ದ ಹಾಗೂ 81/2 ಇಂಚು ಅಗಲದ ಒಂದು ಹಾಳೆಯ ಮಧ್ಯದಲ್ಲಿ ಒಂದು ವೃತ್ತವನ್ನು ರಚಿಸಿ. ವೃತ್ತದ ಮಧ್ಯದಲ್ಲಿ *'ಅರ್ಥಶಾಸ್ತ್ರ'* ಎಂಬ ಪದವನ್ನು ಬರೆಯಿರಿ. ಈಗ ನಿಮ್ಮ ದೃಷ್ಟಿಯಲ್ಲಿ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಯಾವುದೆಲ್ಲಾ ವಿಷಯಗಳು ಸೇರುತ್ತದೆ ಎಂಬುದನ್ನು ಕುರಿತು ಒಂದು ಚಿತ್ರವನ್ನು (ಪರಿಕಲ್ಪನಾತ್ಮಕ ನಕ್ಷೆಯನ್ನು) ರಚಿಸಿ. ನಕ್ಷೆಯನ್ನು ರಚಿಸುವುದಕ್ಕೆ 10 ನಿಮಿಷ ಕಾಲಾವಕಾಶ ತೆಗೆದುಕೊಳ್ಳಿ. ನಂತರ ಸಣ್ಣ ತಂಡಗಳಲ್ಲಿ ಪರಸ್ಪರರ ನಕ್ಷೆಗಳನ್ನು ಹೋಲಿಸಿ, ಒಟ್ಟಾರೆಯಾಗಿ ನಿಮ್ಮ ತಂಡದ ಪರವಾಗಿ ಒಂದು ದೊಡ್ಡ ಹಾಳೆಯ ಮೇಲೋ ಅಥವಾ ಕರಿಯ ಹಲಗೆಯ ಮೇಲೋ ಒಂದು ನಕ್ಷೆಯನ್ನು ರಚಿಸಿ. ಅರ್ಥಶಾಸ್ತ್ರವನ್ನು ಕುರಿತಂತೆ ನೀವು ಉತ್ತರಗಳನ್ನು ಬಯಸುವ ಪ್ರಶ್ನೆಗಳ ಪಟ್ಟಿಯೊಂದನ್ನು ರಚಿಸಿ.

## ಪೀಠಿಕೆ

ಅರ್ಥಶಾಸ್ತ್ರ ಹಾಗೂ ರಾಜಕೀಯ ಎರಡೂ ಯಾವಾಗಲೂ ಪರಸ್ಪರ ತೆಕ್ಕೆ ಹಾಕಿಕೊಂಡೇ ಇವೆ. ಆರ್ಥಿಕ ನಿರ್ಧಾರಗಳು ಹಾಗೂ ರಾಜಕೀಯ ವಿಷಯಗಳು ಹೆಚ್ಚೆಚ್ಚು ಜಾಗತಿಕ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತಿವೆ. ಅಮೇರಿಕಾದ ದೇಶೀಯ ಆರ್ಥಿಕ ಸಮಸ್ಯೆಗಳು ದೊಡ್ಡವೇ ಆಗಿದ್ದರೂ ಜಾಗತಿಕ ಆರ್ಥಿಕತೆಯಲ್ಲಿ ಯಾ ಅರ್ಥವ್ಯವಸ್ಥೆಯಲ್ಲಿ ಆಗುತ್ತಿರುವ ಮಹತ್ವದ ಬದಲಾವಣೆಗಳ ಮುಂದೆ ಅವು ಕುಬ್ಜವಾಗಿ ಕಾಣುತ್ತಿವೆ: ಪೂರ್ವ ಯುರೋಪ್ ದೇಶಗಳ ಅರ್ಥವ್ಯವಸ್ಥೆ ಹಾಗೂ ಸೋವಿಯತ್ ಮಾದರಿಯ ಕೇಂದ್ರ ನಿಯಂತ್ರಿತ ಆರ್ಥಿಕತೆಯ ಕುಸಿತ, ಅಮೇರಿಕಾಗೆ ಜಾಗತಿಕವಾಗಿ ಪ್ರಮುಖ ಸ್ಪರ್ಧಿಗಳ ಉದಯ, ಐರೋಪ್ಯ ಯುನಿಯನ್ ಅಂತಹ ಮುಕ್ತ ವ್ಯಾಪಾರ ವಲಯಗಳು, ಜಾಗತಿಕ ಮಟ್ಟದಲ್ಲಿ ತೈಲದ ಅಸ್ತವ್ಯಸ್ತತೆ, ಜಾಗತಿಕ ಸ್ಟಾಕ್ ವಿನಿಮಯದಲ್ಲಿನ ತಲೆತಿರುಗುವಂತ ಏರಿಳಿತಗಳು, ದೀರ್ಘಾವಧಿ ಪರಿಸರ ಬಿಕ್ಕಟ್ಟು, ಶ್ರೀಮಂತ ಹಾಗೂ ಬಡರಾಷ್ಟ್ರಗಳ ನಡುವೆ ದೊಡ್ಡದಾಗುತ್ತಿರುವ ಕಂದರ ಇವೆಲ್ಲಾ ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಗಂಭೀರವಾದ ಬದಲಾವಣೆಗಳು.

ಅಮೇರಿಕಾದ ಆರ್ಥಿಕ ಪ್ರಾಬಲ್ಯ ಹಾಗೂ ಸಾಧನೆ ಸಾಪೇಕ್ಷವಾಗಿ ಕುಸಿಯುತ್ತಿರುವುದು ನಮ್ಮ ಅನೇಕ ಆಂತರಿಕ ಸಮಸ್ಯೆಗಳಲ್ಲಿ ಕಂಡುಬರುತ್ತಿದೆ: ಮಂದಗತಿಯ ಆರ್ಥಿಕ ಪ್ರಗತಿ, ಸ್ಥಗಿತಗೊಂಡಿರುವ ನೈಜ ಕೂಲಿ, ಸ್ಥಳಾಂತರವಾಗಿರುವ ಕೈಗಾರಿಕೆಗಳು ಹಾಗೂ ಕಾರ್ಮಿಕರು, ಹೆಚ್ಚುತ್ತಿರುವ ಅಂತರಾಷ್ಟ್ರೀಯ ವ್ಯಾಪಾರದ ಕೊರತೆ ಮತ್ತು ಗಗನ ಮುಟ್ಟುತ್ತಿರುವ ಅಮೇರಿಕ ಸಂಯುಕ್ತ ರಾಷ್ಟ್ರದ (federal) ಬಜೆಟ್ ಕೊರತೆ ಮುಂತಾದವು. ನಮ್ಮ ದೇಶೀಯ ಆರ್ಥಿಕತೆಯಲ್ಲಿ ಕಾಣುತ್ತಿರುವ ಇತರ ಪ್ರವೃತ್ತಿಗಳು ಕೂಡ ಅಷ್ಟೇ ಆತಂಕಕಾರಿಯಾಗಿವೆ. ಉಳಿತಾಯ ಹಾಗೂ ಸಾಲದ ಬಿಕ್ಕಟ್ಟು ಮತ್ತು 1980ರ ವಾಲ್ ಸ್ಟ್ರೀಟ್ ಹಗರಣಗಳು ವ್ಯಾಪಾರದ ಕಾರ್ಯರೀತಿಯ ನೈತಿಕತೆಯ ಆಯಾಮವನ್ನು ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಈ ಶತಮಾನದುದ್ದಕ್ಕೂ ಮಹಿಳೆಯರು ಕೂಲಿ ಮಾರುಕಟ್ಟೆಯನ್ನು ಪ್ರವೇಶಿಸಿದ್ದು ಸರಕು ಹಾಗೂ ಸೇವೆಗಳಿಗೆ ಹೊಸ ಮಾರುಕಟ್ಟೆಯನ್ನು ಸೃಷ್ಟಿಸಿದೆ, ಆದರೆ ಅದರ ಜೊತೆಗೆ ಅದು ಕುಟುಂಬದ ರಚನೆ ಹಾಗೂ ಮಕ್ಕಳ ಪಾಲನೆಗೆ ಸಂಬಂಧಿಸಿದಂತೆ ಮಹತ್ತರವಾದ ಬದಲಾವಣೆಗಳನ್ನೂ ಸಹ ತಂದಿವೆ.

ಈ ವಿಷಯಗಳ ಮಹತ್ವವು ಸಾಮಾಜಿಕ ಅಧ್ಯಯನದ ಪಠ್ಯಕ್ರಮದಲ್ಲಿ ಅರ್ಥಶಾಸ್ತ್ರ ಪ್ರಮುಖ ಪಾತ್ರ ಹೊಂದುವುದನ್ನು ಬೇಡುತ್ತದೆ. ಯಾವ ಅರ್ಥಶಾಸ್ತ್ರವನ್ನು ಬೋಧಿಸಬೇಕು, ನಮ್ಮ ದೇಶ ಹಾಗೂ ಜಗತ್ತು ಇಂದು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಜೊತೆಗೆ ಸಂಬಂಧ ಕಲ್ಪಿಸುವುದು ಹೇಗೆ ಎನ್ನುವುದನ್ನು ನಿರ್ಧರಿಸುವುದೇ ದೊಡ್ಡ ಸಮಸ್ಯೆ. ಅರ್ಥಶಾಸ್ತ್ರದ ಅಧ್ಯಯನಕ್ಕೆ ವಿಭಿನ್ನ ಹಾಗೂ ಪರಸ್ಪರ ವಿರುದ್ಧವಾದ ಮಾರ್ಗಗಳು ಇರುವುದರಿಂದ ಪಠ್ಯಕ್ರಮದ ವಸ್ತು ಏನಿರಬೇಕು ಎನ್ನುವ ಪ್ರಶ್ನೆ ಮತ್ತಷ್ಟು ಜಟಿಲಗೊಂಡಿದೆ.

ಹೆಚ್ಚಿನ ಕೆ-12 ಅರ್ಥಶಾಸ್ತ್ರದ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಅಮೇರಿಕಾ ಆರ್ಥಿಕತೆ ಮಾರುಕಟ್ಟೆಯ ಮೂಲ ಲಕ್ಷಣಗಳನ್ನು ಪರಿಚಯಿಸುತ್ತವೆ. ಜೊತೆಗೆ ಇದು ಆಯ್ಕೆಗಳ ನಡುವೆ ವಿವೇಚನಾಶೀಲರಾಗಿ ಕೊಡುಕೊಳುಗೆ ಮಾಡಿಕೊಳ್ಳುವ ಆಧಾರದ ಮೇಲೆ ವೈಯಕ್ತಿಕ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವುದು ಹೇಗೆ ಎಂಬುದನ್ನು ತಿಳಿಸುತ್ತದೆ. ಈ ಪಠ್ಯಕ್ರಮಗಳು ಹಾಗೂ ಸಾಮಗ್ರಿಗಳು ವ್ಯಾಪಕವಾಗಿ ಪ್ರಕಾಶಕರಿಂದ ಮತ್ತು ನ್ಯಾಷನಲ್ ಕೌನ್ಸಿಲ್ ಆನ್ ಇಕನಾಮಿಕ್ ಎಡುಕೇಶನ್ ಆಂಡ್ ಜ್ಯೂನಿಯರ್ ಅಚೇವ್‌ಮೆಂಟ್ (National Council on Economic Education and Junior Achievement) ಅಂತಹ ಸಂಘಟನೆಗಳು ಒದಗಿಸುವ ಅಧ್ಯಯನ ಕೋರ್ಸ್‌ಗಳಲ್ಲಿ ಲಭ್ಯವಿದೆ (ಆ ಸಂಘಟನೆಗಳ ಬಗ್ಗೆ ಮಾಹಿತಿಗಾಗಿ ಅಧ್ಯಾಯದ ಕೊನೆಯಲ್ಲಿ ನೀಡಿರುವ ಬೋಧನಾ ಸಂಪನ್ಮೂಲಗಳ ಭಾಗವನ್ನು ನೋಡಿ).

ಅರ್ಥಶಾಸ್ತ್ರ ಬೋಧನೆಗೆ “ಮುಕ್ತ ಮಾರುಕಟ್ಟೆ” ಯ ವಿಧಾನವು ವಿಕೇಂದ್ರೀಕೃತದ ಮಾರುಕಟ್ಟೆಯ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಉಪಯುಕ್ತತೆಗಳನ್ನು ವಿವರಿಸುವುದರಲ್ಲಿ ಉಪಯೋಗವಾಗಿದೆಯಾದರೂ, ನಮ್ಮ ದೃಷ್ಟಿಯಲ್ಲಿ ಇತಿಹಾಸದ ಆರ್ಥಿಕ ಅಯಾಮವನ್ನು ಅರ್ಥ ಮಾಡಿಕೊಳ್ಳಲು ಸಮರ್ಪಕವಾದ ಬುನಾದಿಯನ್ನು ಅದು ಒದಗಿಸುವುದಿಲ್ಲ. ಅಥವಾ ಸಾರ್ವಜನಿಕ ನೀತಿಯ ಆರ್ಥಿಕ ಆಯಾಮಗಳನ್ನು ಅಧ್ಯಯನ ಮಾಡಲು ಬೇಕಾದ ಒಂದು ವಸ್ತುನಿಷ್ಠ ಚೌಕಟ್ಟನ್ನು (neutral or objective framework) ಅದು ಒದಗಿಸುವುದಿಲ್ಲ. ವಾಸ್ತವದಲ್ಲಿ ಅಂತಹ ಯಾವ ವಸ್ತುನಿಷ್ಠ ಚೌಕಟ್ಟೂ ಇಲ್ಲ ಎಂಬುದೇ ಈ ಅಧ್ಯಾಯದ ಮುಖ್ಯ ನಿಲುವು. ಅರ್ಥಶಾಸ್ತ್ರವನ್ನು ಅಧ್ಯಯನ ಮಾಡಲು ಇರುವ ಎಲ್ಲಾ ವಿಧಾನಗಳೂ ಕೆಲವು ನಂಬಿಕೆಗಳು ಹಾಗೂ ಮೌಲ್ಯಗಳನ್ನು ಅದರ ಆಧಾರವನ್ನಾಗಿ ಹೊಂದಿರುತ್ತವೆ. ಈ ಅಧ್ಯಾಯವು ಅರ್ಥಶಾಸ್ತ್ರದ ಒಂದು ಕೋರ್ಸನ್ನು ರೂಪಿಸಲು ಚೌಕಟ್ಟೊಂದನ್ನು ಕೊಡುವುದಿಲ್ಲ. ಬದಲಿಗೆ ಅದು ಈ ಅಧ್ಯಾಯದಲ್ಲಿ ಪ್ರಸ್ತುತ ಪಡಿಸಿದ ಹಲವು ದೃಷ್ಟಿಕೋನಗಳನ್ನು ಸೇರಿಸಿಕೊಂಡು ಅರ್ಥಶಾಸ್ತ್ರದ ಸಾಂಪ್ರದಾಯಿಕ ಕೋರ್ಸುಗಳನ್ನು ವಿಸ್ತರಿಸುವುದಕ್ಕೆ, ಪ್ರಮುಖ ಆರ್ಥಿಕ ಸಾರ್ವಜನಿಕ ನೀತಿ ಕುರಿತ ಚರ್ಚೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡುವುದಕ್ಕೆ ಮತ್ತು ಇತರ ಸಾಮಾಜಿಕ ಅಧ್ಯಯನಗಳ ಕೋರ್ಸುಗಳಲ್ಲಿ ಅರ್ಥಶಾಸ್ತ್ರವನ್ನು ಸೇರಿಸುವುದಕ್ಕೆ ಮಾರ್ಗಗಳನ್ನು ಸೂಚಿಸುತ್ತದೆ.

ಕೆಳಗೆ ನೀಡಿರುವ ಉದ್ದೇಶಗಳ ಮೇಲೆ ಕೇಂದ್ರೀಕರಿಸುವ ಮೂಲಕ ನಿಮ್ಮ ಅರ್ಥಶಾಸ್ತ್ರದ ಗ್ರಹಿಕೆಯನ್ನು ವಿಸ್ತರಿಸಲು ಈ ಅಧ್ಯಾಯ ಪ್ರಯತ್ನಿಸುತ್ತದೆ:

- **ಒಂದು ದೃಷ್ಟಿಕೋನವಾಗಿ ಅರ್ಥಶಾಸ್ತ್ರ**: ಬಂಡವಾಳಶಾಹಿ ಕುರಿತ ದೃಷ್ಟಿಕೋನಗಳು ಹೇಗೆ ಕಾಲಂತರದಲ್ಲಿ ಬದಲಾಗಿವೆ ಮತ್ತು ಆಯಾ ಕಾಲದ ರಾಜಕೀಯ ಹಾಗೂ ಸೈದ್ಧಾಂತಿಕ ನಂಬಿಕೆಗಳಿಗೆ ಅನುಗುಣವಾಗಿ ವಿಭಿನ್ನವಾಗಿವೆ ಎಂಬುದನ್ನು ನೀವು ಅಧ್ಯಯನ ಮಾಡುತ್ತೀರಿ; ಅಲ್ಲದೆ ಈ ವೈವಿಧ್ಯಮಯ ದೃಷ್ಟಿಕೋನಗಳು ಆರ್ಥಿಕ ಸಾಧನೆ ಹಾಗೂ ಸಮಸ್ಯೆಗಳ ಬಗ್ಗೆ ವಿಭಿನ್ನ ಒಳನೋಟಗಳನ್ನು ನೀಡುತ್ತವೆ ಎಂಬುದನ್ನೂ ನೀವು ಅಧ್ಯಯನ ಮಾಡುತ್ತೀರಿ.
- **ನೈತಿಕತೆ ಮತ್ತು ಸಿದ್ದಾಂತದಿಂದ ಪ್ರಭಾವಗೊಂಡ ಆಯ್ಕೆಯಾಗಿ ಅರ್ಥಶಾಸ್ತ್ರ**: ಆರ್ಥಿಕ ಚಿಂತನೆಯ ಪ್ರಮುಖ ಪಂಥಗಳ ಪರಿಚಯವನ್ನು ನೀವು ಮಾಡಿಕೊಳ್ಳುತ್ತೀರಿ ಮತ್ತು ವೈಯಕ್ತಿಕ ಆರ್ಥಿಕ ನಿರ್ಧಾರಗಳೂ ಸೇರಿದಂತೆ ಆರ್ಥಿಕ ಆಯ್ಕೆಗಳನ್ನು ಸಿದ್ಧಾಂತ ಮತ್ತು ನೈತಿಕತೆ ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ಶೋಧಿಸುವಿರಿ.
- **ನೀತಿ ರೂಪಣೆಯಾಗಿ ಅರ್ಥಶಾಸ್ತ್ರ:** ಆರ್ಥಿಕ ಸಮಸ್ಯೆಗಳಿಗೆ ನೀತಿ ರೂಪಿಸಲು ಬಳಸುವ ಕಾರ್ಯತಂತ್ರವನ್ನು ನೀವು ಅನ್ವಯಿಸುವಿರಿ ಮತ್ತು ಇವೆಲ್ಲವೂ ಮಾರುಕಟ್ಟೆಯ ನಿರ್ಧಾರಗಳಲ್ಲಿ ಸರ್ಕಾರದ ಮಧ್ಯಪ್ರವೇಶದ ಅವಶ್ಯಕತೆಯನ್ನು ಕುರಿತಂತೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಸಾರ್ವಜನಿಕ ನೀತಿಯ ಅಧ್ಯಯನ ಹಾಗೂ ಅರ್ಥಶಾಸ್ತ್ರವನ್ನು ಹೇಗೆ ಒಟ್ಟಿಗೆ ಸೇರಿಸುವುದು ಎಂಬುದನ್ನು ಕಲಿಯುತ್ತೀರಿ.
- **ಒಂದು ವೈಜ್ಞಾನಿಕ ಸಮುದಾಯವಾಗಿ ಅರ್ಥಶಾಸ್ತ್ರ:** ಅರ್ಥಶಾಸ್ತ್ರದ ಚರಿತ್ರೆ ಮತ್ತು ಸಮಾಜಶಾಸ್ತ್ರದ ಬಗ್ಗೆ ಕಲಿಯುವುದರ ಮೂಲಕ ಅದನ್ನು ನವ ಸಾಂಪ್ರದಾಯಿಕ (neoclassical) ರೂಢಮಾದರಿ (ಅರ್ಥಶಾಸ್ತ್ರವನ್ನು ಅಧ್ಯಯನ ಮಾಡುವ ವಿಧಾನ)ಯನ್ನು ಅಭಿವೃದ್ಧಿಪಡಿಸಿದಂತ ಅರ್ಥಶಾಸ್ತ್ರಜ್ಞರ ಒಂದು ಸಮುದಾಯವನ್ನಾಗಿ

ಅರ್ಥಮಾಡಿಕೊಳ್ಳಲು ನಿಮಗೆ ನೆರವಾಗುತ್ತದೆ. ಆರ್ಥಿಕತೆಯ ಚರಿತ್ರೆ ಮತ್ತು ಸಮಕಾಲೀನ ಆರ್ಥಿಕತೆಯ ಸಮಸ್ಯೆಗಳ ಕುರಿತು ಹೇಗೆ ಇತರ ಪರಂಪರೆಗಳು ಉಪಯುಕ್ತವಾದ ಒಳನೋಟಗಳನ್ನು ನೀಡುತ್ತವೆ ಎಂಬುದನ್ನೂ ಸಹ ಕಲಿಯುತ್ತೀರಿ.

ಆರ್ಥಶಾಸ್ತ್ರದಲ್ಲಿನ ವಿಭಿನ್ನ ಪರಂಪರೆಗಳನ್ನು ಶೋಧಿಸುವಂತೆ ಮತ್ತು ಅವುಗಳನ್ನು ನಿಮ್ಮ ಬೋಧನೆಯಲ್ಲಿ ಅನ್ವಯಿಸುವಂತೆ ನಿಮ್ಮನ್ನು ಪ್ರೋತ್ಸಾಹಿಸಲು ಆಶಿಸುತ್ತೇವೆ.

## ಅರ್ಥಶಾಸ್ತ್ರದ ವ್ಯಾಖ್ಯಾನ

ಅರ್ಥಶಾಸ್ತ್ರದ ಶಿಸ್ತನ್ನು ಕನಿಷ್ಠ ಮೂರು ಆಯಾಮಗಳಲ್ಲಿ ವಿವರಿಸಬಹುದು: ಅಧ್ಯಯನದ ವಿಷಯವಾಗಿ, ಅಧ್ಯಯನದ ವಿಧಾನವಾಗಿ ಹಾಗೂ ಒಂದು ವೃತ್ತಿನಿರತ ಗುಂಪಾಗಿ ಅರ್ಥಶಾಸ್ತ್ರಜ್ಞರು ಸಾಮಾಜಿಕವಾಗಿ ಸಂಘಟಿತರಾಗಿರುವ ಕ್ರಮವಾಗಿ.

ಅರ್ಥಶಾಸ್ತ್ರವನ್ನು ವ್ಯಾಖ್ಯಾನಿಸುವ ಒಂದು ವಿಧಾನ ಎಂದರೆ, ಅದು ಯಾವುದನ್ನು ಕುರಿತು ಅಧ್ಯಯನ ಮಾಡುತ್ತದೆ ಎಂಬುದನ್ನು ವಿವರಿಸುವುದು, ಅಂದರೆ ಅದರ ವಿಷಯ ವಸ್ತುವನ್ನು ವಿವರಿಸುವುದು. ಅರ್ಥಶಾಸ್ತ್ರ ಒಂದು ಸಮಾಜವಿಜ್ಞಾನದ ಶಿಸ್ತಿಗೆ ಸೇರಿದ್ದು ಅದು ಭೌತಿಕ ಒಳಿತಿಗೆ ಸಂಬಂಧಿಸಿದಂತೆ ಮಾನವರ ಸಮಸ್ಯೆಗಳನ್ನು ಪರಿಶೀಲಿಸುತ್ತದೆ. ಅದು ಅರ್ಥವ್ಯವಸ್ಥೆ ಹಾಗೂ ಆರ್ಥಿಕ ವ್ಯವಸ್ಥೆಯ ಕುರಿತು ಚಿಂತಿಸುತ್ತದೆ. ಅರ್ಥಶಾಸ್ತ್ರ ಪ್ರಮುಖವಾಗಿ ಮಾರುಕಟ್ಟೆಯ ವಿಕೇಂದ್ರೀಕೃತ ವ್ಯವಸ್ಥೆಯ ಮೂಲಕ ಸಂಘಟಿತವಾದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳ ಕುರಿತದ್ದಾಗಿ ಇರುತ್ತದೆ. ಹೆಚ್ಚಿನ ಉತ್ಪಾದನೆಗಳು ಲಾಭಕ್ಕಾಗಿ ನಡೆಸುವ ವ್ಯವಹಾರಗಳ ಮೂಲಕ ವ್ಯವಸ್ಥಿತವಾಗುವುದರಿಂದ ಇವೆಲ್ಲವೂ ಬಂಡವಾಳಶಾಹಿ ಆರ್ಥಿಕತೆಗಳು. ಈ ಅಧ್ಯಾಯದಲ್ಲಿ ಮುಂದೆ ಅರ್ಥಶಾಸ್ತ್ರದ ಬೆಳವಣಿಗೆಯ ಒಂದು ಸ್ಥೂಲ ಚರಿತ್ರೆಯನ್ನು ನಾವು ನೀಡುತ್ತೇವೆ, ಮತ್ತು ಅದು (1) ಅಧ್ಯಯನ ಮಾಡುವ ಆರ್ಥಿಕ ಸಮಸ್ಯೆಗಳು ಕಾಲದಿಂದ ಕಾಲಕ್ಕೆ ಬದಲಾಗಿದ್ದು ಅವು ಆಯಾ ಕಾಲದ ಆರ್ಥಿಕ ಬೆಳವಣಿಗೆಯ ಹಂತವನ್ನು ಮತ್ತು ಆರ್ಥಿಕ ಸಮಸ್ಯೆಗಳನ್ನು ಬಿಂಬಿಸುತ್ತವೆ; ಮತ್ತು (2) ಬಂಡವಾಳಶಾಹಿ ವ್ಯವಸ್ಥೆಯ ಪರಿಣಾಮಕಾರಿತ್ವಕ್ಕೆ ಆಧಾರವಾಗಿರುವ ನಂಬಿಕೆಗಳು ಅರ್ಥಶಾಸ್ತ್ರದ ಅಧ್ಯಯನದ ವಿಷಯ ವಸ್ತು ಹಾಗೂ ವಿಧಾನದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸುತ್ತದೆ.

ಅರ್ಥಶಾಸ್ತ್ರಜ್ಞರ ಚಿಂತನೆಯ ಕ್ರಮವನ್ನು ವಿವರಿಸುವುದು ಅರ್ಥಶಾಸ್ತ್ರವನ್ನು ವ್ಯಾಖ್ಯಾನಿಸುವ ಇನ್ನೊಂದು ರೀತಿ ಅಂದರೆ ಅಧ್ಯಯನದ ವಿಧಾನವನ್ನು ವಿವರಿಸುವುದು. ಈ ದೃಷ್ಟಿಯಿಂದ ಅರ್ಥಶಾಸ್ತ್ರ ಎನ್ನುವುದು ವಿವೇಕಯುಕ್ತ ಆರ್ಥಿಕ ಆಯ್ಕೆಯ ತರ್ಕದ ಅಧ್ಯಯನ, '*ಮಿತವ್ಯಯದ (economising)*' ಅಧ್ಯಯನ. ಅರ್ಥಶಾಸ್ತ್ರಜ್ಞರು ಸಂಪನ್ಮೂಲಗಳನ್ನು ಪರಿಣಾಮಕಾರಿಯ ರೀತಿಯಲ್ಲಿ ವಿಂಗಡಿಸುವ ವಿಧಾನಗಳನ್ನು ರೂಪಿಸಲು ಪ್ರಯತ್ನಿಸುತ್ತಾರೆ. ಅವರ ದೃಷ್ಟಿಯಲ್ಲಿ ಪರಿಣಾಮಕಾರಿ ಎಂದರೆ, ಬೇಡಿಕೆಯನ್ನು ಸಮಾಜದಲ್ಲಿ ಹಂಚಿಹೋಗಿರುವ ಕೊಳ್ಳುವ ಶಕ್ತಿಯು ನಿರ್ಧರಿಸುವಾಗ ಸರಕು ಹಾಗೂ ಸೇವೆಗಳಿಗೆ ಇರುವ ಬೇಡಿಕೆಯನ್ನು ಪೂರೈಸಲು ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ (ಕನಿಷ್ಠ ಖರ್ಚಿನಲ್ಲಿ) ಬಳಸಿಕೊಳ್ಳುವುದು ಎಂದರ್ಥ. ಉತ್ಪನ್ನ, ಲಾಭ, ಮತ್ತು ತೃಪ್ತಿಯನ್ನು ಹೇಗೆ ಗರಿಷ್ಠಗೊಳಿಸಬಹುದು ಎಂಬುದನ್ನು ನಿರ್ಧರಿಸಲು ಈ ವಿಧಾನಗಳನ್ನು ಬಳಸಬಹುದು. ಅವುಗಳನ್ನು ಕೊಡುಕೊಳುಗೆಯನ್ನು ಅಥವಾ ಪರ್ಯಾಯ ಕ್ರಮಗಳ ಲಾಭ, ನಷ್ಟಗಳ ವೆಚ್ಚವನ್ನು ಅಳೆಯುವುದಕ್ಕೆ ಬಳಸಬಹುದು. ಪರಿಣಾಮಕಾರಿಯ ತರ್ಕವನ್ನು ಸಾರ್ವಜನಿಕ ನೀತಿ ವಿಶ್ಲೇಷಣೆಯಲ್ಲಿ ಬಳಸುವುದು ಅದರ ಒಂದು ಬಹು ಮುಖ್ಯ ಅನ್ವಯಿಕೆಯಾಗಿದೆ. ಅರ್ಥಶಾಸ್ತ್ರಜ್ಞರು ಹೆಚ್ಚಾಗಿ ಮಾಡುವ ಕೆಲಸ ಏನೆಂದರೆ ಮಾರುಕಟ್ಟೆಯ ಕಾರ್ಯವಿಧಾನವನ್ನು ಸುಧಾರಿಸಲು (ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಲು) ಹೇಗೆ, ಯಾವಾಗ ಮತ್ತು ಏಕೆ ಮಧ್ಯಪ್ರವೇಶ ಮಾಡಬೇಕು ಅಥವಾ ಮಾಡಬಾರದು ಎಂಬುದನ್ನು ಕುರಿತಂತೆ ಸಲಹೆ ನೀಡುವುದು.

ಅರ್ಥಶಾಸ್ತ್ರವನ್ನು ವ್ಯಾಖ್ಯಾನಿಸುವ ಇನ್ನೊಂದು ರೀತಿ ಎಂದರೆ ಅದರಲ್ಲಿ ತೊಡಗಿಸಿಕೊಂಡಿರುವ ಜನರಿಗೆ ಸಂಬಂಧಿಸಿದಂತೆ ನೋಡುವುದು. ಅಂದರೆ ಒಂದೇ ರೀತಿಯ ತರಬೇತಿ ಪಡೆದಿರುವ, ಒಂದೇ ಬಗೆಯ ಕೆಲಸಗಳಲ್ಲಿ

ತೊಡಗಿಕೊಂಡಿರುವ ವೃತ್ತಿಪರ ಅರ್ಥಶಾಸ್ತ್ರಜ್ಞರ ಸಮುದಾಯದ ನೆಲೆಯಿಂದ ವ್ಯಾಖ್ಯಾನಿಸುವುದು. ಬಹುಪಾಲು ಅರ್ಥಶಾಸ್ತ್ರಜ್ಞರು ಒಂದೇ ರೀತಿಯ *'ಅಧ್ಯಯನ ಶಿಸ್ತನ್ನು'* ಅಥವಾ ಒಂದೇ ಬಗೆಯ ಚಿಂತನೆಯ ಕ್ರಮವನ್ನು ಬಳಸುತ್ತಾರೆ, ಮತ್ತು ಒಂದೇ ರೀತಿಯ *'ರೂಢಮಾದರಿ'* ಅಥವಾ ವಾಸ್ತವ ಸಮಸ್ಯೆಗಳನ್ನು ಸಂಶೋಧನೆ ಮತ್ತು ಅಧ್ಯಯನ ಮಾಡುವ ಕ್ರಮ ಕೂಡ ಸಾಮಾನ್ಯವಾಗಿ ಒಂದೇ ರೀತಿಯದಾಗಿರುತ್ತದೆ. ಅರ್ಥಶಾಸ್ತ್ರದ ವೃತ್ತಿಯಲ್ಲಿ ನವ ಸಾಂಪ್ರದಾಯಿಕ ಪಂಥದ್ದೇ ಹೆಚ್ಚು ಪ್ರಾಬಲ್ಯ. ಹಾಗಾಗಿ ಬಂಡವಾಳಶಾಹಿ ವ್ಯವಸ್ಥೆಗಳು ಹೇಗೆ ಕೆಲಸ ಮಾಡುತ್ತದೆ, ಯಾವ ಆರ್ಥಿಕ ಸಮಸ್ಯೆಗಳು ಹೆಚ್ಚು ಮುಖ್ಯ, ಅವುಗಳನ್ನು ಹೇಗೆ ಪರಿಹರಿಸುವುದು, ಸಂಶೋಧನೆಯನ್ನು ಹೇಗೆ ಮಾಡುವುದು, ಮತ್ತು ಅರ್ಥಶಾಸ್ತ್ರವನ್ನು ಹೇಗೆ ಬೋಧಿಸುವುದು ಇತ್ಯಾದಿಗಳ ಆಧಾರ ಗೃಹೀತಗಳನ್ನು ಕುರಿತಂತೆ ಆ ಪಂಥದ ದೃಷ್ಟಿಕೋನಗಳೇ ಪ್ರಧಾನವಾಗಿ ಇವೆ.

ಅರ್ಥಶಾಸ್ತ್ರದಲ್ಲಿ ಇತರ ಅರ್ಥಶಾಸ್ತ್ರದ ಪರಂಪರೆಗಳ ಪ್ರಭಾವ ಅಷ್ಟಾಗಿ ಇಲ್ಲದೆ ಇದ್ದರೂ ಅವುಗಳನ್ನು ಇನ್ನೂ ಬಳಸಲಾಗುತ್ತಿವೆ. ಎಲ್ಲಾ ವೈಜ್ಞಾನಿಕ ರೂಢಮಾದರಿಗಳು ಕೆಲವು ಮೂಲಭೂತವಾದ ನಂಬಿಕೆಗಳನ್ನು ಆಧರಿಸಿರುತ್ತವೆ. ಅರ್ಥಶಾಸ್ತ್ರದಲ್ಲಿ ಆ ನಂಬಿಕೆಗಳು ಬಂಡವಾಳಶಾಹಿ ಅರ್ಥವ್ಯವಸ್ಥೆಗಳು ಎಷ್ಟು ಪರಿಣಾಮಕಾರಿಯಾಗಿ ಕೆಲಸಮಾಡುತ್ತವೆ ಹಾಗೂ ಅವು ಹೇಗೆ ಬದಲಾಗುತ್ತವೆ ಎಂಬುದಕ್ಕೆ ಸಂಬಂಧಿಸಿರುತ್ತವೆ. ಆ ನಂಬಿಕೆಗಳು ಅಥವಾ ಪೂರ್ವಕಲ್ಪನೆಗಳು ಮೂಲಭೂತವಾಗಿ ರಾಜಕೀಯ ಸ್ವರೂಪದವು. ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆಯ ಪರಿಣಾಮಕಾರಿತ್ವವನ್ನು ಕುರಿತಂತೆ ಇರುವ ಸಾಮಾನ್ಯ ನಂಬಿಕೆಗಳು ನವ ಸಾಂಪ್ರದಾಯಿಕ ಅರ್ಥಶಾಸ್ತ್ರಕ್ಕೆ ಹೆಚ್ಚು ಅನುರೂಪವಾಗಿರುವುದು ನವ ಸಾಂಪ್ರದಾಯಿಕ ಅರ್ಥಶಾಸ್ತ್ರದ ಯಶಸ್ಸಿಗೆ ಭಾಗಶಃ ಕಾರಣವಾಗಿದ್ದು ಅದು ಆ ವ್ಯವಸ್ಥೆ ಮುಂದುವರಿದುಕೊಂಡು ಹೋಗುವುದಕ್ಕೂ ನೆರವು ನೀಡಿದೆ.

**ಚಟುವಟಿಕೆ**

**ಅರ್ಥಶಾಸ್ತ್ರ ಹಾಗೂ ಅರ್ಥವ್ಯವಸ್ಥೆಯ ನಡುವಿನ ವ್ಯತ್ಯಾಸ**

ಅರ್ಥಶಾಸ್ತ್ರದ ಅಧ್ಯಯನವನ್ನು ಹೊಸದಾಗಿ ಪ್ರಾರಂಭಿಸಿರುವವರಿಗೆ *'ಅರ್ಥಶಾಸ್ತ್ರ'* ಎನ್ನುವುದು ಒಂದು ಅಧ್ಯಯನ ಕ್ಷೇತ್ರ ಹಾಗೂ *'ಆರ್ಥಿಕತೆ'* ಜನ ಕಾರ್ಯನಿರ್ವಹಿಸುತ್ತಿರುವ ಒಂದು ವ್ಯವಸ್ಥೆ ಎಂದು ಇವೆರಡನ್ನೂ ಪ್ರತ್ಯೇಕಿಸಿ ನೋಡುವುದರಲ್ಲಿ ಗೊಂದಲವಿದೆ. ಅರ್ಥಶಾಸ್ತ್ರ ಹಾಗೂ ಆರ್ಥಿಕತೆಯ ನಡುವಿನ ಸಂಬಂಧವು ಕಾರ್ಯರೀತಿ ಹಾಗೂ ತತ್ವಗಳ ನಡುವಿನ ಸಂಬಂಧ ಮತ್ತು ನಮ್ಮ ನಂಬಿಕೆಗಳು ಹಾಗೂ ನಾವು ಮಾಡುವ ಕೆಲಸಗಳ ನಡುವಿನ ಸಂಬಂಧ ಇದ್ದ ಹಾಗೆ. ಕಾರ್ಯರೀತಿಯು ವರ್ತನಾ ಮಾದರಿಗಳು, ಜನರ ಪ್ರವೃತ್ತಿ ಮತ್ತು ಪರಿಸರದ ಅಂಶಗಳಿಂದ ನಿರ್ಬಂಧಿತವಾದರೆ ತತ್ತ್ವಗಳು ನಮ್ಮ ದಿನನಿತ್ಯದ ಕಾರ್ಯರೀತಿಗೆ ಅರ್ಥಕೊಡುವ ಸಾಂಸ್ಕೃತಿಕ ಗೃಹೀತಗಳು ಮತ್ತು ಬೌದ್ಧಿಕ ಪರಿಕಲ್ಪನೆಗಳನ್ನು ಆಧರಿಸಿರುತ್ತವೆ.

ಅರ್ಥಶಾಸ್ತ್ರ ಹಾಗೂ ಆರ್ಥಿಕತೆಯನ್ನು ಕುರಿತಂತೆ ಹಲವು ಹೇಳಿಕೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿವೆ. ಮೂರರಿಂದ ಐದು ಜನರ ಸಣ್ಣ ತಂಡಗಳನ್ನು ಮಾಡಿಕೊಂಡು ಪ್ರತಿಯೊಂದು ಹೇಳಿಕೆಯನ್ನೂ ಚರ್ಚಿಸಿ ಒಮ್ಮತಕ್ಕೆ ಬರಲು (ಹೌದು ಅಥವಾ ಇಲ್ಲ ಎಂದು ನಿರ್ಧರಿಸಲು) ಪ್ರಯತ್ನಿಸಿ. ಹೆಚ್ಚಿನ ಬಿನ್ನಾಭಿಪ್ರಾಯ ಇರುವ ಪದಗಳು ಅಥವಾ ಕಲ್ಪನೆಗಳನ್ನು ಗುರುತುಮಾಡಿಕೊಳ್ಳಲು ಒಬ್ಬರನ್ನು ನಿಯೋಜಿಸಿ. ಚಟುವಟಿಕೆಯ ಕೊನೆಯಲ್ಲಿ, ಮತ್ತು ಮತ್ತೆ ಅಧ್ಯಾಯದ ಕೊನೆಯಲ್ಲಿ ನಿಮ್ಮ ತಂಡದವರು *'ಅರ್ಥಶಾಸ್ತ್ರ'* ಮತ್ತು *'ಅರ್ಥವ್ಯವಸ್ಥೆಗೆ'* ವ್ಯಾಖ್ಯಾನಗಳನ್ನು ಬರೆಯಬೇಕು. ಫ್ಲಿಪ್ ಛಾರ್ಟನ್ನೋ, ಬೋರ್ಡನ್ನೋ ಅಥವಾ ಒಂದು ಓವರ್ ಹೆಡ್ ಪ್ರೊಜೆಕ್ಟರನ್ನೋ ಬಳಸಿಕೊಂಡು ಸಾಮಾನ್ಯ ತರಗತಿಯ ಚರ್ಚೆಯಲ್ಲಿ ವ್ಯಾಖ್ಯಾನಗಳನ್ನು ಹಂಚಿಕೊಳ್ಳಿ. ಸಾಮಾನ್ಯವಾಗಿ ಒಮ್ಮತಗಳಾಗಿರುವುದನ್ನು ಹೋಲಿಸಿ ಮತ್ತು ಭಿನ್ನಮತ ಕ್ಷೇತ್ರಗಳನ್ನು ಗುರುತಿಸಿ.

**ಹೌದು-ಇಲ್ಲ**

1. ಒಂದು *'ಆರ್ಥಿಕತೆ'* ಯಾವಾಗಲೂ *'ಆರ್ಥಿಕ'* ತತ್ತ್ವಗಳ ಹಾಗೂ ನೈತಿಕತೆಯ ಚೌಕಟ್ಟಿನಲ್ಲಿ ಕೆಲಸ ಮಾಡುತ್ತವೆ.

2. *‘ಅರ್ಥಶಾಸ್ತ್ರ’* ಎನ್ನುವುದು ಜನ ಹೇಗೆ ವಿವೇಕಯುಕ್ತವಾಗಿ ಆಯ್ಕೆಗಳನ್ನು ಮಾಡಿಕೊಳ್ಳುತ್ತಾರೆ ಎಂಬುದರ ಅಧ್ಯಯನವಾಗಿದ್ದು ಅದು ಅಂತರ್ನಿಹಿತವಾಗಿ ಯಾವುದೇ ಸೈದ್ಧಾಂತಿಕ ಪ್ರಭಾವಗಳಿಗೆ ಒಳಗಾಗುವುದಿಲ್ಲ.
3. ಯಾವುದೇ *‘ಆರ್ಥಿಕ’* ವಿಷಯ ಅಥವಾ ಸಮಸ್ಯೆಗಳಿಗೆ ಒಂದಕ್ಕಿಂತ ಹೆಚ್ಚು ಅತ್ಯುತ್ತಮ ಪರಿಹಾರಗಳಿರುತ್ತವೆ. ಏಕೆಂದರೆ ಆರ್ಥಿಕ ಸಿದ್ಧಾಂತಕ್ಕಿಂತ *‘ಅರ್ಥವ್ಯವಸ್ಥೆ’* ಎನ್ನುವುದು ಹೆಚ್ಚು ಸಂಕೀರ್ಣ.
4. ಸಾರ್ವಜನಿಕ *‘ಆರ್ಥಿಕ’* ನೀತಿಯು *‘ಅರ್ಥವ್ಯವಸ್ಥೆ’* ಯ ಒಳಗೆ ನಡೆಯುವ ಖಾಸಗಿ ನಿರ್ಧಾರಗಳ ಪ್ರತಿಬಿಂಬವಷ್ಟೇ ಆಗಿರುತ್ತವೆ.
5. *‘ಆರ್ಥಿಕ’* ನೀತಿ ರೂಪಿಸುವುದು ಯಾವಾಗಲೂ ಒಂದು ರಾಜಕೀಯ ಕಾರ್ಯವೇ.
6. ಆತ್ಮಸಾಕ್ಷಿಗೆ ವರ್ತನೆ ಹೇಗೆ ಮುಖ್ಯವೋ ಹಾಗೆಯೇ *‘ಅರ್ಥಶಾಸ್ತ್ರಕ್ಕೆ’ ‘ಅರ್ಥವ್ಯವಸ್ಥೆಯು’* ಮುಖ್ಯವಾಗಿದೆ.

## ಅರ್ಥಶಾಸ್ತ್ರವೋ ಅಥವಾ ರಾಜಕೀಯ ಅರ್ಥನೀತಿಯೋ?

ಅರ್ಥಶಾಸ್ತ್ರದ ಸ್ವರೂಪವನ್ನು ಕುರಿತಂತೆ ಸಮಕಾಲೀನ ಹಾಗೂ ಹಿಂದಿನ ದೃಷ್ಟಿಕೋನಗಳನ್ನು ಹೋಲಿಸಿ ನೋಡುವ ಮೂಲಕ ಅರ್ಥಶಾಸ್ತ್ರವನ್ನು ಕುರಿತಂತೆ ಇರುವ ಚಿಂತನೆಯಲ್ಲಿನ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ಇಂದು ಅರ್ಥಶಾಸ್ತ್ರಜ್ಞರು ಅರ್ಥವ್ಯವಸ್ಥೆ ಕೆಲಸ ಮಾಡುವ ಕ್ರಮವನ್ನು ವಿವರಿಸುವ, ಸಂಗತಿಗಳನ್ನು ಮತ್ತು ನಿಯಮಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ವಿಜ್ಞಾನಿಗಳು ಎಂದು ತಮ್ಮನ್ನು ಭಾವಿಸಿಕೊಂಡಿದ್ದಾರೆ. ಅವರು ತಮ್ಮ ಕಾರ್ಯಕ್ಕೆ19ನೇ ಶತಮಾನದ ಭೌತಶಾಸ್ತ್ರದ ವಿಧಾನವನ್ನು ಮಾದರಿಯನ್ನಾಗಿ ಅಳವಡಿಸಿಕೊಳ್ಳುತ್ತಾರೆ ಮತ್ತು ಆರ್ಥಿಕ ಸಿದ್ಧಾಂತಗಳನ್ನು ಅಥವಾ ಮಾರುಕಟ್ಟೆ ಅರ್ಥವ್ಯವಸ್ಥೆಗಳ ಕಾರ್ಯವಿಧಾನದ ಮಾದರಿಗಳನ್ನು ರೂಪಿಸುವುದಕ್ಕೆ ಅವರು ಹೆಚ್ಚಿನ ಮಹತ್ವ ನೀಡುತ್ತಾರೆ.

ಮುಖ್ಯವಾಹಿನಿಯ ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಇಂದು ಅರ್ಥಶಾಸ್ತ್ರವನ್ನು ಪರಸ್ಪರ ವಿರೋಧಿಸುವ ಗುರಿಗಳಿಗೆ ವಿರಳ ಸಂಪನ್ಮೂಲಗಳನ್ನು ಸಾಮಾಜಿಕವಾಗಿ ಹಂಚಿಕೆ ಮಾಡುವುದರ ಕುರಿತ ಅಧ್ಯಯನ ಎಂಬುದಾಗಿ ವ್ಯಾಖ್ಯಾನಿಸುತ್ತಾರೆ. ಅವರು ಅರ್ಥವ್ಯವಸ್ಥೆಯ ವಿನಿಮಯದ ಅಂಶಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ: ಜನ ಸರಕು ಹಾಗೂ ಸೇವೆಗಳ ವ್ಯಾಪಾರ ಮಾಡುತ್ತಾರೆ ಮತ್ತು ಆ ಮೂಲಕ ವಿರಳ ಸಂಪನ್ಮೂಲಗಳನ್ನು ಮಾನವನ ಭೌತಿಕ ಅವಶ್ಯಕತೆಗಳನ್ನು ತೃಪ್ತಿಪಡಿಸುವುದಕ್ಕೆಂದು ಹಂಚುತ್ತಾರೆ ಎಂದು ನಂಬುತ್ತಾರೆ. ನವ ಸಾಂಪ್ರದಾಯಿಕ ಅರ್ಥಶಾಸ್ತ್ರವು ಸಮಾಜವನ್ನು ಆಯ್ಕೆಯ ಸ್ವಾತಂತ್ರ್ಯವಿರುವ ಮತ್ತು ಅವರು ಯಾವಾಗಲೂ ವಿವೇಚನೆಯಿಂದ ವರ್ತಿಸುವ ವ್ಯಕ್ತಿಗಳ ನಡುವಿನ ವಿನಿಮಯಗಳ ವ್ಯವಸ್ಥೆ ಎಂದು ಚಿತ್ರಿಸುತ್ತದೆ; ಅಂದರೆ ಜನ ಅವರ ಆರ್ಥಿಕ ಲಾಭವನ್ನು ಗರಿಷ್ಠಗೊಳಿಸುವ ಮೂಲಕ ತಮ್ಮ ಸ್ವಂತದ ಆರ್ಥಿಕ ಅಥವಾ ಭೌತಿಕ ಹಿತಾಸಕ್ತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತಾರೆ ಎಂದು ಅವರು ಚಿತ್ರಿಸುತ್ತಾರೆ. ಅರ್ಥಶಾಸ್ತ್ರದ ವಿಷಯ ವಸ್ತುವನ್ನು ಎರಡು ಕ್ಷೇತ್ರಗಳನ್ನಾಗಿ ವಿಭಜಿಸಲಾಗಿದೆ: *‘ಸೂಕ್ಷ್ಮ ದೃಷ್ಟಿಕೋನ (micro)ದ ಅರ್ಥಶಾಸ್ತ್ರ’* ಮತ್ತು *‘ಸ್ಥೂಲ ದೃಷ್ಟಿಕೋನ (macro)ದ ಅರ್ಥಶಾಸ್ತ್ರ’*.


ಸೂಕ್ಷ್ಮ ದೃಷ್ಟಿಕೋನದ ಅರ್ಥಶಾಸ್ತ್ರ ಸಿದ್ಧಾಂತಗಳು ಬೆಲೆಗಳು, ಕೂಲಿ, ಲಾಭಗಳನ್ನು ನಿರ್ಧರಿಸುವಲ್ಲಿ; ಮಾರುಕಟ್ಟೆಗಳ ನಡುವೆ ಸಂಪನ್ಮೂಲಗಳನ್ನು ಹಂಚುವುದರಲ್ಲಿ; ಮತ್ತು ವ್ಯಕ್ತಿಗಳ ನಡುವೆ ವರಮಾನ ಹಂಚಿಕೆಯಾಗುವುದನ್ನು ನಿರ್ಧರಿಸುವಲ್ಲಿ ಮಾರುಕಟ್ಟೆಗಳ ಕಾರ್ಯಾಚರಣೆಯನ್ನು ಮುನ್ನಾಣುತ್ತವೆ. ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಮಾರುಕಟ್ಟೆ ವ್ಯವಸ್ಥೆಯನ್ನು ಏರುಪೇರುಗಳನ್ನು ತಮ್ಮಷ್ಟಕ್ಕೆ ತಾವೇ ಸರಿಪಡಿಸಿಕೊಳ್ಳುವ ವ್ಯವಸ್ಥೆಯ ಸ್ಪರ್ಧಾತ್ಮಕ ಮಾರುಕಟ್ಟೆಗಳಾಗಿದ್ದು ಅವು ಸರಕು ಹಾಗೂ ಸೇವೆಗಳಿಗೆ ಇರುವ ಬೇಡಿಕೆಗೆ ತಕ್ಕಂತೆ ವಿರಳ ಸಂಪನ್ಮೂಲಗಳ ಪೂರೈಕೆಯನ್ನು ಸರಿಹೊಂದಿಸುತ್ತವೆ ಎಂಬುದಾಗಿ ನೋಡುತ್ತಾರೆ. ಅದೊಂದು ವಿಕೇಂದ್ರಿಕೃತ ವ್ಯವಸ್ಥೆ (ಅದನ್ನು ಯಾರು ನಿಯಂತ್ರಿಸುತ್ತಿರುವುದಿಲ್ಲ) ಆಗಿದ್ದರೂ ಅದು ಕೊಳ್ಳುವವರು ಹಾಗೂ ಮಾರುವವರ ನಡುವಿನ ಸ್ಪರ್ಧೆಯ ಮೂಲಕ ನಡೆಸಲ್ಪಡುತ್ತದೆ. ಪೂರೈಕೆ ಹಾಗೂ ಬೇಡಿಕೆ ಪರಿಸ್ಥಿತಿಯಲ್ಲಿ ಆಗುವ ಬದಲಾವಣೆಗಳು ಬೆಲೆಗಳಲ್ಲಿನ ಬದಲಾವಣೆಗಳ ಮೂಲಕ ವ್ಯಕ್ತವಾಗುತ್ತವೆ; ತತ್ಪರಿಣಾಮವಾಗಿ ಈ

ಬೆಲೆಗಳಲ್ಲಿ ಆಗುವ ಬದಲಾವಣೆಗಳು ಸರಕುಗಳನ್ನು ಕೊಳ್ಳುವ ಹಾಗೂ ಮಾರುವ ಪ್ರಮಾಣವನ್ನು ಪ್ರಭಾವಿಸುತ್ತವೆ. ಸ್ಪರ್ಧಾತ್ಮಕ ಪ್ರಕ್ರಿಯೆ ಇರುವುದರಿಂದ, ತಮ್ಮ ಸ್ವಂತದ ಲಾಭವನ್ನು ಗರಿಷ್ಠಗೊಳಿಸಿಕೊಳ್ಳಲು ಬಯಸುವ ಮಾರುಕಟ್ಟೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳು ಇಡಿಯಾಗಿ ಸಮಾಜದ ಒಳಿತನ್ನೂ ಸಹ ಹೆಚ್ಚಿಸುತ್ತಾರೆ.

ಸ್ಥೂಲ ದೃಷ್ಟಿಕೋನದ ಅರ್ಥಶಾಸ್ತ್ರವು ಅರ್ಥವ್ಯವಸ್ಥೆಯನ್ನು, ಉತ್ಪಾದನಾ ಅಂಶಗಳನ್ನು ಹೊಂದಿರುವ ಹಾಗೂ ಸಿದ್ಧವಾಗಿರುವ ಗ್ರಾಹಕ ಸರಕುಗಳನ್ನು ಬೇಡುವ ವ್ಯಕ್ತಿಗಳು ಮತ್ತು ಆರ್ಥಿಕ ಬೆಳವಣಿಗೆಯನ್ನು ನಿರ್ಣಯಿಸುವಂತ ಉತ್ಪನ್ನಗಳನ್ನು ಉತ್ಪಾದಿಸುವ ಹಾಗೂ ಹೂಡಿಕೆಯ ನಿರ್ಧಾರಗಳನ್ನು ಕೈಗೊಳ್ಳುವ ವಾಣಿಜ್ಯ ಸಂಸ್ಥೆಗಳ ನಡುವೆ ನಿರಂತರವಾಗಿ ಹರಿಯುವ  ವ್ಯವಹಾರ ವ್ಯವಸ್ಥೆಯಾಗಿ ಪರಿಗಣಿಸುತ್ತದೆ (ನೋಡಿ ಚಿತ್ರ 8.1). ಸ್ಥೂಲ ದೃಷ್ಟಿಕೋನದ ಸಿದ್ಧಾಂತವು ಅರ್ಥವ್ಯವಸ್ಥೆಯ ಒಟ್ಟಾರೆ ಬೆಳವಣಿಗೆಗೆ ಕಾರಣಗಳನ್ನು ಮತ್ತು ಹಣದುಬ್ಬರವನ್ನು, ತೀವ್ರ ಪ್ರಮಾಣದ ನಿರುದ್ಯೋಗವನ್ನು ಅಥವಾ ಎರಡನ್ನೂ ಸೃಷ್ಟಿಸುವ ವಾಣಿಜ್ಯ ಆವರ್ತಗಳಿಗೆ  ಕಾರಣಗಳನ್ನು ವಿವರಿಸುತ್ತದೆ.

ಅರ್ಥಶಾಸ್ತ್ರವನ್ನು ಸಮಾಜದ ಇತರ ಅಂಶಗಳಿಂದ ಪ್ರತ್ಯೇಕಿಸಿ, ಅದರಲ್ಲೂ ವಿಶೇಷವಾಗಿ ರಾಜಕೀಯದಿಂದ ಪ್ರತ್ಯೇಕಿಸಿ ಒಂದು ವಿಜ್ಞಾನವನ್ನಾಗಿ ನೋಡುವ ದೃಷ್ಟಿಕೋನ ಸಾಪೇಕ್ಷವಾಗಿ ಇತ್ತೀಚಿನದ್ದು. ಮೊದಲ ಅರ್ಥಶಾಸ್ತ್ರಜ್ಞರು ತಮ್ಮನ್ನು ರಾಜಕೀಯ ಅರ್ಥಶಾಸ್ತ್ರಜ್ಞರು ಎಂದು ಕರೆದುಕೊಂಡರು. ಏಕೆಂದರೆ ಅವರ ಆಸಕ್ತಿಯೆಲ್ಲಾ ಪ್ರಮುಖವಾಗಿ ಆಗಷ್ಟೇ ಅಸ್ತಿತ್ವಕ್ಕೆ ಬರುತ್ತಿದ್ದ ಬಂಡವಾಳಶಾಹಿ ಮಾರುಕಟ್ಟೆ ಆರ್ಥಿಕತೆಯನ್ನು ನಿಯಂತ್ರಿಸಲು ಅವಶ್ಯಕವಾಗಿದ್ದ ಸೂಕ್ತ ನೀತಿಗಳನ್ನು ಸೂಚಿಸುವುದರಲ್ಲಿ ಇತ್ತು; ಅಂತಹ ನೀತಿಗಳು ಯಾವಾಗಲೂ ರಾಜಕೀಯದೊಂದಿಗೆ ಅಂದರೆ ಅಧಿಕಾರದ ಸಂಬಂಧಗಳೊಂದಿಗೆ ತೆಕ್ಕೆಹಾಕಿಕೊಂಡಿರುತ್ತವೆ ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು. ಅವರು ರಾಜಕೀಯ ಅರ್ಥನೀತಿಯನ್ನು ನೀತಿಶಾಸ್ತ್ರದ ಭಾಗವನ್ನಾಗಿಯೂ ಸಹ ಪರಿಗಣಿಸಿದರು ಏಕೆಂದರೆ ನಿರ್ಧಾರಗಳು ಮಾನವ ಒಳತಿನ ಮೇಲೆ ಪರಿಣಾಮ ಬೀರುವಂತದಾಗಿದ್ದು ಅವು ನ್ಯಾಯಯುತ ಪರಿಹಾರಗಳನ್ನು ಬೇಡುವುದು ಎಂಬ ಕಾರಣಕ್ಕೆ. ವಿಭಿನ್ನ ವರ್ಗದ ಭೂಮಾಲಿಕರು, ವ್ಯಾಪಾರಿಗಳು, ಕಾರ್ಖಾನೆಗಳ ಒಡೆಯರು ಹಾಗೂ ಕಾರ್ಮಿಕರ ನಡುವೆ ಹಂಚಿಕೆ ಆಗುವ ಸಂಪತ್ತು ಹಾಗೂ ಅಧಿಕಾರದ ಮೇಲೆ ಪ್ರಮುಖ ಸಾರ್ವಜನಿಕ ನೀತಿಯ ಪ್ರಶ್ನೆಗಳು ಪರಿಣಾಮ ಬೀರುತ್ತವೆ ಎಂಬುದನ್ನು ಅವರು ಗುರುತಿಸಿದರು. ಅವರು ಒಟ್ಟಾರೆಯಾಗಿ ಸಮಾಜದ ಒಳಿತನ್ನು ಉತ್ತೇಜಿಸುವ ಹಾಗೂ ಒಂದು ನಿರ್ದಿಷ್ಟ ಪ್ರಬಲ ಗುಂಪಿನ ಹಿತಾಸಕ್ತಿಗಳನ್ನು ಉತ್ತೇಜಿಸುವ ನೀತಿಗಳ ನಡುವೆ ವ್ಯತ್ಯಾಸ ಮಾಡಿದರು. ಹೀಗೆ, ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ರಾಜಕೀಯ ಅರ್ಥಶಾಸ್ತ್ರಜ್ಞರು ಸಾರ್ವಜನಿಕ ಆರ್ಥಿಕ ನೀತಿಗಳ ನೈತಿಕ ಆಯಾಮವನ್ನು ದತ್ತವೆಂದು ಪರಿಗಣಿಸಿದರು. ಅವರ ಬಗ್ಗೆ ಮುಂದೆ ಸಂಕ್ಷಿಪ್ತವಾಗಿ ಚರ್ಚಿಸುತ್ತೇವೆ.

ರಾಜಕೀಯ ಅರ್ಥನೀತಿ ಕ್ರಮೇಣ ಅರ್ಥಶಾಸ್ತ್ರ ಎನ್ನುವ ವಿಜ್ಞಾನವಾಗಿ ರೂಪಾಂತರಗೊಂಡು ಅದರ ವೃತ್ತಿಗಾರರು ರಾಜಕೀಯ ಹಾಗೂ ನೈತಿಕ ಪರಿಗಣನೆಗಳಿಂದ ತಮ್ಮನ್ನು ದೂರಮಾಡಿಕೊಂಡರು. ಇಂದು ಬಹುಪಾಲು ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳಾಗಿ ಅವರು ಕೇವಲ ವಾಸ್ತವ ಸಂಗತಿಗಳಲ್ಲಿ (ಏನಿದೆ) ಮಾತ್ರ ಆಸಕ್ತಿ ಹೊಂದಿದ್ದಾರೆಯೇ ಹೊರತು ಮೌಲ್ಯಗಳಲ್ಲಿ (ಏನಾಗಿರಬೇಕು ಎನ್ನುವುದರ) ಅಲ್ಲ ಎಂದು ವಾದಿಸುತ್ತಾರೆ. ಅದೇನೇ ಆದರೂ, ನೈತಿಕ ಪರಿಗಣನೆಗಳನ್ನು ಹಾಗೂ ಮೌಲ್ಯಗಳನ್ನು ಆರ್ಥಿಕ ವಿಷಯಗಳಿಂದ ಬೇರೆ ಮಾಡಲು ಸಾಧ್ಯವಿಲ್ಲ ಎಂದು ಮುಂದೆ ವಾದಿಸಲಿದ್ದೇವೆ; ಹೆಚ್ಚೆಂದರೆ ಅವುಗಳನ್ನು ಕಡೆಗಣಿಸಬಹುದು ಅಥವಾ ಮರೆಮಾಚಬಹುದು ಅಷ್ಟೇ. ಆರ್ಥಿಕ ನಿರ್ಧಾರಗಳು ಯಾವಾಗಲೂ ಏನು ಮಾಡಬೇಕು ಎಂಬ ವ್ಯಕ್ತಿಯೊಬ್ಬರ  ಅಭಿಪ್ರಾಯವನ್ನು ಆಧರಿಸಿರುತ್ತದೆ. ಹಾಗಾಗಿ ಸಮಾಜ ಹೇಗೆ ಕೆಲಸ ಮಾಡುತ್ತದೆ, ವಾಸ್ತವದಲ್ಲಿ ಏನಾಗುತ್ತದೆ ಎಂಬುದು ಅದರಲ್ಲಿ ಪಾಲ್ಗೊಳ್ಳುವವರ ನೈತಿಕ ಮನೋಭಾವನೆಗಳನ್ನು ಅವಲಂಬಿಸಿರುತ್ತದೆ. ಈ ಅಧ್ಯಾಯದಲ್ಲಿ ನಾವು ಎದುರಿಸಲಿರುವ ಒಂದು ದೊಡ್ಡ ಪ್ರಶ್ನೆಯೆಂದರೆ ನಿಜವಾಗಿಯೂ ಜನ ಮೂಲಭೂತವಾಗಿ ತಮ್ಮ ಸ್ವಹಿತಾಸಕ್ತಿಯನ್ನು ಗರಿಷ್ಠಗೊಳಿಸಿಕೊಳ್ಳಲು ಬಯಸುವ ಸ್ವಾರ್ಥಿಗಳೇ? ಸ್ವಾಹಿತಾಸಕ್ತಿಯುಳ್ಳವರಾಗಿದ್ದರೆ ಕೇವಲ ಆರ್ಥಿಕ ಲಾಭಗಳ ಮೇಲಷ್ಟೇ ಗಮನ ಕೇಂದ್ರಿತರಾಗಿದ್ದಾರೆಯೇ? ಹಾಗಿದ್ದಲ್ಲಿ ಸಾರ್ವಜನಿಕ ಆಸಕ್ತಿಯನ್ನು ಉತ್ತೇಜಿಸಲು ಸರ್ಕಾರದ ಮಧ್ಯಪ್ರವೇಶ ಸ್ವಲ್ಪಮಟ್ಟಿಗೆ ಅವಶ್ಯಕವೇ?




**ಚಿತ್ರ 8.1: ಹಣ-ವಿನಿಮಯ ಆರ್ಥಿಕ ವ್ಯವಸ್ಥೆಯ ನಿರಂತರ ಹರಿವು**

*ಉತ್ಪಾದಕ ಸೇವೆಗಳು *(ಸಂಭಾರಗಳು)
*ಕಾರಕ ಮಾರುಕಟ್ಟೆಗಳು
* ಆದಾಯ *$ *$
*ವ್ಯಾಪಾರ ಉದ್ಯಮಗಳು (ಉತ್ಪಾದಕರು) * ಹಣದ ಹರಿವು * ಕುಟುಂಬಗಳು (ಗ್ರಾಹಕರು)
*$ *$ *ಉತ್ಪನ್ನ ಮಾರುಕಟ್ಟೆಗಳು (ಸಗಟು ಮತ್ತು ಚಿಲ್ಲರೆ) *ವ್ಯಯಿಸುವುದು
* (ಉತ್ಪಾದನೆಗಳು) * ಸರಕುಗಳು ಹಾಗೂ ಸೇವೆಗಳು
*ಸಂಭಾರ ಹಾಗೂ ಉತ್ಪಾದನೆಗಳ ವಾಸ್ತವ ಹರಿವು

ಮುಖ್ಯವಾಹಿನಿಯ ನವ ಸಾಂಪ್ರದಾಯಿಕ ಅರ್ಥಶಾಸ್ತ್ರವು ಬಂಡವಾಳಶಾಹಿ ಹಾಗೂ ನೈತಿಕತೆಯನ್ನು ಕುರಿತ ಒಂದು ನಿರ್ದಿಷ್ಟ ದೃಷ್ಟಿಕೋನವನ್ನು ಆಧರಿಸಿದೆ. ಜನರು ತಮ್ಮ ಸ್ವಹಿತಾಸಕ್ತಿಗೆ ಅನುಗುಣವಾಗಿ ಕೆಲಸ ಮಾಡುವುದರಿಂದ ಮುಕ್ತ ಮಾರುಕಟ್ಟೆ ಉತ್ತಮವಾಗಿ ಕೆಲಸ ಮಾಡುತ್ತದೆ ಎಂಬ ವಾದವನ್ನು ಮುಂದಿಡುವುದರಲ್ಲಿ ಅದು ಸೂಚ್ಯವಾಗಿ ಜನರು ಸ್ವಾಭಾವಿಕವಾಗಿಯೇ ಸ್ವಾರ್ಥಿಗಳು ಮತ್ತು ಅವರು ಯಾವುದೇ ಉದಾತ್ತ ತತ್ತ್ವಗಳಿಂದ ಪ್ರೇರಿತರಾಗಿ ಕೆಲಸಮಾಡುವುದಿಲ್ಲ ಎಂದು ಭಾವಿಸುತ್ತದೆ. ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಉತ್ಪಾದನೆ, ಸಂಪತ್ತು ಹಾಗೂ ತೃಪ್ತಿಯನ್ನು ಪ್ರತಿಯೋರ್ವ ಪಾಲ್ಗೊಳ್ಳುವವರಿಗೆ ಗರಿಷ್ಠಗೊಳಿಸಿಕೊಳ್ಳುವ ನಿಟ್ಟಿನಲ್ಲಿ ತೆಗೆದುಕೊಳ್ಳುವ ಈ ಪ್ರತಿಯೊಬ್ಬರ ನಿರ್ಧಾರಗಳನ್ನು ಮಾರುಕಟ್ಟೆಯಲ್ಲಿನ ಸ್ಪರ್ಧೆ ಯಶಸ್ವಿಯಾಗಿ ಸಮನ್ವಯಗೊಳಿಸುತ್ತದೆ ಎಂದು ನಂಬುತ್ತಾರೆ. ಹೀಗೆ, ಸಮಾಜಕ್ಕೆ "ಒಳ್ಳೆಯದು" ಎನ್ನುವುದು ಪ್ರತಿಯೊಬ್ಬರೂ ವೈಯಕ್ತಿಕವಾಗಿ ತಮಗೆ ಒಳ್ಳೆಯದು ಎಂದು ಭಾವಿಸುವುದರ ಒಟ್ಟು ಮೊತ್ತ ಎಂಬ ದೃಷ್ಟಿಕೋನವನ್ನು ಅವರು ಒಪ್ಪಿಕೊಳ್ಳುತ್ತಾರೆ. ಅದೇನೇ ಇದ್ದರೂ, ವ್ಯವಸ್ಥೆ ಅಷ್ಟೊಂದು ಪರಿಪೂರ್ಣವಾಗಿಲ್ಲ, ಹಾಗಾಗಿ ಸರ್ಕಾರ ಕೆಲವೊಮ್ಮೆ ಒಂದು ಮಿತಿಯಲ್ಲಿ ಮಧ್ಯಪ್ರವೇಶ ಮಾಡಬೇಕಾಗುತ್ತದೆ ಎಂಬುದನ್ನು ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಗುರುತಿಸುತ್ತಾರೆ.

**ಚಟುವಿಟಿಕೆ**

**ಲಿಂಗಾಧಾರಿತ ಬಡತನ**

**ಭಾಗ:1**

ಅರ್ಥಶಾಸ್ತ್ರದ ತರಗತಿಯಿಂದ ಹೊರಬರುವ ವಿದ್ಯಾರ್ಥಿಗಳು ಲಿಂಗಾಧಾರಿತ ಬಡತನ(feminization of poverty) ಕುರಿತಂತೆ ಬಿಸಿಬಿಸಿ ಚರ್ಚೆಯಲ್ಲಿ ತೊಡಗಿರುತ್ತಾರೆ. ನೀವು ಈ ಕೆಳಗಿನದನ್ನು ಓದಿದ ನಂತರ, ಸಣ್ಣ ತಂಡಗಳಲ್ಲಿ ಜನರು, ಆರ್ಥಿಕ ವ್ಯವಸ್ಥೆ, ಹಾಗೂ ಸಾರ್ವಜನಿಕ ನೀತಿಯನ್ನು ಕುರಿತಂತೆ ಪ್ರತಿಯೊಂದು ದೃಷ್ಟಿಕೋನದಲ್ಲೂ ಸೂಚ್ಯವಾಗಿರುವ ಗೃಹೀತಗಳನ್ನು ಚರ್ಚಿಸಿ. ಪ್ರತಿಯೊಬ್ಬರ ಹೇಳಿಕೆಯಲ್ಲೂ, ನೀತಿಯನ್ನು ರೂಪಿಸುವುದಕ್ಕೆ ಸಾಧ್ಯವಾಗುವಂತಹ ವಿಚಾರವೊಂದನ್ನು ಗುರುತಿಸಿ. ಉದಾಹರಣೆಗೆ, ಮಿಲ್ಟನ್ ಋಣಾತ್ಮಕ ತೆರಿಗೆಯ ಬಳಕೆಯನ್ನು ಸೂಚಿಸುತ್ತಾನೆ. ಈಗ ಚಾಲ್ತಿಯಲ್ಲಿರುವ ವ್ಯವಸ್ಥೆಯ ಮಾದರಿಯಲ್ಲೇ ಕಡಮೆ ವರಮಾನದ ಜನರಿಗೆ ತೆರಿಗೆ ರಿಯಾಯಿತಿ ನೀಡಲು ಸೂಚಿಸುತ್ತಾನೆ. ಇತರ ಹೇಳಿಕೆಗಳಲ್ಲಿ ನೀವು ಯಾವ ನೀತಿಗಳನ್ನು ಕಾಣಬಹುದು?

**ಟೆಡ್ಡಿ:** ಕಲ್ಯಾಣ ಯೋಜನೆಯಡಿಯಲ್ಲಿ ಬರುವ ಮಹಿಳೆಯರು ಮತ್ತು ಅವರ ಮಕ್ಕಳಿಗೆ ನಾವು ಏನು ಮಾಡಬಹುದು? ಕಲ್ಯಾಣ ಯೋಜನೆಯಲ್ಲಿ ಅವರ ಮೂಲಭೂತ ಖರ್ಚುಗಳನ್ನು ಭರಿಸುವುದಕ್ಕೆ ಅಷ್ಟೊಂದು ಕಡಮೆ ಪ್ರಮಾಣದ ಹಣ ವಿನಿಯೋಗಿಸಲಾಗುತ್ತದೆ ಎಂಬುದು ನನಗೆ ತಿಳಿದಿರಲಿಲ್ಲ. ಇಬ್ಬರು ಸಣ್ಣ ಮಕ್ಕಳಿರುವ ಮಹಿಳೆಯೊಬ್ಬಳಿಗೆ ಈ ನಗರದಲ್ಲಿ ತಿಂಗಳಿಗೆ $1000 ಸಿಗುತ್ತದೆ ಎನ್ನುತ್ತಾರೆ ನಮ್ಮ ಪ್ರೊಫೆಸರ್. ಈ ಮೊತ್ತದಲ್ಲಿ ಅವಳು ಮತ್ತು ಅವಳ ಮಕ್ಕಳು ತೀರಾ ಕಳಪೆಯಾದ, ಎರಡು ಕೊಠಡಿಗಳಿರುವ ಒಂದು ಅಪಾರ್ಟ್ಮೆಂಟಿನಲ್ಲಿ ಬ್ರೆಡ್ ಮತ್ತು ಬೀನ್ಸ್ ತಿಂದುಕೊಂಡು, ಮತ್ಯಾರೋ ಬಳಸಿ ಕೊಟ್ಟ ಬಟ್ಟೆಗಳನ್ನು ಧರಿಸಿ, ಬಸ್ಸಿನಲ್ಲಿ ಓಡಾಡುತ್ತ, ಕನಿಷ್ಠ ಫೋನ್ ಸೌಲಭ್ಯ ಬಳಸಿಕೊಂಡು ಬದುಕಬಹುದು ಅಷ್ಟೆ. ತಿಂಗಳ ಕೊನೆಗೆ ಬಿಡಿಗಾಸು ಕೂಡ ಉಳಿಯುವುದಿಲ್ಲ. ಅವಳು ಯೋಗಕ್ಷೇಮಕ್ಕೆಂದು ಪಡೆಯುವ ಚೆಕ್ (welfare check) ಹಾಗೂ ಆಹಾರದ ಕೂಪನ್ (food stamps) ಗಳು (ಸಾಮಾಜಿಕ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಸರ್ಕಾರ ಒದಗಿಸುವ ನೆರವು) $1000 ನ ಮೂರನೆಯ ಎರಡರಷ್ಟು ಮಾತ್ರ ಭರಿಸುತ್ತದೆ.

**ಫಿಲಿಸ್:** ಅಂತಹ ಉದಾರವಾದಿ ಹುಚ್ಚುಮಾತುಗಳಿಗೆ ಮರಳಾಗಬೇಡಿ. ಅದು ಆ ಮಹಿಳೆಯರು ಮಾಡಿಕೊಂಡ ಆಯ್ಕೆ. ಅವರು ಮಕ್ಕಳನ್ನು ಹೆದೆದರೆ ಅದರ ಹೊಣೆಯನ್ನು ಅವರು ಹೊರಬೇಕು. ಅವರ ಗಂಡಂದಿರ ಜೊತೆಗೆ ಬಾಳಬೇಕು, ವಿವಾಹಿತರಾಗಿರಬೇಕು, ಒಳ್ಳೆಯ ತಾಯಿಯಾಗಿರುವುದು ಹೇಗೆ ಎಂಬುದನ್ನು ಕಲಿಯಬೇಕು. ಅವರ ದುಃಸ್ಥಿತಿಗೆ ಅವರೇ ಕಾರಣವಾಗಿರುವ ಈ ಮಹಿಳೆಯರು ಹೊರಗೆ ಹೋಗಿ ಕೆಲಸ ಹುಡುಕಬೇಕು. ಮತ್ತು, ಹೇಗಿದ್ದರೂ, ಅನಾವಶ್ಯಕ ಖರ್ಚನ್ನು ಸೇರಿಸಿ ಹೆಚ್ಚಿಸಿಕೊಂಡಿದ್ದಾರೆ. ಈ ಬಡಜನರಿಗೆ ತಿಂಗಳಿಗೆ $400 ಗಿಂತ ಕಡಮೆ ಬಾಡಿಗೆಯ ಮನೆ ಖಂಡಿತಾ ಸಿಗುತ್ತದೆ ಎಂದು ಪಣ ತೊಡುತ್ತೇನೆ. ಈ ಕಲ್ಯಾಣ ಆಧಾರಿತ ವ್ಯವಸ್ಥೆ ಇವರಿಗೆ ಹೆಚ್ಚೆಚ್ಚು ಮಕ್ಕಳನ್ನು ಮಾಡಿಕೊಳ್ಳುವುದಕ್ಕೆ, ಗಂಡನನ್ನು ಬಿಡುವುದಕ್ಕೆ, ಮತ್ತು ಅವರು ನಮ್ಮ ಬೆವರಿನ ದುಡಿಮೆಯನ್ನು ಅವಲಂಬಿಸಿ ಜೀವನ ನಡೆಸುವಂತೆ ಪ್ರೋತ್ಸಾಹಿಸುತ್ತದೆ. ಈ ವ್ಯವಸ್ಥೆ ನಡೆದುಕೊಂಡು ಹೋಗುವಂತೆ ಬೆಂಬಲಿಸುತ್ತಿರುವುದಾದರೂ ಏನು? ಈ ಎಲ್ಲ ಅಧಿಕಾರಶಾಹಿಗಳು ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುತ್ತಾರೆ! ಅವರ ಫೋನ್ ಬಿಲ್ಲನ್ನು ನಾನು ತೆರಬೇಕು!

**ಹ್ಯೂಯಿ:** ಫಿಲಿಸ್ ನೀನು ತುಂಬಾ ಸಂಕುಚಿತ ಮನಸ್ಸಿನವನು. ಅಷ್ಟೇ ಅಲ್ಲ, ಸಮಸ್ಯೆಯನ್ನು ಸಾಮಾಜಿಕ ಹಾಗೂ ಐತಿಹಾಸಿಕ ಸಂದರ್ಭದಲ್ಲಿ ಇಟ್ಟು ನೋಡಲು ನೀನು ತಯಾರಿಲ್ಲ. ಈ ಮಹಿಳೆಯರ ಮತ್ತು ಮಕ್ಕಳ ಸ್ಥಿತಿಗೆ ಈ ಶತಮಾನದ ಪ್ರಗತಿ ಎಂದು ನಾವು ಏನನ್ನು ಕರೆಯುತ್ತೇವೋ ಅದು ಕಾರಣ. ನಿನ್ನ ಪ್ರಗತಿಗೆ ಕರಿಯರು ಹಾಗೂ ಹಿಸ್ಪ್ಯಾನಿಕ್ ಜನರು ಬೆಲೆ ತೆತ್ತಿದ್ದಾರೆ. ಈ ಜನ ತಮಗಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ ಅಂತ ಕೇಳಲಿಲ್ಲ. ಬಹುಪಾಲು ಜನರಿಗೆ ಇದು ಬೇಕಿಲ್ಲ.  ಇದರಿಂದ ಹೊರಬಂದು ಒಳ್ಳೆಯ ಕೆಲಸ ಪಡೆದುಕೊಳ್ಳಲು ಅವರು ಬಯಸುತ್ತಾರೆ. ಬಂಡವಾಳಶಾಹಿ ವ್ಯವಸ್ಥೆ ಶ್ರೀಮಂತರು ಮತ್ತು ಬಡವರು ಇಬ್ಬರನ್ನೂ ಸೃಷ್ಟಿಸುತ್ತದೆ. ಬಡವರು ಕಲ್ಯಾಣ ಯೋಜನೆಗಾಗಿ ಒತ್ತಾಯ ಮಾಡಲಿಲ್ಲ. ಬಡಜನ ದಂಗೆ ಏಳುವುದನ್ನು ತಪ್ಪಿಸಲು ರಾಜಕಾರಣಿಗಳು ಕಲ್ಯಾಣ ಹಾಗೂ ಇತರ ಎಲ್ಲಾ ಸಾಮಾಜಿಕ ಸುರಕ್ಷಾ ಕಾರ್ಯಕ್ರಮಗಳನ್ನು ಹುಟ್ಟುಹಾಕಿದರು. ಸಮಸ್ಯೆಯೆಂದರೆ ಈ ಕಲ್ಯಾಣ ಕಾರ್ಯಕ್ರಮಗಳು ಎಂದು ನಾವು ಕರೆಯುತ್ತಿರುವ ಕಾರ್ಯಕ್ರಮಗಳಿಗೆ ತಗಲುವ ಖರ್ಚು ತುಂಬಾ ಹೆಚ್ಚುತ್ತಿದೆ ಏಕೆಂದರೆ ಬಡವರ ಶೇಕಡಾವಾರು ಸಂಖ್ಯೆ ಹೆಚ್ಚುತ್ತಿದೆ. ಅದರ ಜೊತೆಗೆ, ಕಡಮೆ

ಕೂಲಿಗೆ ಜನರನ್ನು ಎಲ್ಲಿಂದ ತರುವುದು ಎಂದು ಉದ್ದಿಮೆದಾರರು ಚಿಂತಾಕ್ರಾಂತರಾಗಿದ್ದಾರೆ. ಈ ಮಹಿಳೆಯರು ತಮ್ಮ ಮಕ್ಕಳನ್ನು ಭಾವೀ ಕಾರ್ಮಿಕರಾಗಿ ಬೆಳಸುತ್ತಿಲ್ಲ ಅಂತ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕುಲೀನರು ಚಿಂತಾಕುಲರಾಗಿದ್ದಾರೆ.

**ಮಿಲ್ಟನ್:** ಫಿಲಿಸ್ ಹೇಳುವ ಸಂಗತಿಗಳು ಸರಿ, ಅದರೆ ನಿಜವಾದ ಬಡವರನ್ನು ರಕ್ಷಿಸುವುದಕ್ಕೆ ಸಾಮಾಜಿಕ ಜಾಲದ ಅವಶ್ಯಕತೆ ಇದೆ. ಈ ಬೃಹದಾಕಾರದ ಜನಕಲ್ಯಾಣದ ಅಧಿಕಾರಶಾಹಿಯನ್ನು ಮತ್ತು ಅವಲಂಬನೆಯನ್ನು ಉಳಿಸಿಕೊಂಡು ಹೋಗುವುದರ ಬದಲು ಮಾರುಕಟ್ಟೆ ವ್ಯವಸ್ಥೆಗೆ ತನ್ನ ಕೆಲಸ ನಿರ್ವಹಿಸಲು ಸರ್ಕಾರ ಅವಕಾಶ ಮಾಡಿಕೊಡಬೇಕು. ಈ ಜನರಿಗೆ ಕನಿಷ್ಠ ಅನುಕೂಲ ಮಾಡಿಕೊಡಲು ಆದಾಯ ತೆರಿಗೆ ವ್ಯವಸ್ಥೆಯನ್ನು ಬಳಸಿಕೊಳ್ಳಬೇಕು. ಅವರಿಗೆ ತಾತ್ಕಾಲಿಕವಾಗಿ ಎಷ್ಟು ಅವಶ್ಯಕವೊ ಅಷ್ಟನ್ನು ಕೊಡಬೇಕು, ಆದರೆ ಅವರು ನಿರಂತರವಾಗಿ ಕಲ್ಯಾಣಯೋಜನೆಗಳ ಫಲಾನುಭವಿಗಳಾಗಿರುವುದನ್ನು ಪ್ರೋತ್ಸಾಹಿಸಬಾರದು.

**ಪ್ಯಾಟ್:** ಈ ಮಹಿಳೆಯರಿಗೆ ಋಣಾತ್ಮಕ ಆದಾಯ ತೆರಿಗೆಗಿಂತ ಹೆಚ್ಚಿನದು ಬೇಕು. 1988ರ ಕುಟುಂಬ ಬೆಂಬಲ ಕಾಯ್ದೆ ಕಲ್ಯಾಣ ಸುಧಾರಣೆಯನ್ನು ಸರಿಯಾದ ನಿಟ್ಟಿನಲ್ಲೇ ಪ್ರಾರಂಭಿಸಿದೆ - ಮಹಿಳೆಯರಿಗೆ ಉದ್ಯೋಗದ ತರಬೇತಿ ಪಡೆಯಲು ಹಾಗೂ ಉದ್ಯೋಗವನ್ನು ಪಡೆಯಲು ಪ್ರೋತ್ಸಾಹಿಸುತ್ತಿದೆ. ಆದರೆ ಅದು ಅರ್ಧ ಪ್ರಯತ್ನವಷ್ಟೇ. ಆ ಮಹಿಳೆಯರಿಗೆ ನಿಜವಾದ ತರಬೇತಿ, ಒಳ್ಳೆಯ ಆದಾಯ ಬರುವ ಕೆಲಸಗಳು, ಹಾಗೂ ಅವರ ಮಕ್ಕಳು ಶಾಲೆಗಳಲ್ಲಿ ಯಶಸ್ವಿಯಾಗಲು ನೆರವಾಗುವಂತೆ ಒಳ್ಳೆಯ, ರಿಯಾಯಿತಿಯ ಮಕ್ಕಳ ಆರೈಕೆಯ ಬೆಂಬಲದ ಅಗತ್ಯವಿದೆ. 1988ರ ಕಾಯ್ದೆಯಲ್ಲಿ ಮಕ್ಕಳ ಬೆಂಬಲಕ್ಕೆ ಒತ್ತಾಯಿಸಿರುವುದು ಸಹ ಒಳ್ಳೆಯದು; ತಂದೆ ಅವರೊಂದಿಗೆ ಬದುಕದಿದ್ದರೂ ಮಕ್ಕಳನ್ನು ಬೆಳೆಸುವುದಕ್ಕೆ ಹಣಕೊಡಬೇಕು. ಇಂದು ಕೌಟುಂಬಿಕ ಜೀವನದಲ್ಲಿ ತುಂಬಾ ಒತ್ತಡ ಇದೆ. ಮತ್ತೆ ಸ್ಥಿರತೆಯನ್ನು ತರುವುದಕ್ಕೆ ಇರುವ ಒಂದೇ ದಾರಿ ಎಂದರೆ ತಂದೆ ತಾಯಂದಿರಿಗೆ ಮತ್ತು ಮಕ್ಕಳಿಗೆ ನೆರವಾಗಲು ಅಗತ್ಯವಾದ ಬೆಂಬಲವನ್ನು ಒದಗಿಸುವುದು. ನಾವು ಇದನ್ನು *'ಎಲ್ಲಾ'* ಕುಟುಂಬಗಳಿಗೂ ಮಾಡುವ ಅಗತ್ಯವಿದೆ.

**ಭಾಗ: 2**

*'ಲಿಂಗಾಧಾರಿತ ಬಡತನ'* ಎಂಬ ಕಲ್ಪನೆಯನ್ನು ಡಯಾನ ಪಿಯರ್ಸ್ (Diana Pearce) ಬಡತನ ರೇಖೆಯಿಂದ ಕೆಳಗಿರುವವರ ಶೇಕಡಾವಾರು ಪ್ರಮಾಣದಲ್ಲಿ ಅತಿ ಹೆಚ್ಚಿನವರು ಮಹಿಳೆಯರು ಮತ್ತು ಅವರ ಮಕ್ಕಳಿದ್ದರು ಎಂಬುದನ್ನು ಎತ್ತಿತೋರಿಸಲು ಹಲವು ವರ್ಷಗಳ ಹಿಂದೆ ಪರಿಚಯಿಸಿದರು. ಅರ್ಥಶಾಸ್ತ್ರಜ್ಞರ ಚಿಂತನೆಯಲ್ಲಿ ಇರುವ ವೈವಿಧ್ಯತೆಯನ್ನು ತೋರಿಸುವ ಉದ್ದೇಶದಿಂದ, ಈ ಸಮಸ್ಯೆಗೆ ಸಂಬಂಧಿಸಿದಂತೆ ಮೂರು ವಿವರಣೆಗಳನ್ನು ಇಲ್ಲಿ ಸ್ಥೂಲವಾಗಿ ಸಂಗ್ರಹಿಸಲಾಗಿದ್ದು ಅವು ಪ್ರತಿಯೊಂದು ವಿವರಣೆಯೂ ಒಂದು ವಿಭಿನ್ನ ಚಿಂತನಾ ಪಂಥವನ್ನು ಪ್ರತಿನಿಧಿಸುತ್ತದೆ.

**ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು** ಲಿಂಗಾಧಾರಿತ ಬಡತನವನ್ನು ಮಹಿಳೆಯರನ್ನು ಪರಿಣಾಮಿಸುವ ಹೊಸ ಕೂಲಿ ಮಾರುಕಟ್ಟೆಯಲ್ಲಿ ಪೂರೈಕೆ ಹಾಗೂ ಬೇಡಿಕೆಯ ಪರಿಸ್ಥಿತಿಯನ್ನು ಆಧರಿಸಿದ ಬದಲಾಗುತ್ತಿರುವ ಆದ್ಯತೆಯ ಪರಿಣಾಮ ಎಂಬುದಾಗಿ ವಿವರಿಸುತ್ತಾರೆ. ಮೊದಲನೆಯದಾಗಿ, ಅವರು ಮನೆಯಲ್ಲಿ ಉಳಿಯುವುದು ತುಂಬಾ ದುಬಾರಿಯಾದ್ದರಿಂದ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಕೆಲಸಕ್ಕೆ ಬರುತ್ತಿದ್ದಾರೆ. ನೈಜ ಕೂಲಿ ಹೆಚ್ಚಾದಂತೆ ಮಹಿಳೆಯರು ಕೂಲಿಗಾಗಿ ಕೆಲಸ ಮಾಡಲು ಮತ್ತು ತಮ್ಮ ಕುಟುಂಬಕ್ಕೆ ಒದಗಿಸುತ್ತಿದ್ದ ಸೇವೆಗಳನ್ನು ಕೊಳ್ಳಲು ಬಯಸುತ್ತಾರೆ. ಎರಡನೆಯದಾಗಿ, ವಿಚ್ಛೇದನಗಳ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಮನೆಯನ್ನು ನಿರ್ವಹಿಸುತ್ತಿರುವ ಒಂಟಿ ತಾಯಂದಿರ ಶೇಕಡಾವಾರು ಹೆಚ್ಚುತ್ತಿದ್ದು ಅವರು ಕೆಲಸ ಮಾಡುವುದು ಅನಿವಾರ್ಯವಾಗಿದೆ. ಮೂರನೆಯದಾಗಿ, ಈ ಮಹಿಳೆಯರಿಗೆ ಹೆಚ್ಚಿನ ತರಬೇತಿ ಇಲ್ಲದ ಕಾರಣ ಹಾಗೂ ಸಾಂಪ್ರದಾಯಿಕವಾಗಿ ಹೆಂಗಸರ ಕೆಲಸ ಎಂದು ನಿರ್ಧಾರವಾಗಿರುವ ಕೆಲಸಗಳನ್ನೇ ಮಾಡಬಯಸುವ ಕಾರಣ ಅವರು ಕಡಮೆ ಕೂಲಿಯ ಕೆಲಸಗಳನ್ನು ಕೈಗೊಳ್ಳುತ್ತಾರೆ, ಅರೆಕಾಲಿಕ ಕೆಲಸ ಮಾಡುತ್ತಾರೆ. ಅಲ್ಲದೆ, ಅವರು ಪುರುಷರಷ್ಟು ಸಂಬಳದ ಕೆಲಸಕ್ಕೆ ಬದ್ಧರಾಗಿರುವುದಿಲ್ಲ (ಅವರು ತಮ್ಮ ವೈಯಕ್ತಿಕ ಬದುಕಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ), ಹಾಗಾಗಿ ಅವರು ಕೆಲಸ ಬದಲಾಯಿಸುವುದಕ್ಕಾಗಲಿ, ಬೇರೆ ಕಡೆಗೆ ಹೋಗುವುದಕ್ಕಾಗಲಿ, ಅಥವಾ ಬಡ್ತಿಯನ್ನು ಸ್ವೀಕರಿಸುವುದನ್ನಾಗಲಿ ಬಯಸುವುದಿಲ್ಲ. ನಾಲ್ಕನೆಯದಾಗಿ, ಮಕ್ಕಳನ್ನು ಹೆರುವುದಕ್ಕೆ ಅಥವಾ ನೋಡಿಕೊಳ್ಳುವುದಕ್ಕೆ ಒಂಟಿ

ತಾಯಂದಿರಿಗೆ ಸಾರ್ವಜನಿಕ ನೆರವನ್ನು ಒದಗಿಸುವಂತ ಸರ್ಕಾರದ ಕಲ್ಯಾಣ ಯೋಜನೆಗಳು ಅವರು ಕೂಲಿಗಾಗಿ ಕೆಲಸ ಮಾಡುವ ಉತ್ಸಾಹವನ್ನು ಕಡಮೆಮಾಡುತ್ತದೆ. ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಬಡ ಮಹಿಳೆಯರಿಗೆ ಒಂದಿಷ್ಟು ಸಾಮಾಜಿಕ ಸುರಕ್ಷತೆಯ ಅವಶ್ಯಕತೆಯಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ, ಆದರೆ ತಂದೆ ತಾಯಿ ಇಬ್ಬರೂ ತಮ್ಮ ಮಕ್ಕಳ ಪಾಲನೆಯ ಖರ್ಚನ್ನು ಅವರೇ ಭರಿಸುವಂತೆ ಪ್ರೇರೇಪಿಸುವ ನೀತಿಗಳನ್ನು ಅವರು ರೂಪಿಸುವರು.

**ಸಾಂಸ್ಥಿಕ ಅರ್ಥಶಾಸ್ತ್ರಜ್ಞರು** ಲಿಂಗಾಧಾರಿತ ಬಡತನವನ್ನು ಬದಲಾಗುತ್ತಿರುವ ತಂತ್ರಜ್ಞಾನ ಹಾಗೂ ಸಮಾಜದ ಮೌಲ್ಯಗಳನ್ನು ಆಧರಿಸಿದ ಒಂದು ವಿಕಾಸನವಾದೀ, ಐತಿಹಾಸಿಕ ಸಂಗತಿಯನ್ನಾಗಿ ವಿವರಿಸುತ್ತಾರೆ. ಒಂದು ಕಡೆ ಮಹಿಳೆಯರು ಸಂಬಳದ ಕೆಲಸದ ಜಗತ್ತಿನಲ್ಲಿ ಪಾಲ್ಗೊಳ್ಳಲು ಬಯಸುತ್ತಾರೆ ಹಾಗೂ ಮಧ್ಯಮವರ್ಗದ ಭೌತಿಕ ಜೀವನಮಟ್ಟವನ್ನು ಅವರು ಅಪೇಕ್ಷಿಸುತ್ತಾರೆ; ಇನ್ನೊಂದು ಕಡೆ ಅವರಿಗೆ ಕೌಟುಂಬಿಕ ಜೀವನ ಮತ್ತು ಮಹಿಳೆಯರ ಹಕ್ಕುಗಳನ್ನು  ಬಯಸುತ್ತಾರೆ. ಈ ಸಮಾಜದ ಒತ್ತಡಗಳು ಪ್ರತಿ ಮಹಿಳೆ ಮತ್ತು ಅವಳ ಮಕ್ಕಳ ಮೇಲೆ ವಿವಿಧ ರೀತಿಯಲ್ಲಿ ಪರಿಣಾಮ ಬೀರುತ್ತವೆ. ಅದರ ಜೊತೆಗೆ ಅಮೇರಿಕಾ ಸಂಸ್ಥಾನದಲ್ಲಿ ವರ್ಣಾಧಾರಿತವಾದ ಹಲವು ಉಪಸಂಸ್ಕೃತಿಗಳಿವೆ, ಮತ್ತು ಆ ಉಪಸಂಸ್ಕೃತಿಯ ಮೌಲ್ಯಗಳು ಹಾಗೂ ಸಾಮೂಹಿಕ ಸಂಸ್ಕೃತಿಯ ಮೌಲ್ಯಗಳ ನಡುವೆ ಘರ್ಷಣೆಗಳಾಗುತ್ತವೆ. ಬಡತನ ಎನ್ನುವುದು ಸಾಮಾಜಿಕ ಕಾರಣಗಳಿಂದ ಆಗುವಂತದ್ದಾಗಿದ್ದು ಅದು ಬಡವರ ತಪ್ಪಲ್ಲ, ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳು ಅಸಮರ್ಪಕವಾಗಿರುವುದರಿಂದ ಬಡಕುಟುಂಬಗಳು ಬಡವರಾಗುತ್ತಿದ್ದಾರೆ. ಕೂಲಿ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ತಾರತಮ್ಯದಿಂದಾಗಿ ಅಶಿಕ್ಷಿತ ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಕೇವಲ ಕಡಮೆ ಕೂಲಿಯ ಕೆಲಸ ಮಾತ್ರವೇ ಸಿಗುವುದು. ಮಹಿಳೆಯರ ಕೆಲಸಕ್ಕೆ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ನುಗ್ಗುತ್ತಿರುವುದರಿಂದ ಈ ಉದ್ಯೋಗಗಳಲ್ಲಿ ಕೂಲಿಯು ಇನ್ನೂ ಕಡಮೆಯಾಗುತ್ತಿದೆ. ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಬಡವರಿಗೆ ಹೆಚ್ಚಿನ ಸಾಮಾಜಿಕ ಕಲ್ಯಾಣ ಪಾವತಿಯನ್ನು ಮಾಡುವುದಕ್ಕೆ ಹೆಚ್ಚು ಒಲವು ತೋರಿಸುತ್ತಾರೆ. ಕಡಮೆ ವರಮಾನದ ಮಹಿಳೆಯರಿಗೆ ಶಿಕ್ಷಣ ಹಾಗೂ ಕೆಲಸದ ಅವಕಾಶಗಳನ್ನು, ಮತ್ತು ಈ ಕುಟುಂಬಗಳಿಗೆ ಆರೋಗ್ಯ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಸುಧಾರಿಸುವ ದೃಷ್ಟಿಯಿಂದ ಸರ್ಕಾರಿ ಯೋಜನೆಗಳ ಸಮಷ್ಟಿಯೊಂದನ್ನು ರೂಪಿಸಬೇಕೆಂದು ಅವರು ವಾದಿಸುತ್ತಾರೆ.



**ಚಿತ್ರ 8.2:** ಕಾರ್ಯಪಡೆಯ ಪ್ರತ್ಯೇಕೀಕರಣ ನೀತಿಯ ಕಾರಣ
ಇನ್ನೂ ಸಹ ಮಹಿಳೆಯರ ವೇತನ ಪುರುಷರ ವೇತನಕ್ಕಿಂತ ಕಡಮೆಯಾಗಿಯೇ ಇದೆ

**ಮಾರ್ಕ್ಸವಾದಿ ಅರ್ಥಶಾಸ್ತ್ರಜ್ಞರು** ಕೂಡ ಲಿಂಗಾಧಾರಿತ ದಾರಿದ್ರ್ಯವನ್ನು ಒಂದು ಐತಿಹಾಸಿಕ ಪ್ರಕ್ರಿಯೆಯಾಗಿಯೇ ವಿವರಿಸುತ್ತಾರೆ.  ಆದಾಗ್ಯೂ, ಅವರು ವರ್ಗ ವಿಶ್ಲೇಷಣೆಗೆ ಹೆಚ್ಚು ಒತ್ತು ಕೊಡುತ್ತಾ ಈ ಶತಮಾನದಲ್ಲಿ ಮಹಿಳೆಯರು ಕಾರ್ಮಿಕ ಪಡೆಯನ್ನು ಸೇರುತ್ತಿರುವ ಬೆಳವಣಿಗೆಯನ್ನು ಬಂಡವಾಳಶಾಹಿ ಬೆಳವಣಿಗೆಯ ಅಗತ್ಯಗಳಿಗೆ ಸಂಬಂಧಿಸುತ್ತಾರೆ, ಮತ್ತು ಭಾಗಗಳಾಗಿ ವಿಭಜನೆಗೊಂಡಿರುವಂತಹ ಕಾರ್ಮಿಕ ಮಾರುಕಟ್ಟೆಯಲ್ಲಿನ ಪರಿಸ್ಥಿತಿಗಳನ್ನು ವರ್ಗ ಸಂಘರ್ಷಕ್ಕೆ

ಬಂಡವಾಳಶಾಹಿಗಳ ಪ್ರತಿಕ್ರಿಯೆ ಎಂಬುದಾಗಿ ವಿವರಿಸುತ್ತಾರೆ. ಬಂಡವಾಳಶಾಹಿ ವ್ಯವಸ್ಥೆ ಬಂಡವಾಳದ ನಿರಂತರ ಶೇಖರಣೆಯ ಮೇಲೆ ಅವಲಂಬಿತವಾಗಿದ್ದು ಅದನ್ನು ಬಂಡವಾಳಶಾಹಿಗಳು ನಿಯಂತ್ರಿಸುತ್ತಾರೆ ಎಂದು ಮಾರ್ಕ್ಸ್‌ವಾದಿಗಳು ವಾದಿಸುತ್ತಾರೆ. ತತ್ಪರಿಣಾಮವಾಗಿ, ಬಂಡವಾಳದ ಶೇಖರಣೆ ಲಾಭದ ಮೇಲೆ ಆಧಾರಿತವಾಗಿರುತ್ತದೆ ಮತ್ತು ಆದ್ದರಿಂದ ಅದು ಅಗ್ಗದ ಕೂಲಿಯ ಪೂರೈಕೆಯನ್ನು ಬೇಡುತ್ತದೆ. ತಮ್ಮ ಲಾಭಗಳನ್ನು ಹೂಡಲು ಹೊಸ ದಾರಿಗಳನ್ನು ಹುಡುಕುವ ಪ್ರಯತ್ನದಲ್ಲಿ, ಬಂಡವಾಳಶಾಹಿಗಳು ನಿರಂತರವಾಗಿ ಹೊಸ ಸರಕು ಸೇವೆಗಳನ್ನು ಪರಿಚಯಿಸುತ್ತಾ ಗೃಹ ಉತ್ಪಾದನೆಯನ್ನು ದುರ್ಬಲಗೊಳಿಸುತ್ತಾರೆ. ತತ್ಪರಿಣಾಮವಾಗಿ, ಇದು ಅಗ್ಗದ ಕೂಲಿಯಾಗಿ (ಅವರು ಇನ್ನೂ ತಮ್ಮ ಕುಟುಂಬದ ಜವಾಬ್ದಾರಿಗಳನ್ನು ಮುಖ್ಯವೆಂದು ಭಾವಿಸುವ ಕಾರಣ) ಮಹಿಳೆಯರನ್ನು ಕೂಲಿ ಮಾರುಕಟ್ಟೆಯನ್ನು ಪ್ರವೇಶಿಸಲು "ಬಿಡುಗಡೆಗೊಳಿಸುತ್ತದೆ" ಮತ್ತು ಹೊಸ ಉತ್ಪನ್ನಗಳನ್ನು ಕೊಂಡುಕೊಳ್ಳುವುದಕ್ಕೆ ಅವರನ್ನು ಹಾಗೆ ಮಾಡಲು ಪ್ರೇರೇಪಿಸುತ್ತದೆ. ಅಷ್ಟೇ ಅಲ್ಲದೆ, ಹಿಂದಿನ ವರ್ಗ ಸಂಘರ್ಷಗಳಿಂದಾಗಿ ಕೂಲಿ ಮಾರುಕಟ್ಟೆ ವಿಭಜಿತವಾಗಿದೆ. ಕಾರ್ಮಿಕರ ಮಾರುಕಟ್ಟೆಗಳ ಕಾರ್ಯಾಚರಣೆಯನ್ನು ಕುರಿತಂತೆ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆ ಸಾಂಸ್ಥಿಕ ಅರ್ಥಶಾಸ್ತ್ರಜ್ಞರ ನಿಲುವನ್ನೇ ಹೋಲುತ್ತದೆ. ಮಾರ್ಕ್ಸ್‌ವಾದಿಗಳು ಅವರ ಬಲವನ್ನು ಹೆಚ್ಚಿಸಲು ಮತ್ತು ಅವರ ಗುರಿಯನ್ನು ಯಶಸ್ವಿಯಾಗಿ ಸಾಧಿಸಲು ಮಹಿಳಾ ಗುಂಪುಗಳು ಮತ್ತು ಕಾರ್ಮಿಕ ಸಂಘಟನೆಗಳೊಂದಿಗೆ ಸೇರುವರು ಮತ್ತು  ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸಲು ಪ್ರಯತ್ನಿಸಿರುವರು.

**ಪ್ರಶ್ನೆಗಳು**

ನವ ಸಾಂಪ್ರದಾಯಿಕ, ಸಾಂಸ್ಥಿಕ ಹಾಗೂ ಮಾರ್ಕ್ಸ್‌ವಾದಿ ದೃಷ್ಟಿಕೋನಗಳ ದತ್ತ ಈ ವಿಶಿಷ್ಟ ಪ್ರತಿಕ್ರಿಯೆಗಳನ್ನು ಆಧರಿಸಿ ಭಾಗ 1 ರಲ್ಲಿ ನೀಡಿರುವ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಮೇಲಿನ ಮೂರು ಅರ್ಥಶಾಸ್ತ್ರದ ಚಿಂತನಾ ಪಂಥಗಳಲ್ಲಿ ಯಾವುದಾದರೂ ಒಂದಕ್ಕೆ ಹೊಂದಿಸಲು ಪ್ರಯತ್ನಿಸಿ.

ಸಣ್ಣ ಸಣ್ಣ ತಂಡಗಳಲ್ಲಿ ಸಂಗತಿಗಳನ್ನು, ವ್ಯಾಖ್ಯೆಗಳನ್ನು, ವಾಸ್ತವಾಂಶಗಳ ಅರ್ಥವಿವರಣೆಗಳನ್ನು,  ಮತ್ತು ಮೌಲ್ಯಗಳನ್ನು ಕುರಿತಂತೆ ಅವರ ದೃಷ್ಟಿಕೋನದಲ್ಲಿರುವ ವ್ಯತ್ಯಾಸವನ್ನು ಗುರುತಿಸುವ ಮೂಲಕ ವಿಭಿನ್ನ ನಿಲುವುಗಳನ್ನು ಹೋಲಿಸಿ. ಈ ವಿಭಿನ್ನ ನಿಲುವುಗಳ ಶ್ರೇಷ್ಠತೆಗಳನ್ನು ಚರ್ಚಿಸಿ. ಈ ಪ್ರತಿಯೊಂದು ನಿಲುವಿನಿಂದ ಯಾವ ವಿವರಣೆಯ ಭಾಗಗಳು ನಿಮಗೆ ಹೆಚ್ಚು ಸಕಾರಣ ಎಂದು ಅನಿಸುತ್ತದೆ ಎಂಬುದನ್ನು ನಿರ್ಧರಿಸಿ.

ನಿಮ್ಮ ನಿಲುವನ್ನು ಕುರಿತಂತೆ ಒಂದು ಹೇಳಿಕೆಯನ್ನು ಬರೆಯಿರಿ ಮತ್ತು ಅದನ್ನು ನೂರು ಅಥವಾ ಅದಕ್ಕಿಂತ ಕಡಮೆ ಪದಗಳಲ್ಲಿ ಸಮರ್ಥಿಸಿ.

## ಬಂಡವಾಳಶಾಹಿಯ ವಿಕಾಸ ಮತ್ತು ಅರ್ಥಶಾಸ್ತ್ರ

ಅರ್ಥಶಾಸ್ತ್ರ ಅಥವಾ ಇನ್ನೂ ನಿಖರವಾಗಿ ಹೇಳಬೇಕೆಂದರೆ ರಾಜಕೀಯ ಅರ್ಥನೀತಿ ಎನ್ನುವುದು ಬಂಡವಾಳಶಾಹಿ ಬೆಳವಣಿಗೆಯ ಹಲವು ಆವಿಷ್ಕಾರಗಳಲ್ಲಿ ಒಂದು; 17ನೆಯ ಶತಮಾನಕ್ಕಿಂತ ಹಿಂದೆ ಆರ್ಥಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲೇಬೇಕು ಎಂಬ ತುರ್ತು ಇರಲೇ ಇಲ್ಲ. ಮಧ್ಯಕಾಲೀನ ಯುಗದವರೆಗೂ ಯುರೋಪಿನಲ್ಲಿ ಕೃಷಿಯೇ ಅತ್ಯಂತ ಪ್ರಮುಖ ಆರ್ಥಿಕ ಚಟುವಟಿಕೆಯಾಗಿತ್ತು ಮತ್ತು ಅದನ್ನು ಸ್ಥಳೀಯವಾಗಿ ಊಳಿಗಮಾನ್ಯದ ಉಂಬಳಿಯ ಮೂಲಕ ವ್ಯವಸ್ಥಿತಗೊಳಿಸಲಾಗಿತ್ತು. ಆದಾಗ್ಯೂ, 12 ಮತ್ತು 13ನೆಯ ಶತಮಾನದಲ್ಲಿ ಕ್ರೈಸ್ತ ಧಾರ್ಮಿಕ ಯುದ್ಧಗಳಿಂದ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಅಪಾರವಾಗಿ ಹೆಚ್ಚಿತು. ಪೂರ್ವದಿಂದ ವೆನಿಸ್ ಮತ್ತು ಜಿನೋವಾಕ್ಕೆ ಹರಿದು ಬಂದ ಸರಕುಗಳು ಇಡೀ ಯುರೋಪಿನಲ್ಲಿ ಚಲಾವಣೆಯಾದವು. ಇದು ಸ್ಥಳೀಯ ಆಡಳಿತದ ಅಭಿವೃದ್ಧಿಗೆ ಮತ್ತು ಇನ್ನೂ ಹೆಚ್ಚಿನ ವ್ಯಾಪಾರಕ್ಕೆ ಉತ್ತೇಜನ ನೀಡಿತು. ಅದು ಅರ್ಥಶಾಸ್ತ್ರವನ್ನು ಕುರಿತು ಚರ್ಚಿಸಲು ಚರ್ಚಿನ ಪಾದ್ರಿಗಳನ್ನು ಪ್ರೇರೇಪಿಸಿತು ಮತ್ತು ಅವರಲ್ಲಿ ಅತ್ಯಂತ ಪ್ರಖ್ಯಾತ ವ್ಯಕ್ತಿ ಸಂತ ಥಾಮಸ್ ಅಕ್ವೈನಸ್ (Saint Thomas Aquinas) ಆಗಿದ್ದನು. ಆತ 'ಜಸ್ಟ್ ಪ್ರೈಸ್' ಅಂದರೆ

ನ್ಯಾಯಯುತ ಬೆಲೆ ಸಿದ್ಧಾಂತವನ್ನು ರೂಪಿಸಿದನು. ಅದು ಎಲ್ಲರನ್ನು ಅವನ ಅಥವಾ ಅವಳ ಜೀವನಮಟ್ಟವನ್ನು ಕಾಪಾಡಿಕೊಳ್ಳಲು ರೂಪಿಸಿದ ಒಂದು ಮೌಲ್ಯದ ವ್ಯವಸ್ಥೆ. ಈ ನ್ಯಾಯಯುತವಾದ ಬೆಲೆ ಕೇವಲ ದುಡಿಮೆ ಮತ್ತು ಇತರ ಉತ್ಪಾದನಾ ವೆಚ್ಚಗಳನ್ನು ಮಾತ್ರ ಒಳಗೊಂಡಿತ್ತು.

ವ್ಯಾಪಾರವು ಬೆಳೆದಂತೆಲ್ಲಾ ಅಧಿಕಾರ ಕೇಂದ್ರವು ಚರ್ಚಿನಿಂದ ನಾಗರಿಕ ಸಮಾಜದ ಅಧಿಕಾರಿಗಳ ಕೈಗೆ ಹೋಯಿತು. ಹದಿನಾರು ಮತ್ತು ಹದಿನೇಳನೆಯ ಶತಮಾನದ ಹೊತ್ತಿಗೆ ಮಾರುಕಟ್ಟೆ ಪಟ್ಟಣಗಳ ಸುತ್ತ ರೂಪುಗೊಂಡಿದ್ದ ಒಂದು ಆರ್ಥಿಕ ವ್ಯವಸ್ಥೆ ಬೆಳೆದಿತ್ತು ಮತ್ತು ಅದು ಒಂದಿಷ್ಟು ವಿವಾದಗಳನ್ನು ಹುಟ್ಟುಹಾಕುವಷ್ಟು ಜಟಿಲವಾಗಿತ್ತು. ವಿದೇಶೀ ವ್ಯಾಪಾರದಲ್ಲಿ ಏಕಸ್ವಾಮ್ಯತೆಯಿಂದ ವ್ಯಾಪಾರೀ ಬಂಡವಾಳಶಾಹಿ ಉದ್ದಿಮೆ ಮತ್ತು ಹೆಚ್ಚೆಚ್ಚು ಪ್ರಬಲವಾಗುತ್ತಿದ್ದ ಕೇಂದ್ರ ಸರ್ಕಾರಗಳು ಲಾಭ ಪಡೆದುಕೊಂಡವು. ಅವರು ಸ್ಥಳೀಯ ಉತ್ಪಾದಕರ ಏಕಸ್ವಾಮ್ಯಗಳು ಮತ್ತು ಬಾಹ್ಯ ಸ್ಪರ್ಧೆಯಿಂದ ರಕ್ಷಣೆ ಪಡೆದಿರುವ ಶ್ರೇಷ್ಠ ಕುಶಲಕರ್ಮಿಗಳ ಸ್ವತಂತ್ರ ವೃತ್ತಿ ಸಂಘಗಳ ಮೂಲಕ ದೇಶೀಯ ಉತ್ಪಾದನೆಯನ್ನೂ ಸಹ ಉತ್ತೇಜಿಸಿದರು. ಈ ವೃತ್ತಿ ಸಂಘಗಳು ಕುಶಲಕರ್ಮಿ ವೃತ್ತಿಯ ರಹಸ್ಯಗಳನ್ನು ಮತ್ತು ಸ್ಥಳೀಯ ಮಾರುಕಟ್ಟೆಗಳೆರಡನ್ನೂ ನಿಯಂತ್ರಿಸುತ್ತಿದ್ದವು. ಕರಪತ್ರಗಳ ಮೂಲಕ ತಮ್ಮ ವಿಶೇಷ ಆಸಕ್ತಿಯ ವಿವಿಧ ನಿಲುವುಗಳನ್ನು ಚರ್ಚಿಸುವುದರಿಂದ ಆರ್ಥಿಕ ವಿಚಾರಗಳ ಸಾರ್ವಜನಿಕ ಚರ್ಚೆ ಸರ್ವೇಸಾಮಾನ್ಯವಾಯಿತು. ಆದರೆ ಅವರು ಸಾಮಾನ್ಯವಾಗಿ ದೇಶೀ ಉತ್ಪಾದನೆಯನ್ನು ವಿದೇಶೀ ಸ್ಪರ್ಧೆಯಿಂದ ರಕ್ಷಿಸುವ ಮತ್ತು ರಫ್ತಿಗೆ ಉತ್ತೇಜನ ನೀಡುವ ಅನುಕೂಲಕರ ಆಮದು ರಫ್ತುಗಳ ನಡುವಿನ ಸಮತೋಲನವನ್ನು (favourable balance of trade) ಬೆಂಬಲಿಸುವ ವಾಣಿಜ್ಯವಾದಿ ನೀತಿಗಳನ್ನು ಪ್ರತಿಪಾದಿಸುತ್ತಿದ್ದರು.

ಹೀಗೆ, ಊಳಿಗಮಾನ್ಯ ಸಮಾಜದ ಕೃಷಿಯ, ಸ್ವಂತ ತಮ್ಮ ಬದುಕುಳಿಯುವಿಕೆಗೆ ಮಾತ್ರ ಸಾಕಾಗುವಷ್ಟು ಉತ್ಪಾದಿಸುವ ಸ್ಥಳೀಯ ಆರ್ಥಿಕ ವ್ಯವಸ್ಥೆಗಳು ಮೊದಲು ನಿಧಾನವಾಗಿ ತದನಂತರ ತ್ವರಿತ ಗತಿಯಲ್ಲಿ ವಾಣಿಜ್ಯ ಆಸಕ್ತಿಗಳೇ ಪ್ರಬಲವಾಗಿದ್ದ ಬೂರ್ಝ್ವಾ ನಗರ ಸಮಾಜಗಳಿಗೆ ದಾರಿ ಮಾಡಿಕೊಟ್ಟವು. 1750ರ ಹೊತ್ತಿಗೆ ಮೊಟ್ಟಮೊದಲ ಬಂಡವಾಳಶಾಹಿ ರಾಷ್ಟ್ರವಾದ ಗ್ರೇಟ್ ಬ್ರಿಟನ್ನಿನಲ್ಲಿ ವಾಣಿಜ್ಯ ಬಂಡವಾಳಶಾಹಿಯಿಂದ ಕೈಗಾರಿಕಾ ಬಂಡವಾಳಶಾಹಿಗೆ ಪರಿವರ್ತನೆಯಾಗುವುದಕ್ಕೆ ಕಾಲ ಪಕ್ವವಾಗಿತ್ತು. ಬ್ರಿಟನ್ನಿನಲ್ಲಿ ಅಂತರಾಷ್ಟ್ರೀಯ ವಾಣಿಜ್ಯ ಕೇಂದ್ರವಾಗಿದ್ದ ಲಂಡನ್ ಸೇರಿದಂತೆ ಚೆನ್ನಾಗಿ ಅಭಿವೃದ್ಧಿಗೊಂಡಿದ್ದ ಸಮೃದ್ಧ ವಾಣಿಜ್ಯ ಕೇಂದ್ರಗಳ ಜಾಲವೇ ಇತ್ತು. ಅದು ಚುರುಕು ವಿದೇಶಿ ವ್ಯಾಪಾರ ಹಾಗೂ ಒಂದು ವಸಾಹತು ಸಾಮ್ರಾಜ್ಯದಿಂದ, ದೊಡ್ಡ ದೇಶೀ ಮಾರುಕಟ್ಟೆಯಿಂದ, ಮತ್ತು ಬೇಲಿ ನಿರ್ಮಿಸುವ ಯೋಜನೆ (enclosure movement - ಸಾರ್ವಜನಿಕ ಭೂಮಿ ಮತ್ತು ಗೋಮಾಳಗಳನ್ನು ಖಾಸಗಿ ಆಸ್ತಿಮಾಡಿಕೊಳ್ಳಲು ಹೂಡಿದ ಯೋಜನೆ) ಯಿಂದ ತಮ್ಮ ಜಮೀನುಗಳಿಂದ ಹೊರದೂಡಲ್ಪಟ್ಟು ಕೂಲಿ ಕೆಲಸಗಳನ್ನು ಹುಡುಕಿಕೊಂಡು ನಗರಗಳಿಗೆ ತಂಡತಂಡವಾಗಿ ಬಂದ ಕಾರ್ಮಿಕ ಶ್ರಮ ಪಡೆಯಿಂದ ಲಾಭ ಪಡೆಯಿತು.

ಆಡಂ ಸ್ಮಿತ್ (Adam Smith), 1776ರ ಹೊತ್ತಿಗೆ, ತನ್ನ ಪ್ರಖ್ಯಾತ ಕೃತಿ *'ವೆಲ್ತ್ ಆಫ್ ನೇಷನ್ಸ್ (Wealth of Nations)'* ರಚಿಸಿದಾಗ ಅವನಿಗೆ ಹೊಸ ಯುಗವೊಂದನ್ನು ಮುನ್ನೋಡಲು ಸಾಧ್ಯವಾಯಿತು. ಅವನು ಅದರಲ್ಲಿ ಕೈಗಾರಿಕಾ ಬಂಡವಾಳಶಾಹಿಯ ಆರಂಭವನ್ನು ಮತ್ತು ಈ ಹೊಸ ವ್ಯವಸ್ಥೆಯು ಸಾಧ್ಯವಾಗಿಸಬಹುದಾದ ಅಪಾರ ಬೆಳವಣಿಗೆ ಮತ್ತು ಸಂಪತ್ತನ್ನು ಹೊಂದಲು ಇದ್ದ ಸಂಭಾವನೀಯತೆಗಳನ್ನು ವಿವರಿಸಿದನು. ವಾಣಿಜ್ಯವಾದಿ ಯುಗದಲ್ಲಿ ವರ್ತಕರು ವ್ಯಾಪಾರಕ್ಕಿದ್ದ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಂಡು ಕಡಮೆ ಬೆಲೆಗೆ ಸರಕುಗಳನ್ನು ಕೊಂಡು, ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಾ ಹೇರಳವಾಗಿ ಲಾಭಮಾಡಿಕೊಂಡರು, ಸಂಪತ್ತನ್ನು ಶೇಖರಿಸಿಕೊಂಡರು. ಆದರೆ ಆಡಂ ಸ್ಮಿತ್ ಹೊಸ ಮತ್ತು ಬೆಳೆಯುತ್ತಿದ್ದ ವಿದ್ಯಮಾನವಾದ *'ಕೈಗಾರಿಕಾ ಬಂಡವಾಳಶಾಹಿಗೆ'* ಒತ್ತು ನೀಡಿದನು - ಬಂಡವಾಳಶಾಹಿ ಲಾಭ ಮಾಡಲು ಕೆಲಸದ ರಚನೆಯನ್ನು ನಿಯಂತ್ರಿಸುವ ಮೂಲಕ ಉತ್ಪಾದನೆಯನ್ನು ನಿಯಂತ್ರಿಸುತ್ತಾನೆ ಎಂದು. ಸ್ಮಿತ್ ಪಿನ್ ತಯಾರಿಕೆಯಲ್ಲಿನ ಕಾರ್ಯಗಳನ್ನು ಸರಳ ಕೆಲಸಗಳನ್ನಾಗಿ ವಿಭಜಿಸಿ ಅವು ಬೇರೆ ಬೇರೆ ಜನರಿಂದ ಮಾಡಲ್ಪಡುವ ಹೊಸ ರೀತಿಯ ಶ್ರಮ ವಿಭಜನೆಯಿಂದ ಉತ್ಪಾದನೆ ಹೆಚ್ಚಾದ ಪಿನ್ ಕಾರ್ಖಾನೆಯನ್ನು ವಿವರಿಸಿದನು. ಹಾಗೆ ಮಾಡುವ ಮೂಲಕ ಹೇಗೆ ಇರುವ ಅಷ್ಟೇ ಸಂಖ್ಯೆಯ ಕಾರ್ಮಿಕರು ತಮ್ಮ ದಿನದ ಉತ್ಪಾದನೆಯನ್ನು ಅಪಾರವಾಗಿ ಹೆಚ್ಚಿಸಬಹುದು ಎಂದು ಅವನು ತೋರಿಸಿದನು.

## ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು

ಸಾಂಪ್ರದಾಯಿಕ ರಾಜಕೀಯ ಅರ್ಥಶಾಸ್ತ್ರಜ್ಞರಲ್ಲಿ ಆಡಂ ಸ್ಮಿತ್ ಮೊದಲನೆಯವನು. ಅವನ ವಿಧಾನವು ಒಂದು ಶತಮಾನಕ್ಕೂ ಹೆಚ್ಚು ಕಾಲ ಆರ್ಥಿಕ ಚಿಂತನೆಯಲ್ಲಿ ತನ್ನ ಪಾರಮ್ಯವನ್ನು ಮೆರೆಯಿತು. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು (classical economists) ಬಂಡವಾಳಶಾಹಿ ಮಾರುಕಟ್ಟೆ ಆರ್ಥಿಕತೆಯ ಪ್ರೇರಕ ಶಕ್ತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಲ್ಲಿ ಅವರು ಆರ್ಥಿಕ ಬೆಳೆವಣಿಗೆಗೆ ಕಾರಣಗಳು ಮತ್ತು ಆ ಕಾಲದ ಸಮಾಜದ ಪ್ರಮುಖ ಸಾಮಾಜಿಕ ವರ್ಗಗಳಾದ ಜಮೀನುದಾರ, ಬಂಡವಾಳಶಾಹಿ ಮತ್ತು ಕೂಲಿಕಾರ್ಮಿಕರ ನಡುವಿನ ಆದಾಯದ ಹಂಚಿಕೆಯು ಬೆಳೆವಣಿಗೆಯ ಮೇಲೆ ಬೀರುವ ಪರಿಣಾಮವನ್ನು ಗಂಭೀರವಾಗಿ ಅಧ್ಯಯನ ಮಾಡಿದರು. ಅವರು ಬದಲಾಗುತ್ತಿದ್ದ ವರ್ಗ ಸಂಬಂಧಗಳ ಮೂಲಕ, ಅದರಲ್ಲೂ ವಿಶೇಷವಾಗಿ ಬಂಡವಾಳಶಾಹಿಗಳ ಅಥವಾ “ಮಧ್ಯಮವರ್ಗ”ದ ಹೆಚ್ಚುತ್ತಿದ್ದ ಪ್ರಾಮುಖ್ಯತೆಯ ಮೂಲಕ ಬೆಳೆವಣಿಗೆಯನ್ನು ವಿವರಿಸಿದರು. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಬೆಳೆವಣಿಗೆಯನ್ನು ಉತ್ತೇಜಿಸುವಲ್ಲಿ ಬಂಡವಾಳಶಾಹಿಗಳ ಲಾಭಗಳ ಮಹತ್ವದ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ವರ್ಗ ಸಂಘರ್ಷಕ್ಕೆ ಪ್ರಾಮುಖ್ಯತೆ ನೀಡಿದರು. ಅವರು ಆರ್ಥಿಕತೆಯನ್ನು ಈ ಹಿಂದೆ ಉತ್ಪಾದಿಸಲಾದ ಸರಕುಗಳು “ಬಂಡವಾಳ” ವಾಗಿ ಅವು ವರ್ತಮಾನದ ಅವಧಿಯಲ್ಲಿನ ಉತ್ಪಾದನೆಗೆ ಅವಶ್ಯಕವಾದ ಸರಕು ಸಂಗ್ರಹಗಳನ್ನು ಒದಗಿಸುವ ಒಂದು ಪುನರುತ್ಪಾದನೆಯ ವ್ಯವಸ್ಥೆ ಎಂಬುದಾಗಿ ನೋಡಿದರು. ಆರ್ಥಿಕ ಬೆಳವಣಿಗೆ, ಹೀಗೆ ಅವಧಿಯಿಂದ ಅವಧಿಗೆ ಉತ್ಪಾದನೆಗೆ ಹಾಗೂ ಅನುಭೋಗಕ್ಕೆ ಲಭ್ಯವಿರುವ ಉತ್ಪನ್ನಗಳ ದಾಸ್ತಾನುಗಳ ಬಂಡವಾಳವನ್ನು ಹೆಚ್ಚಿಸುವುದನ್ನು ಅವಲಂಬಿಸಿದ್ದು ಅದನ್ನು ಪ್ರಸ್ತುತ ಅವಧಿಯಲ್ಲಿ ಉತ್ಪಾದನೆಯನ್ನು ವರ್ಧಿಸಲು ಹಿಂದಿನ ಅವಧಿಯ ಹೆಚ್ಚುವರಿ (ಮೂಲಭೂತ ಅವಶ್ಯಕತೆಗಳನ್ನು ಪೂರೈಸಿದ ನಂತರ ಉಳಿಯುವ ಉತ್ಪನ್ನಗಳು) ಯನ್ನು ಬಳಸುವುದರ ಮೂಲಕ ಮಾಡಲಾಗುತ್ತಿತ್ತು. ಒಟ್ಟು ಜನಸಂಖ್ಯೆಯ ಅಗತ್ಯತೆಯ ಪೂರೈಕೆಯ ನಂತರ ಬಂಡವಾಳಶಾಹಿ ನಿಯಂತ್ರಣದಲ್ಲಿ ಉಳಿಯುವ ಹೆಚ್ಚುವರಿ ಉತ್ಪಾದನೆಯೇ ಮುಂದಿನ ಹೆಚ್ಚಿನ ಉತ್ಪಾದನೆಗೆ ಸಂಪನ್ಮೂಲವಾಯಿತು. ಹಾಗಾಗಿ ಬಂಡವಾಳಶಾಹಿಗಳು ಪಡೆಯುತ್ತಿದ್ದ ಅಧಿಕ ಲಾಭಗಳು ಆರ್ಥಿಕ ಬೆಳೆವಣಿಗೆಯ ಮುಖ್ಯ ಆಧಾರವಾಗಿತ್ತು.

ಸ್ಮಿತ್ ತನ್ನ **ದ ವೆಲ್ತ್ ಆಫ್ ನೇಷನ್ಸ್** ನಲ್ಲಿ ಉತ್ಪಾದನಾ ಪ್ರಕ್ರಿಯೆಯನ್ನು ಆಮೂಲಾಗ್ರವಾಗಿ ಬದಲಾಯಿಸುತ್ತಿರುವ ಬಂಡವಾಳಶಾಹಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದೇ ಆರ್ಥಿಕ ಪ್ರಗತಿಯ ಗುಟ್ಟು ಎಂದು ಪ್ರತಿಪಾದಿಸಿದ. ವಾಣಿಜ್ಯ ಚಟುವಟಿಕೆಯ ಗೊಂದಲಮಯ ಕೇಂದ್ರದಲ್ಲಿ ಕಾರ್ಯಪ್ರವೃತ್ತವಾಗಿರುವ ಒಂದು ಸಾಮಾಜಿಕ ವ್ಯವಸ್ಥೆಯನ್ನು ಸ್ಮಿತ್ ಗುರುತಿಸಿದ. ಸ್ಪರ್ಧಾತ್ಮಕ ಮಾರುಕಟ್ಟೆಗಳ ಕಾರ್ಯಾಚರಣೆಯ ಮೂಲಕ ಈ ಬಂಡವಾಳಶಾಹಿಗಳು ಬೆಲೆಗಳನ್ನು ಕಡಮೆ ಮಾಡುತ್ತಿದ್ದರು ಹಾಗೂ ಉತ್ಪಾದನೆಯ ಹಳೆಯ ಮತ್ತು ದುಬಾರಿಯಾದ ವಿಧಾನಗಳನ್ನು ನಾಶಗೊಳಿಸುತ್ತಿದ್ದರು. ಬಂಡವಾಳಶಾಹಿಗಳು ತಾವು ಗಳಿಸಿದ ಲಾಭವನ್ನು ತಮ್ಮ ಅನುಭೋಗಕ್ಕಾಗಿ ಖರ್ಚುಮಾಡುವ ಆದಾಯವಾಗಿ ಬಳಸಿಕೊಳ್ಳುವ ಬದಲು ಅದನ್ನು ಉಳಿತಾಯ ಮಾಡಿ, ಉತ್ಪಾದನೆಯನ್ನು ಹೆಚ್ಚಿಸಲು ದಾಸ್ತಾನು (ಅದನ್ನು ಉತ್ಪಾದನೆಯ ಸಾಧನಗಳಿಗಾಗಿ ಮತ್ತು ಕಾರ್ಮಿಕರಿಗೆ ಕನಿಷ್ಠ ಮಟ್ಟದ ಬದುಕನ್ನು ಒದಗಿಸುವುದಕ್ಕೆ ವಿನಿಯೋಗಿಸಿದರು)ಗಳಲ್ಲಿ ಹೂಡಿಕೆ ಮಾಡಿದರು . ಹಾಗಾಗಿ ಆಸ್ತಿಯನ್ನು ರಕ್ಷಣೆ ಮಾಡುವುದನ್ನು ಹೊರತುಪಡಿಸಿ ಮಾರುಕಟ್ಟೆಯ ಕಾರ್ಯಾಚರಣೆಯಲ್ಲಿ ಹಸ್ತಕ್ಷೇಪ ಮಾಡದ ‘ತಾಟಸ್ಥ್ಯ ನೀತಿಯೇ (laissez-faire - ಮುಕ್ತ ವ್ಯಾಪಾರ)’ ಸೂಕ್ತವಾದ ಸರ್ಕಾರಿ ನೀತಿಯಾಗಿತ್ತು. ಅಂತಹದೊಂದು ನೀತಿಯು ವಿಕೇಂದ್ರೀಕರಣದ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆ ವ್ಯವಸ್ಥೆಯ “ಕಾಣದ ಕೈ” ಕೆಲಸ ಮಾಡುವ ಮೂಲಕ ಸಹಜ ಸ್ವಾಭಾವಿಕ ಸ್ವಾತಂತ್ರ್ಯ ಮತ್ತು ಸ್ಪರ್ಧಾತ್ಮಕ ಪ್ರಕ್ರಿಯೆಯನ್ನು ಉತ್ತೇಜಿಸುವುದು ಎಂದು ಭಾವಿಸಲಾಗಿತ್ತು (ಸಹಜವಾಗಿಯೇ, ಜನರು ನೈತಿಕವಾಗಿ ವರ್ತಿಸುತ್ತಾರೆ ಎಂದು ಭಾವಿಸಲಾಗಿತ್ತು).

1817ರಲ್ಲಿ ಸಂಸತ್ ಸದಸ್ಯನೂ ಮತ್ತು ಯಶಸ್ವೀ ಸ್ಟಾಕ್ ಬ್ರೋಕರನೂ ಆಗಿದ್ದ ಡೇವಿಡ್ ರಿಕಾರ್ಡೊ (David Ricardo) *ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಇಕಾನಮಿ ಅಂಡ್ ಟ್ಯಾಕ್ಸೇಷನ್ (Principles of Political Economy and Taxation)*

ಎಂಬ ಕೃತಿಯನ್ನು ರಚಿಸಿದನು. ಆಮದಾಗುವ ಅಗ್ಗದ ಆಹಾರ ಧಾನ್ಯಗಳ ಜೊತೆ ಸ್ಪರ್ಧೆಯು ಆಹಾರ ಧಾನ್ಯಗಳ ಬೆಲೆಯನ್ನು ಕಡಮೆ ಮಾಡುತ್ತದೆ ಎಂಬ ಕಾರಣಕ್ಕೆ ಮುಕ್ತ ವ್ಯಾಪಾರವನ್ನು ಸಮರ್ಥಿಸಿದನು. ಕೃಷಿ ಬೆಲೆ ಕಡಮೆ ಇದ್ದರೆ ಕೂಲಿ ಕಡಮೆಯಾಗುವುದು ಮತ್ತು ತತ್ಪರಿಣಾಮವಾಗಿ ಲಾಭ ಹೆಚ್ಚುವುದು ಮತ್ತು, ಹೀಗೆ, ಹೂಡಿಕೆ ಹಾಗೂ ಕೈಗಾರಿಕಾ ಉತ್ಪಾದನೆಯು ಹೆಚ್ಚಾಗುವುದು ಎಂದು ನಂಬಿದ್ದನು. ರಿಕಾರ್ಡೋ ಬೆಳವಣಿಗೆಯನ್ನು ಬಂಡವಾಳದ ದಾಸ್ತಾನನ್ನು ಸೃಷ್ಟಿಸುವುದಕ್ಕೆ ಶ್ರಮ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಆರ್ಥಿಕತೆಯ ಸಾಮರ್ಥ್ಯ ಎಂಬುದಾಗಿಯೂ ಸಹ ವಿವರಿಸಿದನು. ಹೀಗೆ ಅವನು ಶ್ರಮ ಆಧಾರಿತ ಮೌಲ್ಯ ಸಿದ್ಧಾಂತ (labour theory of value) ವನ್ನು, ವಸ್ತುಗಳ ಉತ್ಪಾದನಾ ವೆಚ್ಚವನ್ನು ಆಧರಿಸಿದ ಬೆಲೆ ನಿರ್ಣಯದ ಸಿದ್ಧಾಂತವನ್ನು ರೂಪಿಸಿದನು. ಈ ಸಿದ್ಧಾಂತದ ಪ್ರಕಾರ ಒಂದು ಸರಕನ್ನು ಉತ್ಪಾದಿಸಲು ಬಳಕೆಯಾಗುವ ಒಟ್ಟು ದುಡಿಮೆಯ ಅವಧಿ (labour time) ಮತ್ತು ಆ ದುಡಿಮೆಯ ಗುಣಮಟ್ಟ ಸರಕಿನ ಬೆಲೆಯನ್ನು ನಿರ್ಧರಿಸುತ್ತದೆ.

ಶತಮಾನದ ಮಧ್ಯಭಾಗದ ಹೊತ್ತಿಗೆ ಕೈಗಾರಿಕಾ ಬಂಡವಾಳಶಾಹಿಯು ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯನ್ನೂ ಪ್ರಭಾವಿಸಿತ್ತು; ಯಂತ್ರಾಧಾರಿತ ಉತ್ಪಾದನೆಯಲ್ಲಿ ಗಮನಾರ್ಹ ಪ್ರಗತಿಯು ಯಂತ್ರಗಳಿಗೆ ಮತ್ತು ಸುಧಾರಿತ ಸಾಗಣೆ ವ್ಯವಸ್ಥೆಗೆ ಬೇಡಿಕೆಯನ್ನು ಸೃಷ್ಟಿಸಿತ್ತು. ಮುಕ್ತ ವ್ಯಾಪಾರವು ಗೆಲುವು ಸಾಧಿಸಿತ್ತು, ಬ್ರಿಟನ್ ಕೇವಲ ಸರಕುಗಳನ್ನು ಮಾತ್ರವಲ್ಲ ಬಂಡವಾಳಶಾಹಿ ವ್ಯವಸ್ಥೆಯನ್ನು ಸಹ ವಿಶ್ವಕ್ಕೆ ರಫ್ತು ಮಾಡುತ್ತಿತ್ತು, ಮತ್ತು ಅಮೇರಿಕಾ ಒಂದು ಪ್ರಬಲ ಪ್ರತಿಸ್ಪರ್ಧಿಯಾಗಿ ಬೆಳೆಯುತ್ತಿತ್ತು. ತಂತ್ರಜ್ಞಾನ ಮತ್ತು ವ್ಯಾಪಾರ-ವಾಣಿಜ್ಯ ಕ್ಷೇತ್ರಗಳಲ್ಲಿ ಆದ ಜೋಡಿ ಕ್ರಾಂತಿಗಳು ಅಭೂತಪೂರ್ವ ಆರ್ಥಿಕ ಪ್ರಗತಿಯ ಹೊರತಾಗಿಯೂ ಕಾರ್ಖಾನೆ ಮತ್ತು ಗಣಿ ಕಾರ್ಮಿಕರ ಜೀವನ ಮಾತ್ರ ತೀರಾ ಶೋಚನೀಯವಾಗಿತ್ತು. ಪ್ರತಿದಿನವೂ 15 ಗಂಟೆಗಳು ಕೆಲಸ ಮಾಡುವುದು ಸರ್ವೆ ಸಾಮಾನ್ಯವಾಗಿತ್ತು, ಆರೇಳು ವಯಸ್ಸಿನ ಮಕ್ಕಳು ಗಣಿ ಮತ್ತು ಕಾರ್ಖಾನೆಯಲ್ಲಿ ದುಡಿಯುತ್ತಿದ್ದರು. ಉತ್ತರ ಇಂಗ್ಲೆಂಡಿನ ಕಾರ್ಮಿಕರ ಸರಾಸರಿ ಜೀವಿತಾವಧಿ ಕೇವಲ 37 ವರ್ಷಗಳು, ಕೈಗಾರಿಕೀಕರಣಕ್ಕೆ ಒಳಪಡದ ದಕ್ಷಿಣ ಇಂಗ್ಲೆಂಡಿಗೆ ಹೋಲಿಸಿದರೆ ಅವರ ಜೀವಿತಾವಧಿ ಬರೋಬ್ಬರಿ 20 ವರ್ಷಗಳು ಕಡಮೆ, ಎಂಬುದು ಕೆಲಸದ ಸ್ಥಳಗಳು ಮತ್ತು ಕಾರ್ಮಿಕರು ವಾಸಿಸುತ್ತಿದ್ದ ಸ್ಥಳಗಳ ಸ್ಥಿತಿ ತೀರಾ ಮಾರಕವಾಗಿದ್ದವು ಎಂಬ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದ್ದವು.

**ಚಟುವಟಿಕೆ**

**ಹೈಸ್ಕೂಲ್ ಇತಿಹಾಸದ ಪಠ್ಯಪುಸ್ತಕಗಳಲ್ಲಿ ಬಂಡವಾಳಶಾಹಿ ಮತ್ತು ಆಡಂ ಸ್ಮಿತ್‌ನ ಸಿದ್ಧಾಂತವನ್ನು ಪರಿಗಣಿಸಲಾಗಿರುವ ರೀತಿಯನ್ನು ವಿಶ್ಲೇಷಣೆ ಮಾಡುವುದು**

ಸಣ್ಣ ಸಣ್ಣ ಗುಂಪುಗಳಲ್ಲಿ ಕುಳಿತು ಅಮೇರಿಕ ಅಥವಾ ಜಾಗತಿಕ ಇತಿಹಾಸದ ನಾಲ್ಕೈದು ಹೈಸ್ಕೂಲ್ ಪಠ್ಯ ಪುಸ್ತಕಗಳನ್ನು ಅಧ್ಯಯನ ಮಾಡಿ. ಅದರಲ್ಲಿ '*ಬಂಡವಾಳಶಾಹಿ*' ಎಂಬ ಪದ ಬಳಸಲಾಗಿದೆಯೇ? ಹಾಗೊಂದು ವೇಳೆ ಬಳಸಿದ್ದರೆ ಅದನ್ನು ನಿಖರವಾಗಿ ಬಳಸಲಾಗಿದೆಯೇ? 19 ಮತ್ತು 20ನೆಯ ಶತಮಾನದ ಆರ್ಥಿಕ ಬೆಳವಣಿಗೆಯನ್ನು ಹೇಗೆ ವಿವರಿಸಲಾಗಿದೆ? ಸ್ಮಿತ್ ಮತ್ತು ರಿಕಾರ್ಡೋ ಅವರ ಒಳನೋಟಗಳನ್ನು ಬಳಸಿಕೊಂಡು ಈ ವಿವರಣೆಗಳನ್ನು ಹೇಗೆ ಸುಧಾರಿಸಬಹುದು?

ನಮ್ಮ ಅನುಭವದ ಪ್ರಕಾರ ಈ ಪಠ್ಯಪುಸ್ತಕಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಕೈಗಾರಿಕಾ ಕ್ರಾಂತಿಯ ಪರಿಣಾಮವೆಂದು ವಿವರಿಸಲಾಗಿದ್ದು, ಅದನ್ನು ಮತ್ತೆ ತಾಂತ್ರಿಕ ಮುನ್ನಡೆಗಳು ಎಂಬ ಪರಿಭಾಷೆಯಲ್ಲಿ ಮಾತ್ರ ವರ್ಣಿಸಲಾಗಿದೆ. ಕೈಗಾರಿಕಾ ಬಂಡವಾಳಶಾಹಿಗಳ ಬೆಳವಣಿಗೆಯನ್ನು ಕುರಿತಂತೆ ಅಲ್ಲಿ ಯಾವ ಉಲ್ಲೇಖವೂ ಇಲ್ಲ.

**ಕಾರ್ಲ್ ಮಾರ್ಕ್ಸ್**

1850ರಲ್ಲಿ ಕಾರ್ಲ್ ಮಾರ್ಕ್ಸ್ (Karl Marx) *ದಾಸ್ ಕ್ಯಾಪಿಟಲ್: ಎ ಕ್ರಿಟೀಕ್ ಆಫ್ ಪೊಲಿಟಿಕಲ್ ಇಕಾನಮಿ (Das Capital: A Critique of Political Economy)* ಬರೆಯಲು ಪ್ರಾರಂಭಿಸುವ ಹೊತ್ತಿಗೆ ಭೂಮಾಲಿಕರು ಮತ್ತು ಬಂಡವಾಳಶಾಹಿಗಳ

ನಡುವಿನ ವರ್ಗ ವ್ಯತ್ಯಾಸ ಮರೆಯಾಗುತ್ತಾ ಬಂದಿತ್ತು. ವರ್ಗಸಂಘರ್ಷವು ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ನಡುವಿನ ಸಂಘರ್ಷವಾಗಿ ಬದಲಾಗಿತ್ತು. ಬಂಡವಾಳಶಾಹಿ ವ್ಯವಸ್ಥೆಯನ್ನು ವಿಶ್ಲೇಷಿಸಲು ಮಾರ್ಕ್ಸ್ ಕಾರ್ಮಿಕರು ಮತ್ತು ಬಂಡವಾಳಶಾಹಿಗಳ ನಡುವಿನ ಸಂಘರ್ಷವು ವರ್ಗದ ಆದಾಯದ ಮೇಲೆ, ಆರ್ಥಿಕ ಬೆಳವಣಿಗೆಯ ಮೇಲೆ ಬೀರುವ ಪರಿಣಾಮದ ಮೇಲೆ ಮತ್ತು ಬಂಡವಾಳಶಾಹಿ ವ್ಯವಸ್ಥೆಗೆ ದೀರ್ಘಕಾಲ ಉಳಿಯುವ ಸಾಧ್ಯತೆಯ ಮೇಲೆ ಹೆಚ್ಚು ಗಮನಹರಿಸಿದನು. ಅವನು ಅಪಾರ ಸಂಪತ್ತನ್ನು ಸೃಷ್ಟಿಸುವ ಆದರೆ ಬಂಡವಾಳಶಾಹಿ ಮತ್ತು ಕಾರ್ಮಿಕರಿಬ್ಬರನ್ನೂ ಅಮಾನುಷಗೊಳಿಸುವ ಬಂಡವಾಳಶಾಹಿಯ ಶಾಶ್ವತವಲ್ಲದ ಸ್ವರೂಪವನ್ನು ದತ್ತವಾದದ್ದು ಎಂದು ಪರಿಗಣಿಸಿದ್ದನು. ಬಂಡವಾಳಶಾಹಿ ವ್ಯವಸ್ಥೆ ಐತಿಹಾಸಿಕ ಬೆಳವಣಿಗೆಯ ಉಪಾಂತ ಹಂತವೆಂದು ಅವನು ನಂಬಿದ್ದನು. ಊಳಿಗಮಾನ್ಯ ವ್ಯವಸ್ಥೆಯು ಕುಸಿದಂತೆಯೇ, ನಂತರ ಬಂದ ಬಂಡವಾಳಶಾಹಿ ವ್ಯವಸ್ಥೆಯೂ ಕೂಡ ತನ್ನ ಆಂತರಿಕ ವೈರುಧ್ಯಗಳ ಫಲವಾಗಿ ತನ್ನ ವಿನಾಶಕ್ಕೆ ಪರಿಸ್ಥಿತಿಗಳನ್ನು ಸೃಷಿಸುತ್ತದೆ ಎಂದು ಭಾವಿಸಿದ್ದನು. ಅದರ ಜಾಗದಲ್ಲಿ ಕಾರ್ಮಿಕರು ಮುಕ್ತವಾಗಿ ವ್ಯವಹರಿಸುವಂತ ಮತ್ತು ಜನರು ತಮ್ಮ ಮಾನವ ಸಾಧ್ಯತೆಗಳನ್ನು ಬೆಳೆಸಿಕೊಳ್ಳುವಂತ ವಾತಾವರಣದ ಲಕ್ಷಣಗಳನ್ನೊಳಗೊಂಡ ಸಮಾಜವಾದಿ ಸಮಾಜವೊಂದು ಅಸ್ತಿತ್ವಕ್ಕೆ ಬರುತ್ತದೆ ಎಂಬುದು ಅವನ ದೃಢ ನಂಬಿಕೆಯಾಗಿತ್ತು.

ಸಂಪ್ರದಾಯವಾದಿ ಅರ್ಥಶಾಸ್ತ್ರಜ್ಞರು ವಿನಿಮಯದ ಅಧ್ಯಯನಕ್ಕೆ ಅತಿಯಾದ ಮಹತ್ವ ನೀಡುವುದನ್ನು ಮಾರ್ಕ್ಸ್ ಆಕ್ಷೇಪಿಸಿದ. ಅದು ಉತ್ಪಾದನಾ ಸಂಬಂಧಗಳನ್ನು ನಿರ್ಲಕ್ಷಿಸುವುದರ ಮೂಲಕ ಬಂಡವಾಳಶಾಹಿ ವ್ಯವಸ್ಥೆಯ ಶೋಷಣಾತ್ಮಕ ಸ್ವರೂಪವನ್ನು ಮರೆಮಾಚುತ್ತದೆ ಎಂದು ವಾದಿಸಿದ. ಅವನು ಮುಂದೆ ರಿಕಾರ್ಡೋನ ಶ್ರಮ ಆಧಾರಿತ ಮೌಲ್ಯ ಸಿದ್ಧಾಂತವನ್ನು ಬಂಡವಾಳಶಾಹಿಯಲ್ಲಿ ವರ್ಗಸಂಘರ್ಷಕ್ಕೆ ಮೂಲವಾದ ಶ್ರಮದ ಶೋಷಣಾ ಸಿದ್ಧಾಂತವಾಗಿ ರೂಪಿಸಿದ. ಮಾರ್ಕ್ಸ್‌ನ ಪ್ರಕಾರ ಲಾಭ ಎನ್ನುವುದು ಕಾರ್ಮಿಕರ ಶ್ರಮಕ್ಕೆ ಪಾವತಿಸದೇ ಉಳಿದಿರುವ ಹೆಚ್ಚುವರಿಯನ್ನು ಸೂಚಿಸುತ್ತದೆ. ಅದು ಮಾರುಕಟ್ಟೆ ವಿನಿಮಯದ ಪ್ರಕ್ರಿಯೆಯ ಮೂಲಕ ಕಣ್ಣಿಗೆ ಕಾಣದಂತೆ ಮರೆಮಾಚಲಾಗಿರುವ ಒಂದು ರೀತಿಯ ಕಾರ್ಮಿಕರ ವಂಚನೆಯಾಗಿತ್ತು. ಅವನ ಪ್ರಕಾರ ಬಂಡವಾಳಶಾಹಿಗಳು ಕಾರ್ಮಿಕರನ್ನು ಚಾಲ್ತಿಯಲ್ಲಿರುವ ಕೂಲಿ ದರಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವುದರಿಂದ ಇದು ಸಾಧ್ಯ; ಆದಾಗ್ಯೂ, ಕಾರ್ಮಿಕರನ್ನು ಕೆಲಸಕ್ಕೆ ಒಮ್ಮೆ ತೆಗೆದುಕೊಂಡ ಮೇಲೆ ಬಂಡವಾಳಶಾಹಿಗಳು ನಿಜವಾದ ದುಡಿಮೆಯ ಪ್ರಕ್ರಿಯೆಯನ್ನು ನಿಯಂತ್ರಿಸುತ್ತಾರೆ, ಮತ್ತು ಯಾವುದಕ್ಕೂ ಹೆದರಬೇಕಾಗಿಲ್ಲ ಎಂದವರು ತಿಳಿದಿರುವ ಕಾರಣ ತಮಗೆ ಬೇಕಾದಷ್ಟು ಕಾಲ ಅವರನ್ನು ದುಡಿಸಿಕೊಳ್ಳುತ್ತಾರೆ. ಹೀಗೆ ಕಾರ್ಮಿಕರು ತಮಗೆ ಕೂಲಿಯನ್ನು ನೀಡಲು ಬೇಕಾಗುವಷ್ಟು ಮೌಲ್ಯವನ್ನು (ಸರಕುಗಳನ್ನು) ಮತ್ತು ಮಿಗುತಾಯ ಮೌಲ್ಯವನ್ನು ಉತ್ಪಾದಿಸುತ್ತಿದ್ದು ಅದು ಬಂಡವಾಳಶಾಹಿಗಳ ಆಸ್ತಿಯಾಗುತ್ತದೆ ಅಲ್ಲದೆ ಲಾಭದ ಮತ್ತು ಬಂಡವಾಳ ಶೇಖರಣೆಗೆ ಮೂಲವಾಗುತ್ತದೆ. ತತ್ಪರಿಣಾಮವಾಗಿ, ಈ ಶೋಷಣಾತ್ಮಕ ಕೆಲಸದ ಪರಿಸ್ಥಿತಿಗಳು ಕಾರ್ಮಿಕರನ್ನು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಂಘಟಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ, ನಿರಂತರ ವರ್ಗಸಂಘರ್ಷವನ್ನು ಸೃಷ್ಟಿಸುತ್ತದೆ.

ಮಾರ್ಕ್ಸ್ ಬಂಡವಾಳಶಾಹಿಯು ನಿರಂತರವಾಗಿ ಬಂಡವಾಳ ಶೇಖರಣೆಯನ್ನು ಹಾಗೂ ವರ್ಧನೆಯನ್ನು ಬೇಡುತ್ತದೆ ಎಂದು ಒತ್ತಿ ಹೇಳಿದ. ಬಂಡವಾಳಶಾಹಿಗಳು ವಾಣಿಜ್ಯದಲ್ಲಿ ತೊಡಗಿಕೊಳ್ಳುವುದು ಕೇವಲ ಲಾಭವನ್ನು ಮಾಡುವುದಕ್ಕೆ ಮಾತ್ರವಲ್ಲ, ತಮ್ಮ ಬಂಡವಾಳವನ್ನು ಹೆಚ್ಚಿಸುವುದಕ್ಕೂ (ಶೇಖರಿಸಿಕೊಳ್ಳುವುದು) ಆಗಿರುತ್ತದೆ. ಅಂದರೆ ಅವರು ನಿರಂತರವಾಗಿ ತಮ್ಮ ವ್ಯಾಪಾರವನ್ನು ವಿಸ್ತರಿಸುತ್ತಲೇ ಇರಬೇಕು ಮತ್ತು ತಮ್ಮ ಬಂಡವಾಳವನ್ನು ಹೂಡಲು ಹೊಸ ಮಾರುಕಟ್ಟೆಗಳನ್ನು ಹುಡುಕುತ್ತಲೇ ಇರಬೇಕು. ಈ ಅಂತ್ಯವಿಲ್ಲದ ಪ್ರಕ್ರಿಯೆಯು ಬಂಡವಾಳಶಾಹಿ ಉತ್ಪಾದಕರು ನಿರಂತರವಾಗಿ ಈ ಮೊದಲು ಮನೆಯಲ್ಲಿ ಅಥವಾ ಸಣ್ಣ ಕಾರ್ಯಾಗಾರಗಳಲ್ಲಿ ನಡೆಯುತ್ತಿದ್ದ ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಪ್ರವೃತ್ತಿಯನ್ನು ಒಳಗೊಳ್ಳುತ್ತದೆ. ಇದುವೇ "ಸರಕೀಕರಣ (Commodification)"ದ ಪ್ರಕ್ರಿಯೆ. ಮನೆಯಲ್ಲಿ ತಯಾರಾಗುತ್ತಿದ್ದ ಹೆಚ್ಚೆಚ್ಚು ವಸ್ತುಗಳು ಉದ್ಯಮಗಳಲ್ಲಿ ತಯಾರಾಗುವುದಕ್ಕೆ ಪ್ರಾರಂಭವಾದಾಗ ಸರಕೀಕರಣ ಸಂಭವಿಸುತ್ತದೆ. ಹಿಂದೆ ಮನೆಯಲ್ಲಿ ತಯಾರಾಗುತ್ತಿದ್ದ ಬಟ್ಟೆಗಳು, ಉಡುಪುಗಳು, ಆಹಾರ, ಊಟ, ಹತ್ಯಾರುಗಳು ಒಂದೊಂದಾಗಿ ಸರಕುಗಳಾಗಿ ಹೋಗಿವೆ, ವಿನಿಮಯಕ್ಕಾಗಿ ಮತ್ತು ಲಾಭಕ್ಕಾಗಿ ಉತ್ಪಾದನೆಯಾಗುವ ಉತ್ಪನ್ನಗಳಾಗಿಬಿಟ್ಟಿವೆ.

ಹೀಗೆ, ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ಅರಾಜಕ ಮಾರುಕಟ್ಟೆ ವ್ಯವಸ್ಥೆಯಿಂದ ಪ್ರೇರಿತವಾದ ನಿರಂತರ ವಿಸ್ತರಣೆಯ ಪ್ರವೃತ್ತಿಯು ಅಂತರ್ಗತವಾಗಿದೆ ಎಂಬುದನ್ನು ಮಾರ್ಕ್ಸ್ ಗಮನಿಸಿದ. ಅವನು ಕಾರ್ಮಿಕರಿಗೆ ಮತ್ತು ಅನೇಕ ಬಂಡವಾಳಶಾಹಿಗಳಿಗೆ ಹಾನಿಯನ್ನುಂಟುಮಾಡುವಂತ ಪುನರಾವರ್ತಿತ ವಾಣಿಜ್ಯ ಆವರ್ತಗಳಿಂದ ಸ್ಪಷ್ಟವಾಗುವಂತೆ ಮಾರುಕಟ್ಟೆ ವ್ಯವಸ್ಥೆಯನ್ನು ಅತ್ಯಂತ ಗೊಂದಲಮಯ ವ್ಯವಸ್ಥೆಯನ್ನಾಗಿ ಪರಿಗಣಿಸಿದ. ಈ ವಾಣಿಜ್ಯ ಆವರ್ತಗಳನ್ನು ವಿವರಿಸುವ ಬಂಡವಾಳಶಾಹಿ ಬಿಕ್ಕಟ್ಟಿನ ಸಿದ್ಧಾಂತವೊಂದನ್ನು ಅವನು ರೂಪಿಸಿದ; ಈ ಸಿದ್ಧಾಂತವು ವಾಣಿಜ್ಯ ಸಂಸ್ಥೆಗಳು ಅತಿಯಾದ ಹೂಡಿಕೆ ಮಾಡುತ್ತವೆ ಮತ್ತು ಉತ್ಪಾದಿತ ಸರಕಿಗೆ ಸಾಕಷ್ಟು ಬೇಡಿಕೆ ಇಲ್ಲದ ಕಾರಣ ಅದು ಲಾಭವನ್ನು ಕಡಮೆ ಮಾಡುತ್ತದೆ ಎಂಬುದರ ಮೇಲೆ ಆಧಾರಿತವಾಗಿದೆ. ತತ್ಪರಿಣಾಮವಾಗಿ, ನೆಲಕಚ್ಚುತ್ತಿರುವ ಉದ್ಯಮಗಳನ್ನು ಬೃಹತ್ ಉದ್ಯಮಗಳು ಕಬಳಿಸಿದಂತೆಲ್ಲಾ ಬಂಡವಾಳವು ಕೆಲವೇ ಜನರ ಕೈಯ್ಯಲ್ಲಿ ಕೇಂದ್ರೀಕೃತವಾಗುವ ಮೂಲಕ ವಾಣಿಜ್ಯ ಆವರ್ತಗಳು ಅಧಿಕಾರದ ಏಕಸ್ವಾಮ್ಯವನ್ನು ಮತ್ತಷ್ಟು ಹೆಚ್ಚಿಸುತ್ತವೆ.

ಸ್ಪರ್ಧೆಯಿಂದಾಗಿ ಬಂಡವಾಳಶಾಹಿಗಳು ಯಾವಾಗಲೂ ಹೊಸ ಉತ್ಪಾದನಾ ತಂತ್ರಗಳನ್ನು ಪರಿಚಯಿಸಬೇಕೆಂಬ ಮತ್ತು ಆರ್ಥಿಕ ಚಟುವಟಿಕೆಗಳನ್ನು ವೇಗಗೊಳಿಸಬೇಕೆಂಬ ಒತ್ತಡಕ್ಕೆ ಒಳಗಾಗಿರುತ್ತಾರೆ. ಇದರ ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ "ವೇಗದಿಂದಾಗಿ ದೂರ ನಗಣ್ಯ (annihilation of space with time)" ಅಗಿಬಿಡುತ್ತದೆ ಎಂದು ಮಾರ್ಕ್ಸ್ ಮುನ್ನಾಣಿದ: ಹೆಚ್ಚು ವೇಗವಾದ ಸಂವಹನ ಮತ್ತು ಸಾರಿಗೆ ವಿಧಾನಗಳಿಂದ ದೂರ ಎನ್ನುವುದು ಅಮುಖ್ಯವಾಗುತ್ತದೆ.

ಮಾರ್ಕ್ಸ್‌ನ ಪ್ರಕಾರ ಬಂಡವಾಳಶಾಹಿಗಳಲ್ಲದ ಇತರ ದೇಶಗಳನ್ನೂ ಮತ್ತು ಬದುಕಿನ ರೀತಿಗಳನ್ನೂ ಮಾರುಕಟ್ಟೆ ವ್ಯವಸ್ಥೆಯ ಭಾಗವನ್ನಾಗಿ ಮಾಡಿಕೊಳ್ಳುವ ನಿರಂತರ ಒತ್ತಡವೂ ಸಹ ಇರುತ್ತದೆ. ಈ ಪ್ರಕ್ರಿಯೆಯನ್ನು ಅವನು '*ಅಸಮ ಬೆಳವಣಿಗೆ*' ಎಂದು ವಿವರಿಸಿದನು. ಬಂಡವಾಳಶಾಹಿ ಎನ್ನುವುದು ಒಂದು ನಿರ್ದಿಷ್ಟ ದೇಶದಲ್ಲಿ ಅಂದರೆ ಗ್ರೇಟ್ ಬ್ರಿಟನ್ನಿನಲ್ಲಿ ಜವಳಿ, ಕಬ್ಬಿಣ ಮತ್ತು ಉಕ್ಕು ಅಂತಹ ಕೆಲವು ನಿರ್ದಿಷ್ಟ ಕೈಗಾರಿಕೆಗಳಲ್ಲಿ ಪ್ರಾರಂಭವಾಗಿದ್ದು ತದನಂತರ ಉಳಿದ ದೇಶಗಳಿಗೆ ಮತ್ತು ಕೈಗಾರಿಕೆಗಳಿಗೆ ಹರಡಿತು. ಅಂತಿಮವಾಗಿ, ಅದು ಒಂದು ವಿಶ್ವ ಮಾರುಕಟ್ಟೆ ವ್ಯವಸ್ಥೆಯನ್ನು ಹುಟ್ಟುಹಾಕುತ್ತದೆ. ಆದಾಗ್ಯೂ, ಯಾವುದೇ ಒಂದು ದತ್ತ ಕಾಲದಲ್ಲಿಯೂ ವಿಶ್ವದ ಬೇರೆ ಬೇರೆ ದೇಶಗಳು ವಿವಿಧ ಪ್ರಮಾಣದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿರುತ್ತದೆ ಎಂದ.

ಹತ್ತೊಂಬತ್ತನೇ ಶತಮಾನದ ಕೊನೆಯ ವೇಳೆಗೆ ಪಶ್ಚಿಮ ಯುರೋಪ್ ಬಂಡವಾಳಶಾಹಿಯಾಗಿತ್ತು, ಮತ್ತು ಅಮೇರಿಕಾ ಹಾಗೂ ಜರ್ಮನಿ ಇಂಗ್ಲೆಂಡಿನ ಆರ್ಥಿಕ ಆಧಿಪತ್ಯವನ್ನು ಮೀರಲು ಅದರೊಂದಿಗೆ ಸ್ಪರ್ಧೆಗೆ ಇಳಿದಿದ್ದವು. ಬಂಡವಾಳಶಾಹಿ ದೇಶಗಳು ಸಾಮ್ರಾಜ್ಯಶಾಹಿ ದೇಶಗಳೂ ಆಗಿದ್ದವು ಮತ್ತು ಅವು ವಿಶ್ವದಾದ್ಯಂತ ಬಂಡವಾಳಶಾಹಿ ಅಲ್ಲದ ದೇಶಗಳು ಮತ್ತು ಪ್ರಾಂತ್ಯಗಳ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ್ದವು. ಈ ಯುಗ ಬಂಡವಾಳಶಾಹಿಯ ಅಪರಿಮಿತ ಆತ್ಮವಿಶ್ವಾಸದ ಕಾಲವಾಗಿತ್ತು. ಬಂಡವಾಳಶಾಹಿ ದೇಶಗಳ ಕಾರ್ಮಿಕರ ಅಸಲಿ ವರಮಾನ ಹೆಚ್ಚುತ್ತಾ ಇತ್ತು. ಕಾರ್ಮಿಕರು ಸಂಘಗಳನ್ನು ಮತ್ತು ರಾಜಕೀಯ ಪಕ್ಷಗಳನ್ನು ಸಂಘಟಿಸಲು ಪ್ರಾರಂಭಿಸಿದ್ದರು, ಆದರೆ ಅವರ ಉದ್ದೇಶ ಸುಧಾರಣೆಯನ್ನು ತರುವುದಾಗಿತ್ತೇ ಹೊರತು ಕ್ರಾಂತಿ ಮಾಡುವುದಾಗಿರಲಿಲ್ಲ. ಸಾಂಪ್ರದಾಯಿಕ ಮತ್ತು ಮಾರ್ಕ್ಸವಾದಿ ಅರ್ಥಶಾಸ್ತ್ರಗಳು ಚೆನ್ನಾಗಿ ನೆಲೆಯೂರಿದ್ದ ಬಂಡವಾಳಶಾಹಿ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಹರಿಸಲು ನೆರವಾಗಬಹುದಾದಂತ ಅರ್ಥಶಾಸ್ತ್ರ ವಿಧಾನವೊಂದಕ್ಕೆ ದಾರಿ ಬಿಟ್ಟುಕೊಟ್ಟವು.

**ಚಟುವಟಿಕೆ**

**ಸ್ಮಿತ್, ಮಾರ್ಕ್ಸ್ ಮತ್ತು ಆರ್ಥಿಕ ಇತಿಹಾಸ**

**ಭಾಗ 1**

ಮಾರ್ಕ್ಸ್ರ ರಾಜಕೀಯ ಅರ್ಥನೀತಿ ಸಿದ್ಧಾಂತವು  ಹಲವು ರೀತಿಯಲ್ಲಿ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಚಿಂತನೆಗಳಿಂದ ಬಲವಾಗಿ ಪ್ರಭಾವಿತವಾಗಿತ್ತು. ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಗೆ ಕಾರಣಗಳು ಮತ್ತು ಆ ವ್ಯವಸ್ಥೆಯ ಸುಸ್ಥಿರತೆಯ ಬಗ್ಗೆ ಅವರು ಆಸಕ್ತಿ ಹೊಂದಿದ್ದ ಅದೇ ಸಾಮಾನ್ಯ ಸಮಸ್ಯೆಯಲ್ಲಿ ಆತನು ಆಸಕ್ತಿ ಹೊಂದಿದ್ದನು. ಸಣ್ಣ ಸಣ್ಣ ಗುಂಪುಗಳಲ್ಲಿ ಕುಳಿತು ಸ್ಮಿತ್, ರಿಕಾರ್ಡೊ ಮತ್ತು ಮಾರ್ಕ್ಸ್ ಅವರ ನಡುವಿನ ಸಾಮ್ಯತೆಗಳು ಮತ್ತು ಭಿನ್ನತೆಗಳನ್ನು ಚರ್ಚಿಸಿ. ಸಾಮ್ಯತೆ ಮತ್ತು ಭಿನ್ನತೆಗಳನ್ನು ದಾಖಲಿಸಲು ಈ ಕೆಳಗೆ ನೀಡಿರುವಂತಹ ಒಂದು ಮಾಹಿತಿ ಹಿಂಪಡೆಯಬಹುದಾದ ಚಾರ್ಟ್ (ಅಥವಾ ಮಾತೃಕೆ) ಅನ್ನು ಸಿದ್ಧಪಡಿಸಿ. ನಂತರ ಹೋಲಿಕೆಯನ್ನು ಮಾಡಿ.

| ವಿಷಯ | ಸ್ಮಿತ್ ಮತ್ತು ರಿಕಾರ್ಡೊ | ಮಾರ್ಕ್ಸ್ |
|---|---|---|
| ಸ್ಪರ್ಧೆಯ ಪಾತ್ರ | | |
| ಬಂಡವಾಳ ಶೇಖರಣೆಯ ಅರ್ಥ | | |
| ಬಂಡವಾಳ ಶೇಖರಣೆಯ  ಮಹತ್ವ | | |
| ಲಾಭಗಳ ಮೂಲ | | |
| ಮಾರುಕಟ್ಟೆ ವ್ಯವಸ್ಥೆಯ ಸ್ವರೂಪ | | |

**ಭಾಗ 2**

ಆಧುನಿಕ ಕಮ್ಯುನಿಸಮ್ನ ಪಿತಾಮಹ ಎಂದೇ ಮಾರ್ಕ್ಸ್ ಪ್ರಸಿದ್ಧ. ಹೆಚ್ಚಿನ ಅಮೇರಿಕಾದ ಜನರು ಕಮ್ಯುನಿಸಮ್ ಅನ್ನು ಅದೆಷ್ಟು ವಿರೋಧಿಸುತ್ತಾರೆ ಎಂದರೆ, ಮಾರ್ಕ್ಸ್ ಮಾಡಿರುವ ಅಗಾಧವಾದ ವೈಜ್ಞಾನಿಕ ಕೆಲಸಗಳ ಬಗ್ಗೆ ಏನೇನೂ ತಿಳಿಯದೆಯೇ ಅವರು ಮಾರ್ಕ್ಸ್ ಬಗ್ಗೆ ನಕಾರಾತ್ಮಕವಾಗಿ, ತೀವ್ರ ಸಂವೇಗಾತ್ಮಕವಾಗಿ ಪ್ರತಿಕ್ರಿಯೆಯಿಸುತ್ತಾರೆ.

ವಾಸ್ತವವಾಗಿ, ಮಾರ್ಕ್ಸ್ ಸಮಾಜವಾದ ಅಥವಾ ಕಮ್ಯುನಿಸಮ್ ಬಗ್ಗೆ ಗಮನಾರ್ಹವಾಗಿ ಅಷ್ಟೇನೂ ಬರೆದಿಲ್ಲ. ಅವನು ಸಮಾಜದಲ್ಲಿನ ಐತಿಹಾಸಿಕ ಬದಲಾವಣೆಯ ಹಂತಗಳಲ್ಲಿ ಕಮ್ಯುನಿಸಮ್ ಅಂತಿಮ ಹಂತವೆಂದು ಮುನ್ಸಾಣಿದನೇ ಹೊರತು ಅಂತಹದೊಂದು ಸಮಾಜವು ಯಾವ ಸ್ವರೂಪವನ್ನು ಮೈದಾಳಬೇಕು ಎಂಬುದನ್ನು ಊಹನೆ ಮಾಡುವುದು ವೈಜ್ಞಾನಿಕವಲ್ಲ ಎಂದು ಪರಿಗಣಿಸಿದ್ದನು. ಅದರ ಬದಲು,  ಬಂಡವಾಳಶಾಹಿ ಸಮಾಜದ ಅವನ ವಿಶ್ಲೇಷಣೆಯು, ಅರ್ಥಶಾಸ್ತ್ರಕ್ಕೆ ಮತ್ತು ಕ್ರಾಂತಿಕಾರಿ ಚಳುವಳಿಗಳಿಗೆ ಅವನು ನೀಡಿರುವ ಅತ್ಯಂತ ಮಹತ್ವದ ಕೊಡುಗೆ. ಆ ಪ್ರಯತ್ನದಲ್ಲಿ ಮಾರ್ಕ್ಸ್ ಬಂಡವಾಳಶಾಹಿ ಬೆಳವಣಿಗೆಯನ್ನು ಕುರಿತು ಕೆಲವು ಮಹತ್ವಪೂರ್ಣ ಒಳನೋಟಗಳನ್ನು ನೀಡಿದನು ಮತ್ತು ಅರ್ಥಶಾಸ್ತ್ರದ ಇತಿಹಾಸದ ಅಧ್ಯಯನಕ್ಕೆ ಮಹತ್ವದ ಕೊಡುಗೆ ನೀಡಿದನು. ಆಧುನಿಕ ಬಂಡವಾಳಶಾಹಿ ಪ್ರಪಂಚದ ಹಲವು ಲಕ್ಷಣಗಳನ್ನು ಮತ್ತು ಬೆಳವಣಿಗೆಗಳ ಮಾದರಿಗಳನ್ನು (dynamics) ಕುರಿತೂ ಅವನು ಮುನ್ನುಡಿದನು. ಕೆಳಗಿನ ಪ್ರಶ್ನೆಗಳನ್ನು ಚರ್ಚಿಸುವುದರಿಂದ ಆರ್ಥಿಕ ಇತಿಹಾಸ ಮತ್ತು ವರ್ತಮಾನದ ಜಾಗತಿಕ  ಅರ್ಥವ್ಯವಸ್ಥೆಯ ಅರ್ಥವಿವರಣೆಯಲ್ಲಿ ಮಾರ್ಕ್ಸ್ರ  ದೃಷ್ಟಿಕೋನಗಳ ಪ್ರಭಾವಿಸುವ ಶಕ್ತಿಯನ್ನು ಕಂಡುಕೊಳ್ಳಲು ನಿಮಗೆ ನೆರವಾಗುವುದು.

1. ಒಂದು ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕರ ಶೋಷಣೆಯನ್ನು ಮಾರ್ಕ್ಸ್ ಹೇಗೆ ವಿವರಿಸುತ್ತಾನೆ? ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತು ಇಂದಿನ ಕೆಲಸದ ಪರಿಸ್ಥಿತಿಗಳಿಂದ,  ಮಾಲಿಕರು ಕಾರ್ಮಿಕರಿಂದ ಹೆಚ್ಚು ಕೆಲಸ ತೆಗೆಯಲು ಕೆಲಸದ ಪ್ರಕ್ರಿಯೆಯನ್ನು ಯಾವ ರೀತಿಯಲ್ಲಿ ನಿಯಂತ್ರಿಸಿದರು ಎಂಬುದರಿಂದ ನಿಮಗೆ ತಿಳಿದಿರುವ ಮಾಹಿತಿಯನ್ನು ಆಧರಿಸಿ ಈ ಶೋಷಣೆಗೆ ಕೆಲವು ಉದಾಹರಣೆಗಳನ್ನು ನೀಡಿ. ಐತಿಹಾಸಿಕವಾಗಿ ಈ ಕಾರ್ಯತಂತ್ರಗಳಿಗೆ ಕಾರ್ಮಿಕರು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ?

2. ಮಾರ್ಕ್ಸ್ನ ಸಿದ್ಧಾಂತದಲ್ಲಿ ಶೋಷಣೆ ಎಂಬುದು ಬಂಡವಾಳಶಾಹಿ ಲಾಭ ಮತ್ತು ಬಂಡವಾಳ ಶೇಖರಣೆಯನ್ನು ಯಾವ ರೀತಿಯಲ್ಲಿ ವಿವರಿಸುತ್ತದೆ? ಕಾರ್ಮಿಕರನ್ನು ಮಾರ್ಕ್ಸ್ "ಕೂಲಿ ಗುಲಾಮರು" ಎಂದೇಕೆ ಕರೆದ?
3. ಬಂಡವಾಳಶಾಹಿ ಸಮಾಜದಲ್ಲಿ ಸರಕೀಕರಣ ಮಾಡುವ ಪ್ರವೃತ್ತಿ ಇದೆ ಎಂಬ ಮಾರ್ಕ್ಸ್‌ನ ಮಾತಿನ ಅರ್ಥವೇನು? ಅದಕ್ಕೂ ಹಾಗೂ ಬಂಡವಾಳ ಶೇಖರಣೆಗೂ ಇರುವ ಸಂಬಂಧ ಎಂತಹುದು? ಅಮೇರಿಕಾದಲ್ಲಿ ಇಂದು ನಡೆಯುತ್ತಿರುವ ಸರಕೀಕರಣಕ್ಕೆ ಕೆಲವು ಉದಾಹರಣೆಗಳನ್ನು ನೀಡಿ. "ಸಂಬಳದ ಕೆಲಸ" ದಲ್ಲಿ ಮಹಿಳೆಯರು ಹೆಚ್ಚೆಚ್ಚು ಪಾಲ್ಗೊಳ್ಳುತ್ತಿರುವ ಕೆಲವು ಅಂಶಗಳನ್ನು ಮತ್ತು ಲಿಂಗಾಧಾರಿತ ಬಡತನವನ್ನು ಈ ಸರಕೀಕರಣ ಪ್ರಕ್ರಿಯೆಯ ಮೂಲಕ ಹೇಗೆ ಅರ್ಥಮಾಡಿಕೊಡುತ್ತದೆ?
4. ಬಂಡವಾಳಶಾಹಿ ಸಮಾಜದಲ್ಲಿ ಉತ್ಪಾದನೆಯನ್ನು ಮತ್ತು ಬಂಡವಾಳದ ಚಲಾವಣೆಯನ್ನು ವೇಗಗೊಳಿಸುವ ಪ್ರವೃತ್ತಿ ಇದೆ ಎನ್ನುವುದನ್ನು ಮಾರ್ಕ್ಸ್ ಗುರುತಿಸಿದ. ಏತಕ್ಕೆ? ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವೇಗದಿಂದ ದೂರ ನಗಣ್ಯ ಆಗಿಬಿಡುತ್ತದೆ ಎಂಬ ಮಾರ್ಕ್ಸ್‌ನ ಮಾತಿನ ಅರ್ಥವೇನು? ಇತ್ತೀಚಿನ ಉದಾಹರಣೆಗಳನ್ನು ನೀಡಿ ಮತ್ತು ಇಂದು ಅಮೇರಿಕಾದಲ್ಲಿ ಈ ಪ್ರವೃತ್ತಿಯು ದೈನಂದಿನ ಜೀವನದ ಮೇಲೆ ಯಾವ ರೀತಿಯ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಚರ್ಚಿಸಿ.
5. ಪ್ರಪಂಚದ ಎಲ್ಲಾ ದೇಶಗಳೂ ಈ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಭಾಗವಾಗುವ ಪ್ರವೃತ್ತಿಯನ್ನು ಹೊಂದಿವೆ ಎಂದು ಮಾರ್ಕ್ಸ್ ಮುನ್ಸೂಚಿಸಿದ್ದ. ಮಾರ್ಕ್ಸ್‌ನ ಪ್ರಕಾರ ಈ ಪ್ರವೃತ್ತಿಗೆ ಯಾವ ಅಂಶಗಳು ಕಾರಣವಾಗುತ್ತವೆ? ಈ ಜಾಗತಿಕ ಮಾರುಕಟ್ಟೆ ವ್ಯವಸ್ಥೆಯು ಬಡರಾಷ್ಟ್ರಗಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಮತ್ತು ಅವು ಹೇಗೆ ಆ ವ್ಯವಸ್ಥೆಯ ಭಾಗವಾಗುತ್ತವೆ?

## ನವ ಸಾಂಪ್ರದಾಯಿಕ ಅರ್ಥಶಾಸ್ತ್ರ

1870ರ ಹೊತ್ತಿಗೆ ಬಂಡವಾಳಶಾಹಿಯ ಬೆಳವಣಿಗೆಯ ಬಗ್ಗೆಯಾಗಲಿ ಅಥವಾ ಅದರ ಉಳಿವಿನ ಬಗ್ಗೆಯಾಗಲಿ ಯಾವುದೇ ಪ್ರಶ್ನೆ ಉಳಿದಿರಲಿಲ್ಲ. ಎಲ್ಲರೂ ಈ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದರು, ಮತ್ತು ಅರ್ಥಶಾಸ್ತ್ರಜ್ಞರು ಮಾರುಕಟ್ಟೆ ವ್ಯವಸ್ಥೆಯ ಫಲಕಾರಿತ್ವ ಹಾಗೂ ಸಮತೆ (equity) ಗೆ ಸಂಬಂಧಿಸಿದ ಸೂಕ್ಷ್ಮ ದೃಷ್ಟಿಕೋನದ ಅರ್ಥಶಾಸ್ತ್ರದ ಪ್ರಶ್ನೆಗಳ ಕಡೆ ತಮ್ಮ ಗಮನ ತಿರುಗಿಸಿದರು.

ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ವರ್ಗಸಂಘರ್ಷ ಮತ್ತು ಐತಿಹಾಸಿಕ ಬೆಳವಣಿಗೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ನಿರ್ಲಕ್ಷಿಸಿದರು. ಅವರು ಲಾಭವನ್ನು ನೈಜ ಬಂಡವಾಳದ ಮಾಲಿಕರ ನ್ಯಾಯಬದ್ಧ ಸಂಪಾದನೆ ಎಂದು ಪರಿಗಣಿಸಿದರು. ನೆಲ, ಶ್ರಮ, ಮತ್ತು ಬಂಡವಾಳ ವಿವಿಧ ವರ್ಗಗಳಿಗೆ ಸೇರಿದ್ದು ಎಂಬ ಗ್ರಹಿಕೆಯನ್ನು ಕೈಬಿಡಲಾಯಿತು. ಮೂಲಭೂತವಾಗಿ, ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಗರಿಷ್ಠ ಲಾಭವನ್ನು ಹೇಗೆ ಪಡೆಯುವುದು ಎಂಬುದನ್ನು ವಿವರಿಸುವ ಸಿದ್ಧಾಂತವನ್ನು ಬಳಸಿಕೊಂಡು ಯಾವುದೇ ಒಬ್ಬ ಆರ್ಥಿಕ ಕರ್ತೃವಿನ ವರ್ತನೆಯನ್ನು ನಿರೀಕ್ಷಿಸಬಹುದಾಗಿತ್ತು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವಿವಿಧ ವರ್ಗಗಳಿಗೆ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ನೀಡುತ್ತಿದ್ದ ಪ್ರಾಮುಖ್ಯತೆ ಮರೆಯಾಯಿತು. ಗಳಿಕೆಗಳನ್ನು ಉತ್ಪಾದನಾ ಅಂಶಗಳ ಉತ್ಪಾದಕತೆಯು ನಿರ್ಧರಿಸುತ್ತದೆ. ಉತ್ಪಾದನಾ ಅಂಶಗಳ ಒಡೆಯರು ಉತ್ಪಾದನೆಗೆ ಅವರು ನೀಡಿರುವ ಕೊಡುಗೆಗೆ ಅನುಗುಣವಾಗಿ ಮೌಲ್ಯವನ್ನು ಗಳಿಸುತ್ತಾರೆ. ಮಿಗುತಾಯ (surplus) ಎನ್ನುವುದು ಇಲ್ಲ, ಒಂದು ವಸ್ತುವಿನ ಬೆಲೆ ಅದರ ಉತ್ಪಾದನಾ ವೆಚ್ಚಕ್ಕೆ ಸಮನಾಗಿರುತ್ತದೆ, ಮತ್ತು ಸಾಮಾನ್ಯ ಲಾಭಗಳು ಆರ್ಥಿಕ ವೆಚ್ಚದ ಒಂದು ಭಾಗ ಎಂದು ಅವರು ಪರಿಗಣಿಸಿದ್ದರು.

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿದ್ದ ಆಲ್‌ಫ್ರೆಡ್ ಮಾರ್ಷಲ್ (Alfred Marshall) ನವ ಸಾಂಪ್ರದಾಯಿಕ ಅರ್ಥಶಾಸ್ತ್ರದ ಇಂಗ್ಲಿಷ್ ಆವೃತ್ತಿಯನ್ನು ರೂಪಿಸಿದನು. ಇಂದಿಗೂ ಕಾಲೇಜುಗಳಲ್ಲಿ ಸೂಕ್ಷ್ಮ ದೃಷ್ಟಿಕೋನದ ಅರ್ಥಶಾಸ್ತ್ರದ ತರಗತಿಗಳಲ್ಲಿ ಅದನ್ನು ಬೋಧಿಸಲಾಗುತ್ತಿದೆ. ಮಾರುಕಟ್ಟೆಯೊಂದರಲ್ಲಿ ಸಮತೋಲನವನ್ನು, ಅಂದರೆ

ಪೂರೈಕೆ ಮತ್ತು ಬೇಡಿಕೆಯ ಸಮತೋಲನವನ್ನು, ಹೇಗೆ ಸಾಧಿಸಲಾಯಿತು ಎಂಬುದನ್ನು ಮಾರ್ಷಲ್ ತೋರಿಸಿದನು. ಪೂರೈಕೆಯ ಪರಿಸ್ಥಿಗಳು ಮತ್ತು ಬೇಡಿಕೆಯ ಪರಿಸ್ಥಿತಿಗಳು ಎರಡೂ ಬೆಲೆಯನ್ನು ನಿರ್ಧರಿಸುತ್ತವೆ ಎಂದು ಮಾರ್ಷಲ್ ತೋರಿಸಿದನು. ವೆಚ್ಚವು ಬೆಲೆಗಳನ್ನು ನಿರ್ಧರಿಸುತ್ತದೆ ಎಂಬುದಕ್ಕೆ ಒತ್ತು ನೀಡಿದ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ವಾದವು ದೀರ್ಘಕಾಲೀನದ ದೃಷ್ಟಿಕೋನ ಎಂದು ತೋರಿಸುವುದರ ಮೂಲಕ ಬೆಲೆಯ ನಿರ್ಧರಣದ ಮೇಲೆ ಅಲ್ಪಕಾಲೀನ ಮತ್ತು ದೀರ್ಘಕಾಲೀನ ಪ್ರಭಾವಗಳನ್ನು ಪ್ರತ್ಯೇಕಿಸಿದ.

ಅರ್ಥಶಾಸ್ತ್ರ ಒಂದು ಕ್ರಮಬದ್ಧವಾದ, ತರ್ಕಬದ್ಧವಾದ ವೈಜ್ಞಾನಿಕ ಶಿಸ್ತು ಎಂಬುದನ್ನು ಸ್ಥಾಪಿಸಲು ಮಾರ್ಷಲ್ ತನ್ನ ಶಕ್ತಿಮೀರಿ ಪ್ರಯತ್ನಿಸಿದ. ಅವನು *'ರಾಜಕೀಯ ಅರ್ಥನೀತಿ'* ಯ ಪರಿಭಾಷೆಯನ್ನು ಕೈಬಿಟ್ಟು *'ಅರ್ಥಶಾಸ್ತ್ರ'* ಎಂಬ ಪರಿಭಾಷೆಯನ್ನು ಬಳಸುವುದಕ್ಕೆ ಒಲವು ತೋರಿದನು. ರಾಯಲ್ ಇಕನಾಮಿಕ್ಸ್ ಸೊಸೈಟಿಯ ಸ್ಥಾಪನೆಗೆ ಮತ್ತು ಸೊಸೈಟಿಯ ವೃತಿ ನಿಯತಕಾಲಿಕವಾದ *'ಇಕನಾಮಿಕ್ ಜರ್ನಲ್ (Economic Journal)'* ಹೊರತರಲು ಅವನು ಸಹಾಯ ಮಾಡಿದ. ಕೇಂಬ್ರಿಡ್ಜ್‌ನಲ್ಲಿ ನೀತಿಶಾಸ್ತ್ರದಿಂದ (moral science) ಅರ್ಥಶಾಸ್ತ್ರವನ್ನು ಬೇರ್ಪಡಿಸುವಲ್ಲಿ ಸಫಲನಾದ. ಅಂತಿಮವಾಗಿ, 1890ರಲ್ಲಿ ಪ್ರಕಟವಾದ ಅವನ *ಪ್ರಿನ್ಸಿಪಲ್ಸ್ ಆಫ್ ಇಕನಾಮಿಕ್ಸ್ (Principles of Economics)* ಪಠ್ಯಪುಸ್ತಕ ಅರ್ಥಶಾಸ್ತ್ರದ ಬೋಧನೆಯನ್ನು ಕ್ರಮಬದ್ಧಗೊಳಿಸಿತು ಹಾಗೂ ಸುಮಾರು 40 ವರ್ಷಗಳ ಕಾಲ ಅದು ಅರ್ಥಶಾಸ್ತ್ರದ ಮಾದರಿ ಪಠ್ಯವೆನಿಸಿಕೊಂಡಿತು.

ಅದೇನೇ ಇದ್ದರೂ, 1920ರ ಹೊತ್ತಿಗೆ ಮಾರ್ಷಲ್ ಪ್ರತಿಪಾದಿಸಿದ ಅರ್ಥಶಾಸ್ತ್ರ ಪ್ರಾಮುಖ್ಯತೆ ಕಳೆದುಕೊಳ್ಳಲಾರಂಭಿಸಿತು. ನವ ಸಾಂಪ್ರದಾಯಿಕ ಅರ್ಥಶಾಸ್ತ್ರ ಸಿದ್ಧಾಂತದ ಒಂದು ಬಹುದೊಡ್ಡ ದೌರ್ಬಲ್ಯವೆಂದರೆ ಅದು ಸ್ಥೂಲದೃಷ್ಟಿಕೋನದ ಅರ್ಥಶಾಸ್ತ್ರದ ಪ್ರಶ್ನೆಗಳನ್ನು ಬಹುತೇಕವಾಗಿ ಕಡೆಗಣಿಸಿತ್ತು. 1920ರ ದಶಕದುದ್ದಕ್ಕೂ ಬ್ರಿಟನ್ ಅನ್ನು ನಿರುದ್ಯೋಗ ಸಮಸ್ಯೆ ತೀರಾ ದೊಡ್ಡ ಪ್ರಮಾಣದಲ್ಲಿ ಕಾಡಿತಾದರೂ ನವ ಸಾಂಪ್ರದಾಯಿಕ ಅರ್ಥಶಾಸ್ತ್ರ ಸಿದ್ಧಾಂತ ಅದನ್ನು ತಾತ್ಕಾಲಿಕ ಅಸಮತೋಲನವನ್ನು ಪ್ರತಿಬಿಂಬಿಸುವ ಒಂದು ಅಲ್ಪಕಾಲೀನ ವಿದ್ಯಮಾನ ಎಂದು ಪರಿಗಣಿಸಿ ಆ ಸಮಸ್ಯೆಯನ್ನು ಕಡೆಗಣಿಸಿತು.

ಆರ್ಥಿಕತೆಯ ಮೇಲೆ ಹಣದ ಪರಿಣಾಮವನ್ನು ಮಾರ್ಷಲ್ ಕಡೆಗಣಿಸಿದನಾದರೂ ಹಣದ ಲಭ್ಯತೆಯಲ್ಲಿನ ಬದಲಾವಣೆಗಳ ಮೂಲಕ ಬೆಲೆಯಲ್ಲಿನ ಬದಲಾವಣೆಗಳನ್ನು ವಿವರಿಸಬಹುದು ಎಂದು ವಾದಿಸುತ್ತಾ ಹಣದುಬ್ಬರವನ್ನು ವಿವರಿಸಲು ಹಣದ ಪರಿಮಾಣ ಸಿದ್ಧಾಂತವನ್ನು (quantity theory of money) ಬಳಸಿದ. ಹಣದ ಪರಿಮಾಣ ಸಿದ್ಧಾಂತ ವಿನಿಮಯದ ಸಮೀಕರಣ MV=PQ ಅನ್ನು ಆಧರಿಸಿದೆ. ಅದರ ಪ್ರಕಾರ ಚಲಾವಣೆಯಲ್ಲಿರುವ ಹಣದ ಪ್ರಮಾಣ ಹಾಗೂ ಹಣದ ಚಲಾವಣೆಯ ವೇಗ (ಎಷ್ಟು ಬಾರಿ ಹಣ ಕೈ ಬದಲಾಗುತ್ತದೆ) ಇವುಗಳ ಗುಣಲಬ್ಧ ಮಾರಾಟಕ್ಕೆಂದು ಉತ್ಪಾದನೆಯಾದ ಎಲ್ಲ ಸರಕುಗಳ ಹಣದ ಮೌಲ್ಯ (ಬೆಲೆ ಹಾಗೂ ಪ್ರಮಾಣದ ಗುಣಲಬ್ಧ ಅಥವಾ ಒಟ್ಟು ಆದಾಯ)ಕ್ಕೆ ಸಮವಾಗಿರುತ್ತದೆ. ಒಂದು ವೇಳೆ ನಾವು ಆರ್ಥಿಕತೆಯು ಸದಾ ಪೂರ್ಣ ಉದ್ಯೋಗ ಸ್ಥಿತಿಯಲ್ಲಿರುತ್ತದೆ ಎಂದು ಭಾವಿಸಿಕೊಂಡರೆ, ಆಗ Q ಅಥವಾ ಒಟ್ಟು ಉತ್ಪಾದನೆಯ ಪ್ರಮಾಣ ಸ್ಥಿರವಾಗಿರುತ್ತದೆ. ನಾವು ಹಣದ ವೇಗವೂ ಸಹ ಸ್ಥಿರವಾಗಿದೆ (constant) ಎಂದು ಭಾವಿಸಬಹುದು. ಆಗ ಆ ವಿನಿಮಯದ ಸಮೀಕರಣವನ್ನು P=V/Q x M ಎಂದು ಬದಲಿಸಿ ಬರೆಯಬಹುದು. ಅಂದರೆ ಸಾಮಾನ್ಯ ಬೆಲೆಯ ಮಟ್ಟವು ಹಣದ ಪೂರೈಕೆಗೆ ಸಮಾನಾನುಪಾತದಲ್ಲಿದೆ ಎಂದರ್ಥ. ಅಂದರೆ ಒಂದುವೇಳೆ ಹಣದ ಪೂರೈಕೆ ಹೆಚ್ಚಿದರೆ ಬೆಲೆಯ ಮಟ್ಟ ಕೂಡ ಹೆಚ್ಚುತ್ತದೆ. ಆಧುನಿಕ ಮಾರುಕಟ್ಟೆ ಅರ್ಥವ್ಯವಸ್ಥೆಗಳು ಹಣವನ್ನು ಬಳಸುತ್ತದೆ ಎಂಬ ಸಂಗತಿಯು ಸಾಮಾನ್ಯ ಬೆಲೆಗಳ ಮಟ್ಟದ ಮೇಲೆ ಮಾತ್ರ ಪರಿಣಾಮ ಬೀರುತ್ತದಯೇ ಹೊರತು ಅದು ಯಾವುದೇ ರೀತಿಯಲ್ಲೂ ಆರ್ಥಿಕ ಚಟುವಟಿಕೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಮಾರ್ಷಲ್ ಮತ್ತು ಇತರ ಅರ್ಥಶಾಸ್ತ್ರಜ್ಞರು ಒತ್ತಿ ಹೇಳಿದರು.

**ಕೇನ್ಸ್ ನ ಕ್ರಾಂತಿ**

1935ರ ಹೊತ್ತಿಗೆ ಇಡೀ ವಿಶ್ವದಲ್ಲಿ ಐದು ವರ್ಷಗಳ ಕಾಲ ಆರ್ಥಿಕ ಕುಸಿತ ರಾಜ್ಯವಾಳುತ್ತಿತ್ತು ಮತ್ತು ಬ್ರಿಟನ್ 15 ವರ್ಷಗಳ ಕಾಲ ನಿರುದ್ಯೋಗದ ಪರಿಸ್ಥಿತಿಯಿಂದ ನರಳಿತು. ಮಾರ್ಷಲನ ವಿದ್ಯಾರ್ಥಿಯಾದ ಜಾನ್ ಮೇನರ್ಡ್ ಕೇನ್ಸ್ (John Maynard Keynes) 1936ರಲ್ಲಿ ಪ್ರಕಟಿಸಿದ *ದ ಜೆನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ (The General Theory of Employment, Interest and Money)* ಎಂಬ ತನ್ನ ಕೃತಿಯಲ್ಲಿ ನಿರುದ್ಯೋಗವನ್ನು ವಿವರಿಸಲು ಒಂದು ಸಿದ್ಧಾಂತವನ್ನು ಬೆಳೆಸಲು ಪ್ರಯತ್ನಿಸಿದ. ಅವನ ವಿಶ್ಲೇಷಣೆಯು ಕೇನ್ಸ್ ಕಾಂತ್ರಿಯನ್ನು ಹುಟ್ಟುಹಾಕಿದ್ದು ಅದು ಗಮನವನ್ನು ಸೂಕ್ಷ್ಮದೃಷ್ಟಿಕೋನ ಅರ್ಥಶಾಸ್ತ್ರದಿಂದ ಹಣದುಬ್ಬರ ಮತ್ತು ನಿರುದ್ಯೋಗದಂತ ಸ್ಥೂಲದೃಷ್ಟಿಕೋನ ಅರ್ಥಶಾಸ್ತ್ರದ ಅಲ್ಪಕಾಲಿಕ ಸಮಸ್ಯೆಗಳ ಕಡೆಗೆ ತಿರುಗಿಸಿತು.

ಕೇನ್ಸ್ ಹಣದ ಪೂರೈಕೆಯಲ್ಲಿ ಆಗುವ ಬದಲಾವಣೆಗಳು ನಿಜವಾದ ಆರ್ಥಿಕತೆ ಅಂದರೆ ಉತ್ಪನ್ನ ಮತ್ತು ಉದ್ಯೋಗದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎನ್ನುವ ನವ ಸಂಪ್ರದಯವಾದೀ ಗೃಹೀತಕ್ಕೆ ಆಕ್ಷೇಪ ವ್ಯಕ್ತಪಡಿಸಿದ. ವಿತ್ತೀಯ (monetary) ಮತ್ತು ಹಣಕಾಸಿನ ಕುಶಲಬಳಕೆ ಮೂಲತಃ ಆಧುನಿಕ ಮಾರುಕಟ್ಟೆ ಆರ್ಥಿಕತೆಗಳ ಮೊದಲ ವಾಸ್ತವ ಎಂದು ಅವನು ಪರಿಗಣಿಸಿದನು. ಒಂದು ವಿತ್ತೀಯ ಅರ್ಥವ್ಯವಸ್ಥೆಯನ್ನು ಕುರಿತ ಅವನ ಸ್ಥೂಲದೃಷ್ಟಿಕೋನ ಅರ್ಥಶಾಸ್ತ್ರದ ಸಿದ್ಧಾಂತವು ನಿರಂತರವಾಗಿ ಕಾಡುವ ನಿರುದ್ಯೋಗವನ್ನು ಈ ಕುಶಲಬಳಕೆಗಳ ಮೂಲಕ ವಿವರಿಸಬಹುದಾಗಿತ್ತು.

ಕೇನ್ಸ್ ಮೌಲ್ಯವನ್ನು ಕೂಡಿಡುವುದು ಹಣದ ಕಾರ್ಯ ಎಂದು ಒತ್ತು ನೀಡುತ್ತಾ ಅವನು ಹಣವನ್ನು ಶೇಖರಿಸಿಟ್ಟುಕೊಳ್ಳುವುದು ಅನಿಶ್ಚಿತ ಭವಿಷ್ಯಕ್ಕೆ ಒಂದು ಸುರಕ್ಷಣೆ ಎಂದು ವಾದಿಸಿದನು. ವಾಸ್ತವವಾಗಿ ವಿತ್ತೀಯ ಮತ್ತು ಹಣಕಾಸಿನ ವ್ಯವಹಾರಗಳು ವರ್ತಮಾನವನ್ನು ಭವಿಷ್ಯದೊಂದಿಗೆ ಸಂಬಂಧಿಸುತ್ತವೆ. ಕೇನ್ಸ್ ಕಾಲಾಂತರದಲ್ಲಿ ಅರ್ಥವ್ಯವಸ್ಥೆಯನ್ನು ಸರಳೀಕರಿಸಿದ ಮಾದರಿಗಳಾಗಿ ವ್ಯವಸ್ಥಿತಗೊಳಿಸುವುದು ಹಾಗೂ ಅಂತಹ ಜಗತ್ತಿನಲ್ಲಿ ಹಣ ಯಾವ ಪಾತ್ರ ವಹಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ ಎಂದು ಪರಿಗಣಿಸಿದನು. ಅವನು ಕಾರ್ಮಿಕ ಸಂಘಟನೆಗಳ ಮತ್ತು ಬೆಲೆಗಳು ಕುಸಿದ ಮಾತ್ರಕ್ಕೆ ಕಾರ್ಮಿಕರು ಕಡಮೆ ಕೂಲಿಯನ್ನು ಪಡೆಯಬೇಕು ಎಂಬುದನ್ನು ವಿರೋಧಿಸುವ ಕಾರ್ಮಿಕರು ಹೊಂದಿದ್ದ ಇತರ ಧೋರಣೆಗಳ ಅಸ್ತಿತ್ವವನ್ನು ಹಾಗೂ ಅವು ನ್ಯಾಯಬದ್ಧವಾದದ್ದು ಎಂಬುದನ್ನು ಕೂಡ ಒಪ್ಪಿಕೊಂಡನು

ಪೂರ್ಣಪ್ರಮಾಣದ ಉದ್ಯೋಗ ಇಲ್ಲದಿದ್ದರೂ ಆರ್ಥಿಕತೆಗಳಿಗೆ ದೀರ್ಘಕಾಲ ಕಾರ್ಯನಿರ್ವಹಿಸಲು ಸಾಧ್ಯವಾಗುವುದಕ್ಕೆ ಕಾರಣವನ್ನು ವಿವರಿಸುವಂತ ಒಂದು ಸಿದ್ಧಾಂತವನ್ನು ಕೇನ್ಸ್ ರೂಪಿಸಿದನು. ಮೂಲಭೂತವಾಗಿ, ಉತ್ಪನ್ನ ಹಾಗೂ ಉದ್ಯೋಗದ ಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಸಾಕಾಗುವಷ್ಟು ಒಟ್ಟಾರೆ ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆ ಇಲ್ಲದೇ ಹೋದರೆ ಹೀಗಾಗುತ್ತದೆ ಎಂದು ವಾದಿಸಿದ. ಅಂದರೆ, ಉಪಭೋಗಕ್ಕಾಗಿ ಖರ್ಚುಮಾಡದೇ ಇರುವ ಆದಾಯವನ್ನು ಉಳಿತಾಯ ಮಾಡಲಾಗುತ್ತದೆ ಮತ್ತು ಅದನ್ನು ಹೊಸ ಕಾರ್ಖಾನೆ ಹಾಗೂ ಯಂತ್ರಗಳ ಮೇಲೆ ಹೂಡಲಾಗುತ್ತದೆ ಎಂದು ಬಹುಕಾಲದಿಂದ ಎಲ್ಲರೂ ಒಪ್ಪಿಕೊಂಡು ಬಂದ ಕಾರಣವಾದವನ್ನು ಅವನು ತಿರಸ್ಕರಿಸಿದ. ಉಳಿತಾಯದಲ್ಲಿ ಆದಂತಹ ಬದಲಾವಣೆಗಳು ರೂಢಿಗತವಾಗಿ ಬಂಡವಾಳದ ವಿಸ್ತರಣೆಯ ಪ್ರಕ್ರಿಯೆಯಲ್ಲಿ ಹೂಡಿಕೆಯಾಗುತ್ತವೆ ಎಂಬುದು ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ನಂಬಿಕೆಯಾಗಿತ್ತು. ಹೂಡಿಕೆಗೆ ಹೋಲಿಸಿದಾಗ ಉಳಿತಾಯ ಹೆಚ್ಚಿಗೆ ಇದ್ದರೆ ಬಡ್ಡಿ ದರ ಕುಸಿಯುತ್ತದೆ; ಹೀಗೆ ಬಡ್ಡಿ ದರ ಕಡಿಮೆಯಾದಾಗ ವ್ಯಾಪಾರವು ಹೂಡಿಕೆಯನ್ನು ಹೆಚ್ಚಿಸಲು ಹಣವನ್ನು ಸಾಲವಾಗಿ ಪಡೆಯುತ್ತದೆ ಎನ್ನುವುದು ಅವರ ವಾದ. ಕೇನ್ಸ್ ಅವರ ಈ ವಾದವನ್ನು ಒಪ್ಪಲಿಲ್ಲ, ಬದಲಿಗೆ ಜನ ತಮ್ಮ ಆದಾಯದಲ್ಲಿ ಉಳಿಸಿದ್ದನ್ನು ಖರ್ಚುಮಾಡುವುದಿಲ್ಲ ಎಂದ. ಒಟ್ಟು ಬೇಡಿಕೆಯಲ್ಲಿನ ಈ ಕುಸಿತವು ಅಗತ್ಯವಾಗಿ ಹಣ ಹೂಡಿಕೆಯು ಸರಿದೂಗಿಸುವುದಿಲ್ಲ ಮತ್ತು ಅಂತಹ ಸಂದರ್ಭದಲ್ಲಿ ಒಟ್ಟು ಬೇಡಿಕೆ ಕುಸಿಯುವಂತಾಗಿ ಅದು ಆದಾಯ ಮತ್ತು ಉತ್ಪನ್ನ ಕುಸಿಯುವುದಕ್ಕೆ ಕಾರಣವಾಗುತ್ತದೆ ಎಂದು ವಾದಿಸಿದ.

ವಾಸ್ತವವಾಗಿ ವ್ಯಕ್ತಿಗಳು ಉಳಿತಾಯ ಮಾಡಲು ಪ್ರಯತ್ನಿಸಿದಾಗ ಇಡೀ ಆರ್ಥಿಕತೆಯ ಉಳಿತಾಯ ಕಡಮೆಯಾಗಿಬಿಡುತ್ತದೆ ಎಂದು ಕೇನ್ಸ್ ವಾದಿಸಿದ. ಈ ಪ್ರವೃತ್ತಿಯನ್ನು ಅವನು *'ಮಿತವ್ಯಯದ ವಿರೋಧಾಭಾಸ (paradox of thrift)'* ಎಂದು ಕರೆದ. ಪರಿಸ್ಥಿತಿ ಚೆನ್ನಾಗಿಲ್ಲದಿದ್ದಾಗ ಜನ ಹೆಚ್ಚೆಚ್ಚು ಉಳಿಸಲು ಪ್ರಯತ್ನಿಸುತ್ತಾರೆ. ಆದಾಗ್ಯೂ, ಎಲ್ಲರೂ ಹೀಗೆ ಮಾಡಿಬಿಟ್ಟರೆ ಒಟ್ಟು ಬೇಡಿಕೆ ಕುಸಿಯುತ್ತದೆ; ಆದ್ದರಿಂದ, ಆದಾಯ ಕಡಮೆಯಾಗುತ್ತದೆ ಮತ್ತು ಅಂತಿಮವಾಗಿ ವಾಸ್ತವದಲ್ಲಿ ಜನ ಕಡಮೆ ಉಳಿಸಿರುತ್ತಾರೆ. ಸ್ಥೂಲ ಮಟ್ಟದಲ್ಲಿ ಇಂತಹ *'ಸಂಯೋಜನೆಯಲ್ಲಿನ ತರ್ಕ ದೋಷಗಳು (fallacies of composition)'* ಕೆಲಸಮಾಡುತ್ತಿರುವುದರಿಂದ ನವ ಸಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಭಾವಿಸುವಂತೆ ಸ್ಥೂಲ ಪರಿಣಾಮಗಳು ಕೇವಲ ವ್ಯಕ್ತಿ ನಿರ್ಧಾರಗಳ ಒಟ್ಟುಮೊತ್ತವನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸುವುದು ಸೂಕ್ತವಲ್ಲ ಎಂದು ಕೇನ್ಸ್ ವಾದಿಸಿದನು. ಹಾಗಾಗಿ ವ್ಯಕ್ತಿಯೊಬ್ಬನಿಗೆ ಒಳ್ಳೆಯದು ಎಂದಿರುವುದನ್ನು ಒಟ್ಟು ಕೂಡಿ ಇಡೀ ಸಮಾಜಕ್ಕೆ ಸಾರಾಸಗಟಾಗಿ ಅನ್ವಯಿಸಿದಾಗ ಅದು ಸಾರ್ವಜನಿಕ ಒಳಿತಿನಲ್ಲಿ ಪರಿಣಮಿಸುವುದು ಎಂದು ಭಾವಿಸುವುದು ಸರಿಯಲ್ಲ ಎಂದನು.

ಕೇನ್ಸ್ ವ್ಯಾಪಾರದ ಪರಿಸ್ಥಿತಿಯಲ್ಲಿ ಅನಿಶ್ಚಿತತೆ ಇದ್ದಾಗ ವ್ಯಾಪಾರಸ್ಥರು ಧೈರ್ಯಗುಂದುತ್ತಾರೆ ಮತ್ತು ಅಂತಹ ಪರಿಸ್ಥಿತಿಯಲ್ಲಿ ಅವರು ತಮ್ಮ ಬಂಡವಾಳವನ್ನು ಹೊಸ ಕಾರ್ಖಾನೆ ಮತ್ತು ಯಂತ್ರಗಳ ಮೇಲೆ ಹೂಡುವುದಕ್ಕಿಂತ, ಲಾಭಗಳಿಸಬಹುದಾದಂತ ಅಲ್ಪಕಾಲೀನ ಆರ್ಥಿಕ ಸೊತ್ತುಗಳನ್ನು ಕೊಳ್ಳುವುದರ ಮೇಲೆ ಹಣ ಹೂಡುತ್ತಾರೆ ಎಂದು ವಾದಿಸಿದನು. ವಾಸ್ತವವಾಗಿ ಬ್ರಿಟನ್ನಿನಲ್ಲಿ ಬಂಡವಾಳಶಾಹಿಗಳು ಹೆಚ್ಚು ನಷ್ಟವಾಗುವ ಸಾಧ್ಯತೆ ಇರುವ ಕಡೆ ಹಣ ಹೂಡಲು ಸ್ವಲ್ಪವೂ ಉತ್ಸುಕರಾಗಿರಲಿಲ್ಲ, ಬದಲಿಗೆ ಹಣಕಾಸು ಮತ್ತು ಶೇರು ಮಾರುಕಟ್ಟೆಗಳಲ್ಲಿ ಹಣ ಹೂಡುವುದರಲ್ಲಿ ಹೆಚ್ಚು ಆಸಕ್ತರಾಗಿದ್ದರು ಎಂದು ಅವನು ವಾದಿಸಿದನು. ನಿರುದ್ಯೋಗವನ್ನು ನಿರ್ಮೂಲ ಮಾಡಲು ಹಾಗೂ ಹೂಡಿಕೆಗೆ ಪೂರಕವಾಗಿರುವ ವ್ಯಾಪಾರದ ವಾತಾವರಣವನ್ನು ಉತ್ತೇಜಿಸಲು ಕೇನ್ಸ್ ವಿತ್ತೀಯ ಹಾಗೂ ವಿತ್ತಿವರ್ಷಕ್ಕೆ ಸಂಬಂಧಿಸಿದ ನೀತಿಗಳನ್ನು ಪ್ರತಿಪಾದಿಸಿದನು. ಅದನ್ನು ಒಟ್ಟು ಬೇಡಿಕೆಯನ್ನು ನಿರ್ವಹಿಸಲು, ಪೂರ್ಣ ಉದ್ಯೋಗವನ್ನು ಕಾಪಾಡಿಕೊಳ್ಳಲು ಮತ್ತು ಕಡಮೆ ಬಡ್ಡಿ ದರಗಳನ್ನು ಉತ್ತೇಜಿಸಲು ಸೂಚಿಸಿದನು. ಹೀಗೆ ಆರ್ಥಿಕತೆಯನ್ನು ಸ್ಥಿರಗೊಳಿಸಲು ಸರ್ಕಾರ ಮತ್ತು ಕೇಂದ್ರ ಬ್ಯಾಂಕಿನ ಮಧ್ಯಪ್ರವೇಶವನ್ನು ಅವನ ಸಿದ್ಧಾಂತವು ಸಮರ್ಥಿಸಿತು. ಇಪ್ಪತ್ತನೆಯ ಶತಮಾನದ ಉದಾರವಾದಕ್ಕೆ ಅವನ ದೃಷ್ಟಿಕೋನಗಳೇ ಆಧಾರವಾಗಿವೆ.

**ಚಟುವಟಿಕೆ**

**ಕೇನ್ಸ್ ಮತ್ತು ಸ್ಥೂಲದೃಷ್ಟಿಕೋನದ ಅರ್ಥಶಾಸ್ತ್ರ**

ಸಣ್ಣ ಸಣ್ಣ ಗುಂಪುಗಳಲ್ಲಿ ಅಥವಾ ಒಂದು ತರಗತಿಯಾಗಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿ. ವಿದ್ಯಾರ್ಥಿಗಳು ಸರದಿಯ ಮೇಲೆ ಭಾಗವಹಿಸಿ ಚರ್ಚೆ ಸುಗಮವಾಗುವಂತೆ ನೋಡಿಕೊಳ್ಳಬೇಕು.

1. ಎಲ್ಲಾ ವ್ಯಕ್ತಿಗಳೂ ಉಳಿತಾಯ ಮಾಡಲು ಪ್ರಾರಂಭಿಸಿದರೆ ಅರ್ಥವ್ಯವಸ್ಥೆಯ ಒಟ್ಟು ಉಳಿತಾಯ ಕಡಮೆಯಾಗುತ್ತದೆ ಎನ್ನುವ ಮಾತೇಕೆ ಸತ್ಯ?
2. ಕೇನ್ಸ್ ನ ಅಭಿಪ್ರಾಯದಲ್ಲಿ ಸೂಕ್ಷ್ಮದೃಷ್ಟಿಕೋನದ ಅರ್ಥಶಾಸ್ತ್ರಕ್ಕಿಂತ ಸ್ಥೂಲದೃಷ್ಟಿಕೋನದ ಅರ್ಥಶಾಸ್ತ್ರ ಏಕೆ ಭಿನ್ನ?
3. ಅರ್ಥವ್ಯವಸ್ಥೆಯಲ್ಲಿ ಸರ್ಕಾರದ ಮಧ್ಯಪ್ರವೇಶವನ್ನು ಕೇನ್ಸ್ ನ ಕಾರಣವಾದ ಏಕೆ ಸಮರ್ಥಿಸುತ್ತದೆ?
4. ನಾವೆಲ್ಲರೂ ಕೇನ್ಸ್ನ ಸಿದ್ಧಾಂತದ ಪ್ರತಿಪಾದಕರು ಎಂದು ಅಧ್ಯಕ್ಷ ನಿಕ್ಸನ್ ಹೇಳಿದನಾದರೂ ಹಲವು ಸಂಪ್ರದಾಯವಾದಿಗಳು ಕೇನ್ಸ್ ಅಪಾಯಕಾರಿ ಎಂದು ಪರಿಗಣಿಸುತ್ತಾರೆ; ಕೆಲವೊಮ್ಮೆ ಅವನನ್ನು ಸಮಾಜವಾದಿ ಎಂದೂ ಕರೆಯುತ್ತಾರೆ. ನಿಮ್ಮ ಅಭಿಪ್ರಾಯದಲ್ಲಿ ಅವರು ಹಾಗೆ ಹೇಳಲು ಕಾರಣವೇನು? ನೀವು ಅವರ ಮಾತುಗಳನ್ನು ಒಪ್ಪುತ್ತೀರಾ?

5. ಅರ್ಥವ್ಯವಸ್ಥೆಯಲ್ಲಿ ಕೇನ್ಸ್ ನ ಸಮರ್ಥನೀಯ ಸರ್ಕಾರದ ಮಧ್ಯಪ್ರವೇಶದ ಸಿದ್ಧಾಂತವನ್ನು ಬಳಸಿಕೊಂಡು ಈಗಿನ ಆರ್ಥಿಕತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಉದ್ದೇಶಿಸಲು ಯಾವ ನೀತಿ ಅಥವಾ ನೀತಿಗಳನ್ನು ಅಮೇರಿಕಾ ಸಂಯುಕ್ತ ರಾಷ್ಟ್ರಕ್ಕೆ ನೀವು ಶಿಫಾರಸ್ಸು ಮಾಡುವಿರಿ?

***

ನಿಮ್ಮ ಚರ್ಚೆಯನ್ನು ವಿಶ್ಲೇಷಿಸಿ. ಹೆಚ್ಚಿನ ವಿದ್ಯಾಥಿಗಳು ಚರ್ಚೆಯಲ್ಲಿ ಭಾಗವಹಿಸಿದರೇ ಅಥವಾ ಕೆಲವೇ ಕೆಲವು ವಿದ್ಯಾರ್ಥಿಗಳು ಚರ್ಚೆಯಲ್ಲಿ ಪ್ರಧಾನವಾಗಿ ಪಾಲ್ಗೊಳ್ಳುತ್ತಿದ್ದರೇ? ಚರ್ಚೆಯಲ್ಲಿ ಇನ್ನೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಲು ಸುಗಮ ಮಾಡಿಕೊಡುವವರು ಇನ್ನೇನು ಮಾಡಬಹುದಿತ್ತು? ಹೆಚ್ಚಿನ ಮಾತುಕತೆ ಸುಗಮ ಮಾಡಿಕೊಡುವವರ ಮೂಲಕ ನಡೆಯಿತೋ ಅಥವಾ ನೇರವಾಗಿ ಪರಸ್ಪರ ವಿದ್ಯಾರ್ಥಿಗಳ ನಡುವೆಯೇ ನಡೆಯಿತೋ? ಚರ್ಚೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಸಾಕಷ್ಟು ಮಾಹಿತಿಗಳು ನಿಮ್ಮ ಬಳಿ ಇದ್ದವೇ? ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಪೂರಕ ಮಾಹಿತಿ ಬೇಕಾಗಿದ್ದ ಪಕ್ಷದಲ್ಲಿ, ಒಬ್ಬ ಶಿಕ್ಷಕರಾಗಿ ನೀವು ಹೇಗೆ ಆ ಚರ್ಚೆಯನ್ನು ನಡೆಸುವಿರಿ?

## ಅಮೇರಿಕಾದ ಸಾಂಸ್ಥಿಕ ಅರ್ಥಶಾಸ್ತ್ರಜ್ಞರು

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಜಾನ್ ಆರ್ ಕಾಮನ್ಸ್ (John R. Commons), ವೆಸ್ಲಿ ಮಿಚೆಲ್ (Wesley Mitchell), ಥೋರ್ಸ್ಟೈನ್ ವೆಬ್ಲೆನ್ (Thorstein Veblen) ಮುಂತಾದವರು ನವ ಸಾಂಪ್ರದಾಯಿಕ ಅರ್ಥಶಾಸ್ತ್ರದ ಸಂಪ್ರದಾಯಬದ್ಧತೆಗೆ ಪರ್ಯಾಯವಾಗಿ ಸಾಂಸ್ಥಿಕ ಅರ್ಥಶಾಸ್ತ್ರವನ್ನು ಬೆಳೆಸಿದರು. ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಮಾನವನ ಬದುಕನ್ನು ಉತ್ತಮಗೊಳಿಸುವ ಪ್ರಗತಿಶೀಲ ಸಾಮಾಜಿಕ ಬದಲಾವಣೆ ತರುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಹಾಗಾಗಿ ಅವರು ಅರ್ಥಶಾಸ್ತ್ರವನ್ನು ಸಮಸ್ಯಾ-ದೃಷ್ಟಿಕೋನದ ಶೋಧನೆ ಎಂದು ಭಾವಿಸುತ್ತಾರೆ; ಅರ್ಥಶಾಸ್ತ್ರವನ್ನು ಅದರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಅರ್ಥವ್ಯವಸ್ಥೆ ಹಾಗೂ ಅದರ ಆರ್ಥಿಕ ಸಂಸ್ಥೆಗಳ ಕಾರ್ಯಾಚರಣೆ ಮತ್ತು ವಿಕಾಸವನ್ನು ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆಯನ್ನಾಗಿ ಭಾವಿಸುತ್ತಾರೆ. ಈ ದೃಷ್ಟಿಕೋನವು ಜಾನ್ ಡ್ಯೂಯಿ (John Dewey) ವ್ಯವಹಾರವಾದದ ತತ್ತ್ವ ಚಿಂತನೆ (philosophy of pragmatism)ಯನ್ನು ಬಹುಮಟ್ಟಿಗೆ ಆಧರಿಸಿದೆ.

ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ವ್ಯಕ್ತಿಗಳು ತಮ್ಮ ಸಂಕುಚಿತ, ಸ್ವಾರ್ಥ ಆರ್ಥಿಕ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಾರೆ ಎಂಬ ಗೃಹೀತದಿಂದ ಪ್ರಾರಂಭವಾಗುವ ನವ ಸಾಂಪ್ರದಾಯಿಕ ವಿಧಾನಕ್ಕೆ ಗಂಭೀರವಾದ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಅನುಗಮನದ (inductive) ಮತ್ತು ನಿಗಮನದ (deductive) ವಿಧಾನಗಳನ್ನು ಬಳಸುತ್ತಾ ನಿಜವಾದ ಆರ್ಥಿಕತೆಯ ಪ್ರಾಯೋಗಿಕ ಅಧ್ಯಯನವನ್ನು ಆಧರಿಸಿದ ಸಾಂಸ್ಥಿಕ ಅರ್ಥಶಾಸ್ತ್ರದ ವಿಕಾಸನದ ಸಿದ್ಧಾಂತಗಳನ್ನು ರೂಪಿಸುತ್ತಾರೆ.

ಮೌಲ್ಯ ತಟಸ್ಥವಾದ (value neutral) ವಿಜ್ಞಾನವನ್ನು ಹುಟ್ಟುಹಾಕಲು ಪ್ರಯತ್ನಿಸಿದ ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರ ಪ್ರಯತ್ನಗಳನ್ನೂ ಸಹ ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ತಳ್ಳಿಹಾಕಿದರು. ಅವರು ಬದುಕನ್ನೇ ಒಂದು ಸಮಸ್ಯಾ-ಪರಿಹಾರಕ ಪ್ರಕ್ರಿಯೆಯಾಗಿ ಪರಿಗಣಿಸುತ್ತಾರೆ ಹಾಗೂ ಪ್ರಜಾಸತ್ತಾತ್ಮಕವಾದ, ಸಮಾನತಾವಾದ, ಕೂಡೊಡೆತನವಾದದಂತ ಸರಿಯಾದ ಮೌಲ್ಯಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಪ್ರಗತಿಯನ್ನು ಸಾಧಿಸಬಹುದು ಎಂದು ವಾದಿಸುತ್ತಾರೆ. ನಿರ್ದಿಷ್ಟವಾಗಿ, ಎಲ್ಲೆಮೀರಿದ ಅಧಿಕಾರಕ್ಕೆ ತಡೆಹಾಕಲು ಹಾಗೂ ಸಾಕಷ್ಟು ಸರಕು ಹಾಗೂ ಸೇವೆಗಳನ್ನು ಮಾರುಕಟ್ಟೆಯ ಉತ್ತೇಜಕಗಳ ಮೂಲಕ ಒದಗಿಸಲಾಗದಂತ ಸಂದರ್ಭದಲ್ಲಿ ಸರ್ಕಾರವನ್ನು ಬಳಸಬೇಕು ಎಂದು ಅವರು ನಂಬುತ್ತಾರೆ.

ಅರ್ಥವ್ಯವಸ್ಥೆಗಳೆಲ್ಲವೂ ವಿಕಸನಗೊಳ್ಳುತ್ತಿರುವ ಸಾಂಸ್ಕೃತಿಕ ವ್ಯವಸ್ಥೆಗಳು ಎಂದು ನೋಡುವ ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಬದಲಾವಣೆ ಹೇಗೆ ಆಗುತ್ತದೆ ಮತ್ತು ಸಕಾರಾತ್ಮಕವಾದ ಬದಲಾವಣೆಯನ್ನು ಹೇಗೆ ಉತ್ತೇಜಿಸುವುದು ಎಂಬುದರ ಮೇಲೆ ಗಮನ ಕೇಂದ್ರೀಕರಿಸುತ್ತಾರೆ. ಸಾಮಾಜಿಕ ವರ್ತನೆಯ ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಅಂಶಗಳ ಪರಸ್ಪರ

ಸಂಬಂಧಗಳ ಮೇಲೆ ಕೇಂದ್ರೀಕರಿಸುತ್ತಾ ಅವರು ಸಮಗ್ರತಾ ದೃಷ್ಟಿಯ ವಿಧಾನವನ್ನು ಅಳವಡಿಸಿಕೊಳ್ಳುತ್ತಾರೆ. ಸಾಂಸ್ಥಿಕ ಬದಲಾವಣೆಯನ್ನು ವಿವರಿಸಲು, ಅವರು ವ್ಯಕ್ತಿಯ ವರ್ತನೆಗಿಂತಲೂ ಹೆಚ್ಚಾಗಿ ಸಾಮಾಜಿಕ ಸಂರಚನೆ ಮತ್ತು ಅಧಿಕಾರದ ಸಂಬಂಧಗಳು ಹೆಚ್ಚು ಮುಖ್ಯವೆಂದು ಪರಿಗಣಿಸುತ್ತಾರೆ.

**ಸಮಕಾಲೀನ ಚರ್ಚೆಗಳು**

ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ತಮ್ಮ ವಿರೋಧಿಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿರುತ್ತಾರೆ, ಕೆಲವೊಮ್ಮೆ ತಮ್ಮ ವಿರೋಧಿಗಳ ಸಿದ್ಧಾಂತ ಅಥವಾ ವಿಧಾನ ಕ್ರಮದ ಕೆಲವು ಅಂಶಗಳನ್ನು ಸೇರಿಸಿಕೊಂಡಿರುತ್ತಾರೆ. ಹೀಗೆ, ಕೇನ್ಸ್‌ನ ಸ್ಥೂಲದೃಷ್ಟಿಕೋನದ ಆರ್ಥಿಕ "ಕ್ರಾಂತಿಯನ್ನು" ನೀರಸಗೊಳಿಸಲಾಯಿತು ಹಾಗೂ ಅದನ್ನು ಎರಡನೆಯ ಮಹಾಯುದ್ಧದ ನಂತರ ಒಟ್ಟು ಗೂಡಿಸಿದ ನವ ಸಾಂಪ್ರದಾಯಿಕ / ಕೇನ್ಸ್ ಸಿದ್ಧಾಂತದೊಳಗೆ ಸೇರಿಸಿಕೊಳ್ಳಲಾಯಿತು. ಆದಾಗ್ಯೂ, ಕೇನ್ಸ್‌ನ ಹೆಚ್ಚು ಗಹನವಾಗಿದ್ದ ಹಲವು ಒಳನೋಟಗಳನ್ನು ಈ ಸಂಯೋಜನೆಯು ಹೊರಗಿಟ್ಟಿತು. ಅದು ಒಂದು ಆರ್ಥಿಕತೆಯು ಸರಕು ಮತ್ತು ಸೇವೆಗಳ ಒಟ್ಟು ಬೇಡಿಕೆಯಲ್ಲಿನ ಬದಲಾವಣೆಗಳಿಗೆ ಹೇಗೆ ಹೊಂದಿಕೊಳ್ಳುತ್ತದೆ ಮತ್ತು ಮಾರುಕಟ್ಟೆಗಳು ಬಡ್ಡಿದರದಲ್ಲಿನ ಬದಲಾವಣೆಗಳಿಗೆ ಎಷ್ಟು ಸ್ಪಂದನಾಶೀಲವಾಗಿವೆ ಎಂಬುದನ್ನು ಆಧರಿಸಿ ಹಣದ ಸರಬರಾಜಿನಲ್ಲಿ ಆಗುವ ಬದಲಾವಣೆಗಳಿಗೆ ಯಾವ ರೀತಿಯಲ್ಲಿ ಹೊಂದಿಕೊಳ್ಳುತ್ತದೆ ಮತ್ತು ಬೆಲೆಗಳು ಎಷ್ಟು ಬೇಗ ಹೊಂದಾಣಿಕೆ ಮಾಡಿಕೊಳ್ಳುತ್ತವೆ ಎಂಬುದನ್ನು ಮುನ್ಗಾಣುವ ಒಂದು ಗಣಿತಶಾಸ್ತ್ರೀಯ ಮಾದರಿಯನ್ನು ಆಧರಿಸಿದೆ.  ಕೇನ್ಸ್‌ವಾದಿ ಅರ್ಥಶಾಸ್ತ್ರಜ್ಞರು ಅರ್ಥವ್ಯವಸ್ಥೆಯು ದೀರ್ಘಕಾಲ ನಿರುದ್ಯೋಗ ಮತ್ತು ಹಣದುಬ್ಬರವನ್ನು ಅನುಭವಿಸಬಹುದು ಎಂಬುದನ್ನು ಗುರುತಿಸುತ್ತಾರೆ, ಮತ್ತು ಸ್ಥಿರತೆ ಹಾಗೂ ಬೆಳವಣಿಗೆಯನ್ನು ಉತ್ತೇಜಿಸಲು ಸರ್ಕಾರ ಅಥವಾ ಕೇಂದ್ರ ಬ್ಯಾಂಕು ವಿವೇಚನೆಯಿಂದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅವರು ಪ್ರತಿಪಾದಿಸುತ್ತಾರೆ.

ತರ್ಕಾಧಾರಿತ ನಿರೀಕ್ಷೆಗಳ ಸಿದ್ಧಾಂತ(rational expectations theory)ವು ನವ ಸಾಂಪ್ರದಾಯಿಕ ಸ್ಥೂಲದೃಷ್ಟಿಕೋನದ ಅರ್ಥಶಾಸ್ತ್ರದ ತೀರಾ ಇತ್ತೀಚಿನ ಪರಿಷ್ಕೃತ ರೂಪವಾಗಿದೆ. ಅದು ಜನರು ವಿವೇಚನಾಶೀಲರಾಗಿರುವುದರಿಂದ  ಅವರು ಭವಿಷ್ಯವನ್ನು ಕುರಿತು ತಮ್ಮ ನಿರೀಕ್ಷೆಗಳನ್ನು ರೂಪಿಸಿಕೊಳ್ಳಲು ಲಭ್ಯವಿರುವ ಎಲ್ಲಾ ಮಾಹಿತಿಯನ್ನೂ ಬಳಸಿಕೊಳ್ಳುತ್ತಾರೆ ಎಂದು ಪ್ರತಿಪಾದಿಸುತ್ತದೆ. ವಿಶೇಷವಾಗಿ ಅವರು ಒಂದು ಅರ್ಥವ್ಯವಸ್ಥೆ ಕೆಲಸ ಮಾಡುವ ಕ್ರಮದ ಸರಿಯಾದ ಮಾದರಿಗಳನ್ನು ಬಳಸುತ್ತಾರೆ. ಉದಾಹರಣೆಗೆ, ಹಣದ ಪೂರೈಕೆಯಲ್ಲಿ ಹೆಚ್ಚಳ ಹಣದುಬ್ಬರವನ್ನು ಉಂಟುಮಾಡುತ್ತದೆ ಎಂಬುದು ಅವರಿಗೆ ತಿಳಿದಿದೆ. ಹಾಗಾಗಿ ಒಂದು ವೇಳೆ ಫೆಡರಲ್ ರಿಸರ್ವ್ ಅಥವಾ ಅಮೇರಿಕಾದ ಕೇಂದ್ರ ಬ್ಯಾಂಕ್ ಹಣದುಬ್ಬರದ ಒತ್ತಡವನ್ನು ತೊಲಗಿಸಲು ಸಾಕಾಗುವಷ್ಟು ಹಣದ ಲಭ್ಯತೆಯನ್ನು ಕಡಮೆಮಾಡುವುದಾಗಿ ಘೋಷಿಸಿದರೆ, ಹಣದುಬ್ಬರ ಕಡಮೆಯಾಗುತ್ತದೆ ಮತ್ತು ಅದು ಹೆಚ್ಚಿನ ಕೂಲಿಗಾಗಿ ಅವರು ಮಾಡುವ ಬೇಡಿಕೆಗಳನ್ನು ತಗ್ಗಿಸಿ, ಮುಂದುವರಿದು ಅದು  ಹಣದುಬ್ಬರದ ಒತ್ತಡಗಳನ್ನು ಇನ್ನೂ ಕಡಮೆ ಮಾಡುತ್ತದೆ ಎಂದು ಕಾರ್ಮಿಕರು ಭಾವಿಸುವರು.  ಈ ಸಿದ್ಧಾಂತ ಸಾರ್ವಜನಿಕರಿಗೆ ಲಭ್ಯವಿರುವ ಮಾಹಿತಿಗಳಿಗೆ ಅನುಸಾರವಾಗಿ ಅವರ ನಿರೀಕ್ಷೆಗಳು ಏಕಾಏಕಿ ಮತ್ತು ನಿರೀಕ್ಷಿಸಬಹುದಾದ ರೀತಿಯಲ್ಲಿ ಬದಲಾಗಬಹುದು ಎಂದು ಸೂಚಿಸುತ್ತದೆ. ಒಂದು ವೇಳೆ ಈ ಸಿದ್ಧಾಂತ ನಿಜವಾಗಿದ್ದರೆ, ಆಗ ಉದ್ಯೋಗವನ್ನು ಹೆಚ್ಚಿಸಲು ಸರ್ಕಾರದ ಮಧ್ಯಪ್ರವೇಶ ಅನವಶ್ಯಕ, ಅಷ್ಟೇ ಅಲ್ಲ ಅದು ಆರ್ಥಿಕ ವ್ಯವಸ್ಥೆಯನ್ನು ಅಸ್ಥಿರಗೊಳಿಸುತ್ತದೆ ಎಂಬ ಕೇನ್ಸ್ನ ಹಿಂದಿನ ಅರ್ಥಶಾಸ್ತ್ರಜ್ಞರ ದೃಷ್ಟಿಕೋನಗಳಿಗೆ ಹೆಚ್ಚಿನ ವಿಶ್ವಾಸಾರ್ಹತೆಯನ್ನು ತಂದುಕೊಡುತ್ತದೆ.

ಮತ್ತೊಂದು ಸಮಕಾಲೀನ ಸಿದ್ಧಾಂತ ಸಾರ್ವಜನಿಕ ಆಯ್ಕೆ ಸಿದ್ಧಾಂತ (public choice theory) ಕ್ಕೆ ಸಂಬಂಧಿಸಿದೆ. ಎಲ್ಲಾ ಮಾರುಕಟ್ಟೆಗಳೂ ಫಲಕಾರಿತ್ವವಾಗಿ ಕೆಲಸ ಮಾಡುವುದಿಲ್ಲ ಎಂಬುದನ್ನು ಸಾಂಪ್ರದಾಯಿಕವಾಗಿ ಎಲ್ಲಾ ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರೂ ಗುರುತಿಸಿದ್ದಾರೆ. ವಿಶೇಷವಾಗಿ ಸರಕು ಅಥವಾ ಸೇವೆಯ ಬೆಲೆಗಳು ನಿಜವಾದ ಉತ್ಪಾದನಾ ವೆಚ್ಚವನ್ನು ತೋರಿಸಲು ವಿಫಲವಾದಾಗ ಅದು ಪರೋಕ್ಷವಾಗಿ ದುರ್ವ್ಯಯ ಅರ್ಥವ್ಯವಸ್ಥೆ (external

diseconomics) ಗಳಲ್ಲಿ ಪರಿಣಮಿಸಬಹುದು. ಉದಾಹರಣೆಗೆ, ಕಾಗದದ ಕಾರ್ಖಾನೆಗಳು ಮತ್ತು ಅಣುಶಕ್ತಿ ಉತ್ಪಾದನಾ ಸ್ಥಾವರಗಳು ಮಾಲಿನ್ಯವನ್ನು ಉಂಟುಮಾಡುತ್ತವೆ, ಆದರೆ ಅವುಗಳ ಉತ್ಪಾದನಾ ವೆಚ್ಚದಲ್ಲಿ ಆ ಖರ್ಚನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಕಾರ್ಖಾನೆಗಳು ಮಾಲಿನ್ಯಗೊಂಡ ತೊರೆಯನ್ನಾಗಲಿ, ನೆಲವನ್ನಾಗಲಿ ಅಥವಾ ಗಾಳಿಯನ್ನಾಗಲಿ ಶುದ್ಧಗೊಳಿಸಬೇಕಿಲ್ಲ. ಹಾಗಾಗಿ ಕಾಗದ ಉತ್ಪನ್ನಗಳ ದರ ಮತ್ತು ವಿದ್ಯುಚ್ಛಕ್ತಿಯ ಬೆಲೆ ಅವು ಇರಬೇಕಾದುದಕ್ಕಿಂತ ಕಡಮೆ ಇರುತ್ತದೆ.

ಮಾರುಕಟ್ಟೆಗಳು ದತ್ತ ಒಂದು ಸರಕು ಅಥವಾ ಸೇವೆ *'ಅವಶ್ಯಕ ಹಾಗೂ ಉಚಿತ ಸರಕಾಗಿದ್ದಾಗ (merit good)'* ಅಂದರೆ ಖಾಸಗಿಯಾಗಿ ಇರುವ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಒದಸಗಿಬೇಕಾದ ಸರಕು ಸೇವೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ವಿಫಲವಾಗುತ್ತವೆ. ಏಕೆಂದರೆ ಸಮುದಾಯದ ಅವಶ್ಯಕತೆಗಳು ವ್ಯಕ್ತಿ ಬಯಸುವುದಕ್ಕಿಂತ ಅಧಿಕವಾಗಿರುತ್ತದೆ. ಉದಾಹರಣೆಗೆ, ಇಂದು ಕಡಮೆ ಆದಾಯದ ಗುಂಪಿನ ಪೋಷಕರಿಗೆ ತಮ್ಮ ಮಕ್ಕಳಿಗೆ ಒಳ್ಳೆಯ ಶಾಲಾಪೂರ್ವ ಶಿಕ್ಷಣವನ್ನು ಕೊಡಿಸಲು ಸಾಧ್ಯವಾಗುವುದಿಲ್ಲವಾದರೂ ಆ ಮಕ್ಕಳಿಗೂ ಆ ಸೌಲಭ್ಯ ದೊರಕಬೇಕೆಂದು ನಾವು ಬಯಸುತ್ತೇವೆ. ಸಮಾಜದ ದೃಷ್ಟಿಯಲ್ಲಿ ಸಮರ್ಪಕ ಆದಾಯವಿರುವ ಪೋಷಕರು ಎಂದು ಪರಿಗಣಿಸಲ್ಪಡುವವರು ತಮ್ಮ ಮಕ್ಕಳ ಆರೈಕೆಗೆಂದು ಬೇಡಿಕೆಯನ್ನು ಮುಂದಿಡದೆ ಇರಬಹುದು. ಅವರಿಗೆ ಸುರಕ್ಷಿತವಾದ, ಹೆಚ್ಚು ತುಟ್ಟಿಯಲ್ಲದ, ತಮ್ಮ ಮಕ್ಕಳ ಆರೈಕೆಗೆ ಅನುಕೂಲಕರವಾದ ಸ್ಥಳದಲ್ಲಿರುವ ವ್ಯವಸ್ಥೆಯಿದ್ದರೆ ಸಾಕು, ಆದರೆ ಅವರಿಗೆ ತಮ್ಮ ಮಕ್ಕಳ ಬೆಳವಣಿಗೆಯಲ್ಲಿ ಉತ್ಕೃಷ್ಟ ಗುಣಮಟ್ಟದ ಆರೈಕೆಯ ಮಹತ್ವದ ಕುರಿತು ತಿಳುವಳಿಕೆ ಇಲ್ಲದೆ ಇರಬಹುದು. ಅಂತಹ ಸಂದರ್ಭಗಳಲ್ಲಿ ಉಪಭೋಗಿಗಳು ಸಮಾಜದ ದೃಷ್ಟಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಆ ಸರಕನ್ನು ಕೊಳ್ಳುವುದಿಲ್ಲ.

ಸಾಂಪ್ರದಾಯಿಕವಾಗಿ, ಮಾರುಕಟ್ಟೆಯ ಈ ವೈಫಲ್ಯಗಳನ್ನು ತೊಡೆದುಹಾಕಲು ಮತ್ತು ಸಂಪನ್ಮೂಲಗಳ ಹಂಚುವಿಕೆಯಲ್ಲಿ ಮಾರುಕಟ್ಟೆಗಳ ಫಲಕಾರಿತ್ವವನ್ನು ಹೆಚ್ಚಿಸಲು ಸರ್ಕಾರವು ನೀತಿಗಳನ್ನು ರೂಪಿಸಬೇಕು ಎಂದು ಅರ್ಥಶಾಸ್ತ್ರಜ್ಞರು ವಾದಿಸಿದ್ದಾರೆ. 1960ರ ಮಧ್ಯಭಾಗದಿಂದಲೂ ಸಾರ್ವಜನಿಕ ಅರ್ಥಶಾಸ್ತ್ರದ ಈ ದೃಷ್ಟಿಕೋನವನ್ನು ಸಾರ್ವಜನಿಕ ಆಯ್ಕೆಯ ಸಿದ್ಧಾಂತಿಗಳು ಪ್ರಶ್ನಿಸುತ್ತಲೇ ಬಂದಿದ್ದು, ಅವರಲ್ಲಿ ಹೆಚ್ಚು ಪ್ರಸಿದ್ಧರಾದವರು ಜೇಮ್ಸ್ ಬ್ಯುಕ್ಯಾನನ್ (James Buchanan). ಸಾರ್ವಜನಿಕ ಆಯ್ಕೆಯ ಸಿದ್ಧಾಂತಿಗಳು ಸರ್ಕಾರವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ವಿಶ್ಲೇಷಿಸಲು ಜನ ಯಾವಾಗಲೂ ತಮ್ಮ ಸ್ವಹಿತಾಸಕ್ತಿಗಳನ್ನು ವಿವೇಕಯುಕ್ತವಾಗಿ ಗರಿಷ್ಠಗೊಳಿಸಿಕೊಳ್ಳುತ್ತಾರೆ ಎಂಬ ಗೃಹೀತವನ್ನು ಅನ್ವಯಿಸುತ್ತಾರೆ. ಅನ್ವಯಿಸುತ್ತಾರೆ. ಯಾವುದೇ ರಾಜಕಾರಣಿಗೂ ಫಲಕಾರಿಯ ಫಲಿತಾಂಶಗಳಲ್ಲಿ ಆಸಕ್ತಿ ಇಲ್ಲ, ಬದಲಿಗೆ ಅವರ ಆಸಕ್ತಿಯೆಲ್ಲಾ ತಮ್ಮ ಸ್ವಂತದ ಹಿತಾಸಕ್ತಿಯನ್ನು ಗರಿಷ್ಠಗೊಳಿಸಿಕೊಳ್ಳುವುದರಲ್ಲೇ ಇರುತ್ತದೆ ಎಂದವರು ಭಾವಿಸುತ್ತಾರೆ. ಹಾಗಾಗಿ ರಾಜಕೀಯ ನಿರ್ಣಯಗಳು ವಿಶೇಷ ರಾಜಕೀಯ ಆಸಕ್ತಿಯನ್ನು ಆಧರಿಸಿರುತ್ತವೆ. ಸಾರ್ವಜನಿಕ ಆಯ್ಕೆ ಸಿದ್ಧಾಂತದ ಮುಖ್ಯ ಉದ್ದೇಶವು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಕೆಲಸಮಾಡುತ್ತಿರುವ ವಿಶೇಷ ಹಿತಾಸಕ್ತಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಚಾಲ್ತಿಯಲ್ಲಿರುವ ನೀತಿಗಳನ್ನೇ ಏಕೆ ಆಯ್ಕೆಮಾಡಿಕೊಳ್ಳಲಾಯಿತು ಎಂಬುದನ್ನು ವಿವರಿಸುವುದಾಗಿದೆ.

ರಾಜಕಾರಣಿಗಳು, ಅಧಿಕಾರಶಾಹಿಗಳು ಮತ್ತು ನಿಯಂತ್ರಕರು ಸೇರಿದಂತೆ ಎಲ್ಲರೂ ಕೇವಲ ತಮ್ಮ ಸ್ವಹಿತಾಸಕ್ತಿಯಿಂದಲೇ ಕೆಲಸ ಮಾಡುತ್ತಾರೆ ಎಂದು ಸಾರ್ವಜನಿಕ ಆಯ್ಕೆಯ ಸಿದ್ಧಾಂತ ಭಾವಿಸುತ್ತದೆ. ಸರ್ಕಾರದಿಂದ ವಿಶೇಷ ಅನುಕೂಲಗಳನ್ನು ಬೇಡುವ ಜನ ತಮ್ಮ ಪ್ರಭಾವವನ್ನು ಬಲಪಡಿಸಿಕೊಳ್ಳಲು ವಿಶೇಷ-ಆಸಕ್ತಿಯ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ. ಇಂತಹ ವಿಶೇಷ ಆಸಕ್ತಿಯ ಗುಂಪುಗಳು ವಿಭಿನ್ನ ಅಧಿಕಾರ ಸ್ಥಾನ ಹೊಂದಿರುವವರೊಂದಿಗೆ ಅಂತರಕ್ರಿಯೆ ನಡೆಸುವ ಆಧಾರದ ಮೇಲೆ ಸಾರ್ವಜನಿಕ ಸಂಸ್ಥೆಗಳು ಬೆಳೆಯುತ್ತವೆ. ಮಾರುಕಟ್ಟೆಯ ಫಲಕಾರಿತ್ವವನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಮಧ್ಯ ಪ್ರವೇಶಿಸುವುದು ತಿಳಿಗೇಡಿತನ ಎಂದು ಸಾರ್ವಜನಿಕ ಆಯ್ಕೆಯ ಸಿದ್ಧಾಂತಿಗಳು ಪರಿಗಣಿಸುತ್ತಾರೆ, ಏಕೆಂದರೆ ಒಂದು ನೀತಿಯನ್ನು ಜಾರಿಗೊಳಿಸಿ ಅನುಷ್ಠಾನಗೊಳಿಸುವುದು ಕೆಲವು ಬಲಾಢ್ಯ ಸ್ವಹಿತಾಸಕ್ತ ಗುಂಪುಗಳಿಗೆ ಅದು ಸೃಷ್ಟಿಸಬಹುದಾದ ಅನುಕೂಲತೆಗಳ ಮೇಲೆ ಅವಲಂಬಿತವಾಗಿರುತ್ತದೆ.

ಹೀಗೆ, ಸಾರ್ವಜನಿಕ ಆಯ್ಕೆಯ ಸಿದ್ಧಾಂತದ ಪ್ರತಿಪಾದಕರು ಯಾರೂ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಿಲ್ಲ ಎನ್ನುತ್ತಾರೆ. ವಾಸ್ತವವಾಗಿ ಅವರು "ಸಾರ್ವಜನಿಕ ಹಿತಾಸಕ್ತಿ" ಎಂಬ ಕಲ್ಪನೆಯನ್ನೇ ಅಲ್ಲಗಳೆಯುತ್ತಾರೆ, ಏಕೆಂದರೆ "ಸಾರ್ವಜನಿಕ" ಎನ್ನುವಂತಹದ್ದು ಯಾವುದೂ ಇಲ್ಲ, ಇರುವುದು ಕೇವಲ ಹಲವು ಖಾಸಗಿ ಆಸಕ್ತಿಗಳ ಒಂದು ಕೂಟವಷ್ಟೆ ಎಂದು. ಆಸಕ್ತ- ಗುಂಪಿನ ರಾಜಕೀಯಗಳು ಪರಸ್ಪರಾನುಕ್ರಿಯೆಯಿಸುವ ಮೂಲಕ ಸಾರ್ವಜನಿಕ ನೀತಿ ನಿರ್ಧಾರವಾಗುತ್ತದೆ, ಮತ್ತು ಸದುದ್ದೇಶದ ಅರ್ಥಶಾಸ್ತ್ರಜ್ಞರ ಮಧ್ಯಪ್ರವೇಶಿಕೆಯು ಕೆಲವು ಬಲಾಢ್ಯ ಖಾಸಗಿ ಹಿತಾಸಕ್ತಿಗಳಿಗೆ ಅವರ ಶಿಫಾರಸ್ಸುಗಳು ಅನುಕೂಲಕರವಾಗಿದ್ದರೆ ಮಾತ್ರ ಕೆಲಸಮಾಡುವುದು.

ಆದಾಗ್ಯೂ, ಸರ್ಕಾರ ಕಾರ್ಯಾಚರಣೆಯಲ್ಲಿ ಒಂದು ನ್ಯಾಯಬದ್ಧವಾದ ಮಧ್ಯಪ್ರವೇಶಿಕೆಗೆ ಆಧಾರವಿದೆ ಎಂದು ಸಾರ್ವಜನಿಕ ಆಯ್ಕೆಯ ಸಿದ್ದಾಂತಿಗಳು ಗುರುತಿಸುತ್ತಾರೆ. ಯಾವುದೇ ಒಂದು ನಿರ್ದಿಷ್ಟ ವ್ಯವಸ್ಥೆಯನ್ನು ಅದನ್ನು ನಡೆಸುತ್ತಿರುವ ನಿಯಮಗಳನ್ನು ಬದಲಿಸುವ ಮೂಲಕ ಅದನ್ನು ಸುಧಾರಿಸಬಹುದು ಎಂದು ಅವರು ವಾದಿಸುತ್ತಾರೆ. ಅಂತಹ ಬದಲಾವಣೆಗಳನ್ನು ಬಲವಂತವಾಗಿ ಹೇರಬಾರದು, ಬದಲಿಗೆ ಅವು ಜನಪ್ರಿಯ ಬೇಡಿಕೆಯನ್ನು ಆಧರಿಸಿರಬೇಕು. ಇದು ಜನರು ಬಯಸಿದ್ದಲ್ಲಿ ಸಾಮಾಜಿಕ ಸಂಸ್ಥೆಗಳಲ್ಲಿ ಮೂಲಭೂತ ಬದಲಾವಣೆಗಳಿಗೆ ತೆರೆದುಕೊಳ್ಳುತ್ತವೆ. ಸಾಮಾನ್ಯವಾಗಿ, ರಾಜಕೀಯ ಹಿತಾಸಕ್ತಿಯ ವಿಭಿನ್ನ ಗುಂಪುಗಳ ನಡುವಿನ ಸ್ಪರ್ಧೆ ಸಾರ್ವಜನಿಕ ನೀತಿಯನ್ನು ನಿರ್ಧರಿಸುವಂತ ವ್ಯವಹಾರದ ಸ್ಥಿತಿಯನ್ನು ಸಾರ್ವಜನಿಕ ಆಯ್ಕೆಯ ಸಿದ್ದಾಂತಿಗಳು ಪ್ರತಿಪಾದಿಸುತ್ತಾರೆ. ಅತ್ಯಂತ ಬಲಾಢ್ಯ ಗುಂಪುಗಳು ಅತಿ ಹೆಚ್ಚಿನ ಪ್ರಭಾವ ಹೊಂದಿರುತ್ತದೆ ಎಂಬುದನ್ನು ದತ್ತವೆಂದು ಈ ಸಿದ್ಧಾಂತಿಗಳು ಪರಿಗಣಿಸುತ್ತಾರೆ. ಇದು ಸಹಜವಾಗಿಯೇ  ಮಾರುಕಟ್ಟೆಯ ಸ್ಪರ್ಧೆಯ ವಿಚಾರಕ್ಕೆ ಸಂಬಂಧಿಸಿದಂತೆಯೂ ಸತ್ಯ. ಏಕಸ್ವಾಮ್ಯದ ಅಧಿಕಾರ (monopoly power) ದಲ್ಲಿ ತಪ್ಪೇನಿಲ್ಲ ಎಂಬುದು ಈ ದೃಷ್ಟಿಕೋನದಲ್ಲಿ ಅಂತರ್ಗತವಾಗಿದೆ.

ಅರ್ಥಶಾಸ್ತ್ರದ ಅಧ್ಯಯನಕ್ಕೆ ಇಷ್ಟೊಂದು ವೈವಿಧ್ಯಮಯ ದೃಷ್ಟಿಕೋನಗಳು ದತ್ತವಾಗಿರುವುದುರಿಂದ ಸಮಾಜ ಅಧ್ಯಯನದ ವೃತ್ತಿಪರರಿಗೆ ಅಸಾಂಪ್ರದಾಯಿಕ ಪರಂಪರೆಗಳಲ್ಲಿ ಲಭ್ಯವಿರುವ ಸಾಧ್ಯತೆಗಳನ್ನು ಗುರುತಿಸುವುದು ಮುಖ್ಯವಾಗುತ್ತದೆ. ಈ ಪರಿಚಯವು ಓದುಗರನ್ನು ಕೆಲವು ಪರ್ಯಾಯ ಸಂಪ್ರದಾಯಗಳನ್ನು ಶೋಧಿಸುವುದಕ್ಕೆ ಉತ್ತೇಜಿಸುತ್ತದೆ ಎಂಬ ಭರವಸೆಯನ್ನು ಹೊಂದಿದ್ದೇವೆ. ಈ ಕೆಳಗಿನ ಅಧ್ಯಯನ ನಿದರ್ಶನ ಸೂಚಿಸುವಂತೆ ಈ ಪ್ರತಿಯೊಂದು ಆಧುನಿಕ ಅಸಾಂಪ್ರದಾಯಿಕ ಪಂಥಗಳು ಸಾರ್ವಜನಿಕ ನೀತಿ ಕುರಿತ ಚರ್ಚೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಉಪಯೋಗವಾಗುವಂತ ದೃಷ್ಟಿಕೋನಗಳನ್ನು ನೀಡುತ್ತವೆ.

**ಚಟುವಟಿಕೆ**

**ಶಾಲಾ ಪಠ್ಯಕ್ರಮದಲ್ಲಿ ನವ ಸಾಂಪ್ರದಾಯಿಕ ರೂಢಮಾದರಿಯ ಬಳಕೆ**

ನವ ಸಾಂಪ್ರದಾಯಿಕ ಅರ್ಥಶಾಸ್ತ್ರಗಳಿಗೆ ಒಂದು ಸೈದ್ಧಾಂತಿಕವಾದ ಉದ್ದೇಶವಿದೆ ಎಂಬುದು ಈಗಾಗಲೇ ಸ್ಪಷ್ಟವಾಗಿರಬೇಕು. ಅದು ಮಾರುಕಟ್ಟೆ ವ್ಯವಸ್ಥೆಯನ್ನು ಅದನ್ನು ಸಮರ್ಥಿಸಿಕೊಳ್ಳುವ, ಅದಕ್ಕೆ ನಿಷ್ಠೆಯನ್ನು ಬೆಳೆಸಿಕೊಳ್ಳುವ ಮತ್ತು ಅದನ್ನು ಉಳಿಸಿಕೊಳ್ಳುವ ರೀತಿಯಲ್ಲಿ ವಿವರಿಸುತ್ತದೆ. ಈ ಅರ್ಥದಲ್ಲಿ  ಅರ್ಥಶಾಸ್ತ್ರ ಯಾವಾಗಲೂ ಒಂದು ಪ್ರಮುಖ ಶಿಕ್ಷಣದ ಉದ್ದೇಶವನ್ನು ಪೂರೈಸಿದೆ. ಜೊತೆಗೆ ಅರ್ಥಶಾಸ್ತ್ರಜ್ಞರು ರೂಪಿಸಿದ ತರ್ಕಾಧಾರಿತ ಆರ್ಥಿಕ ಆಯ್ಕೆಯ ಸಾಧನಗಳು ಬಂಡವಾಳಶಾಹಿ ವ್ಯವಸ್ಥೆಯೊಂದರಲ್ಲಿ ಜನರು ತಮ್ಮ ಸ್ವಹಿತಾಸಕ್ತಿಗಳನ್ನು ಮತ್ತಷ್ಟು ಚೆನ್ನಾಗಿ ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಅವರಿಗೆ ತರಬೇತಿ ನೀಡಲು ಉಪಯುಕ್ತವಾಗಿವೆ. ನವ ಸಾಂಪ್ರದಾಯಿಕ ಅರ್ಥಶಾಸ್ತ್ರದ ಈ  ಎರಡು ಅಂಶಗಳು ಸಾರ್ವಜನಿಕ ಶಾಲಾ ಪಠ್ಯಕ್ರಮದಲ್ಲಿ ಆರ್ಥಿಕ ಶಿಕ್ಷಣ ಅಭಿಯಾನಗಳಿಗೆ ಆಧಾರವಾಗಿವೆ.  ಕಲಿಯಬೇಕಾದ ಮೂಲಭೂತ ಪಾಠಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

- ಬೇಡಿಕೆ ಮತ್ತು ಪೂರೈಕೆಯಲ್ಲಿ ಆಗುವ ಬದಲಾವಣೆಗಳಿಗೆ ಸ್ಪಂದಿಸುವಲ್ಲಿ, ಉಪಭೋಗಿಗಳ ಅಗತ್ಯಗಳನ್ನು ತೃಪ್ತಿಪಡಿಸಲು ಸಂಪನ್ಮೂಲಗಳನ್ನು ಫಲಕಾರಿಯಾಗಿ ಹಂಚಿಕೆಯಾಗುವಂತೆ ಉತ್ತೇಜಿಸುವಲ್ಲಿ ಮಾರುಕಟ್ಟೆ ಅರ್ಥವ್ಯವಸ್ಥೆಗಳ ಸ್ವರೂಪವು ತಮ್ಮಷ್ಟಕ್ಕೆ ಸರಿಪಡಿಸಿಕೊಳ್ಳುವಂತದ್ದು
- ಲಾಭದ ಉದ್ದೇಶಕ್ಕೆ ಹಾಗೂ ವ್ಯಕ್ತಿಗತ ಆರ್ಥಿಕ ಸ್ವಹಿತಾಸಕ್ತಿಯನ್ನು ಪೂರೈಸಿಕೊಳ್ಳುವುದಕ್ಕೆ ಪ್ರಾಮುಖ್ಯತೆ ಮತ್ತು ನೈತಿಕ ಮೌಲ್ಯವನ್ನು ಕೊಡುವುದು
- ಅಸಮ ಆದಾಯ ಹಂಚಿಕೆಯಲ್ಲಿ ಮೂಲ ಸಮತೆ ಇರುವುದು
- ವ್ಯಕ್ತಿಗಳು ಹಾಗೂ ಸಮಾಜವು ಕೊಡುಕೊಳುಗೆಯ ಮನೋಭಾವವನ್ನು ಹೊಂದಿರುವುದಕ್ಕೆ ಪ್ರಾಮುಖ್ಯತೆ ಕೊಡುವುದು
- ಬೆಳವಣಿಗೆ ಮತ್ತು ಸಮೃದ್ಧಿಯನ್ನು ಉತ್ತೇಜಿಸುವಲ್ಲಿ ಬಂಡವಾಳಶಾಹಿಗಳಿಗೆ ಪ್ರಾಮುಖ್ಯತೆ ಕೊಡುವುದು
- ಆರ್ಥಿಕ ಬೆಳವಣಿಗೆ ಮತ್ತು ಅದನ್ನು ಸಾಧ್ಯವಾಗಿಸುವ ಪ್ರಕ್ರಿಯೆಗೆ ಪ್ರಾಮುಖ್ಯತೆ ಕೊಡುವುದು
- ಮಾರುಕಟ್ಟೆಯ ಫಲಕಾರಿತ್ವ ಮತ್ತು ಆರ್ಥಿಕತೆಯ ಸ್ಥಿರತೆಯನ್ನು ಸುಧಾರಿಸಲು ಸರ್ಕಾರದ ಮಧ್ಯಪ್ರವೇಶವನ್ನು ಸಮರ್ಥಿಸಬಹುದಾದಂತ ಅಪರಿಪೂರ್ಣತೆಗಳು ಮಾರುಕಟ್ಟೆಯಲ್ಲಿವೆ, ಆದರೆ ಅದೇ ಹೊತ್ತಿಗೆ ಆರ್ಥಿಕತೆಯಲ್ಲಿ ಸರ್ಕಾರದ ಮಧ್ಯಪ್ರವೇಶವನ್ನು ಮಿತಿಗೊಳಿಸಬೇಕಾಗಿರುವ ಅಗತ್ಯವಿರುವುದು.

ಸಣ್ಣ ಗುಂಪುಗಳಲ್ಲಿ ಕುಳಿತು ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿ:

1. ಮೇಲೆ ಹೇಳಿರುವ ಏಳು ಧ್ಯೇಯಗಳಲ್ಲಿ ನೀವು ಯಾವುದನ್ನು ಒಪ್ಪುತ್ತೀರಿ? ಯಾವುದನ್ನು ಒಪ್ಪುವುದಿಲ್ಲ? ಕಾರಣಗಳನ್ನು ನೀಡಿ.
2. ಮೇಲೆ ಹೇಳಿರುವ ಕೊನೆಯ ಅಂಶವು ಇತರ ಪ್ರತಿಯೊಂದು ಆರು ಅಂಶಗಳೊಂದಿಗೆ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುತ್ತದೆ ಅಥವಾ ವಿರೋಧಾತ್ಮಕವಾಗಿದೆ ಎಂಬುದನ್ನು ಚರ್ಚಿಸಿ.
3. "ಮನುಷ್ಯರು ದೇವತೆಗಳಾಗಿದ್ದ ಪಕ್ಷದಲ್ಲಿ ನಮಗೆ ಸರ್ಕಾರದ ಅವಶ್ಯಕತೆಯೇ ಇರುತ್ತಿರಲಿಲ್ಲ" ಎಂದು ಜೇಮ್ಸ್ ಮ್ಯಾಡಿಸನ್ ಘೋಷಿಸಿದ. ಈ ಹಿಂದೆಯೇ ಹೇಳಿದಂತೆ ಹೆಚ್ಚಿನ ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅರ್ಥವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿನ ಸರ್ಕಾರದ ಮಧ್ಯಪ್ರವೇಶ ಅಗತ್ಯವೆಂದು ಪರಿಗಣಿಸುತ್ತಾರೆ, ಏಕೆ? ಮನುಷ್ಯರು ದೇವತೆಗಳಲ್ಲ ಎನ್ನುವ ಕಾರಣದಿಂದಲೋ? ಅಥವಾ ಅರ್ಥವ್ಯವಸ್ಥೆಯ ಸ್ವರೂಪ ಅದು ಅತ್ಯಂತ ನೈತಿಕ ವರ್ತನೆಯನ್ನು ಹೊಂದಿರುವಂತದ್ದಾಗಿದ್ದರೂ ಕೂಡ ನಮಗೆ ಸರ್ಕಾರದ ಮಧ್ಯಪ್ರವೇಶ ಅಗತ್ಯವಿದೆ ಎನ್ನುವ ಕಾರಣದಿಂದಲೋ? ಅಥವಾ ಸಾರ್ವಜನಿಕ ಆಯ್ಕೆಯ ಅರ್ಥಶಾಸ್ತ್ರಜ್ಞರ ನಿಲುವು ಸರಿಯಾಗಿಯೆ ಇದೆಯೇ? ನಿಮ್ಮ ನಿಲುವನ್ನು ಸಮರ್ಥಿಸಿಕೊಳ್ಳಿ.
4. ನೀವು ಈಗಾಗಲೇ ಇತರ ಅರ್ಥಶಾಸ್ತ್ರದ ಚಿಂತನಾ ಪಂಥಗಳ ಬಗೆ ಕಲಿತಿರುವುದನ್ನು ಆಧರಿಸಿ, ಈ ಪಠ್ಯಕ್ರಮದಲ್ಲಿ ಇನ್ಯಾವ ಅರ್ಥಶಾಸ್ತ್ರದ ಕಲಿಕಾ ಧ್ಯೇಯಗಳನ್ನು ಸೇರಿಸಬೇಕೆಂದು ಸೂಚಿಸಿ.

## ಸಾರ್ವಜನಿಕ ನೀತಿ-ಆಧಾರಿತ ಅರ್ಥಶಾಸ್ತ್ರದ ಪಠ್ಯಕ್ರಮದತ್ತ

ಇಂದಿನ ಅರ್ಥಶಾಸ್ತ್ರ ಶಿಕ್ಷಣದ ಅನೇಕ ಉದ್ದೇಶಗಳ ಬಗ್ಗೆ ನಮಗೆ ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದರೂ ಸಹ ಸಾರ್ವಜನಿಕ ನೀತಿಯ ಚರ್ಚೆಗೆ ಹೆಚ್ಚು ಒತ್ತು ನೀಡಬೇಕು ಎಂಬುದು ನಮ್ಮ ನಂಬಿಕೆ. ಸಮಾಜ ಅಧ್ಯಯನದ ಮೂಲಭೂತ ಗುರಿ ಪ್ರಜೆಯ ಶಿಕ್ಷಣ ಮಾತ್ರವಲ್ಲದೆ ಅದರ ಜೊತೆಗೆ, ಆರ್ಥಿಕ ತತ್ತ್ವಗಳನ್ನು ಕಲಿತು ಅದನ್ನು ನಿಜಜೀವನದ ಸನ್ನಿವೇಶಗಳಿಗೆ ಅನ್ವಯಿಸಿದಾಗ ಅದು ಅತ್ಯಂತ ಆಸಕ್ತಿದಾಯಕವಾಗಿರುತ್ತದೆ. ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಗೆ ಅವರ ವೈಯಕ್ತಿಕ ಮತ್ತು ಸಾರ್ವಜನಿಕ ಬದುಕಿನಲ್ಲಿ ಹೆಚ್ಚು ಪರಿಣಾಮಕಾರಿ ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ನೆರವಾಗುವುದು ಬಹಳ ಮುಖ್ಯವೆಂದು ನಾವು ಭಾವಿಸುತ್ತೇವೆ. ಭವಿಷ್ಯದ ಪ್ರಜೆಗಳು ಸಾರ್ವಜನಿಕ ವಲಯದಲ್ಲಿ ಹೆಚ್ಚು ಭಾಗವಹಿಸುವಂತೆ ಉತ್ತೇಜಿಸುವುದು ಇದಕ್ಕೆ ಅನುಷಂಗಿಕವಾದ ಮತ್ತೊಂದು ಕಾಳಜಿ. ಈ ಅಧ್ಯಾಯದ ಉಳಿದ ಭಾಗವು ಆರ್ಥಿಕ ಸಾರ್ವಜನಿಕ

ನೀತಿ ರೂಪಿಸುವುದಕ್ಕೆ ನೇರವಾಗಿ ಸಂಬಂಧಿಸಿದ ಕೆಲವು ವಿಚಾರಗಳನ್ನು ಪರಿಚಯಿಸುತ್ತದೆ; ನಂತರ ಅದು ಹಿಂದಿನ ಭಾಗದಲ್ಲಿ ಅರ್ಥಶಾಸ್ತ್ರಕ್ಕೆ ನೀಡಿರುವ ಪರ್ಯಾಯ ವಿಧಾನಗಳನ್ನು ಸ್ಪಷ್ಟಪಡಿಸಲು ಒಂದು ಅಧ್ಯಯನ ನಿದರ್ಶನವನ್ನು ನೀಡುತ್ತದೆ. (13ನೇ ಅಧ್ಯಾಯದಲ್ಲಿನ ನಿರ್ಧಾರ ರೂಪಿಸುವ ಕಾರ್ಯತಂತ್ರಗಳನ್ನು ಈ ಅಧ್ಯಯನ ನಿದರ್ಶನಕ್ಕೆ ನೀವು ಅನ್ವಯಿಸಬಹುದು.)

## ಅರ್ಥವ್ಯವಸ್ಥೆಯಲ್ಲಿ ಸರ್ಕಾರದ ಪಾತ್ರ

ವಿಭಿನ್ನ ಆರ್ಥಿಕ ಚಿಂತನೆಯ ಪಂಥಗಳಿಗೆ ಬದ್ಧರಾಗಿರುವವರಲ್ಲಿ ಒಮ್ಮತವಿಲ್ಲದ ಒಂದು ಪ್ರಮುಖ ವಿಷಯವೆಂದರೆ ಅದು 'ಮುಂದುವರಿದಿರುವ ಬಂಡವಾಳಶಾಹಿ ಆರ್ಥಿಕತೆಗಳಲ್ಲಿ ಸರ್ಕಾರದ ಪಾತ್ರವೇನು' ಎಂಬುದರ ಕುರಿತಾಗಿದೆ. ಸಾರ್ವಜನಿಕ ಆಯ್ಕೆಯ ಅರ್ಥಶಾಸ್ತ್ರಜ್ಞರು ಜನರಿಗೆ ಮೂಲಭೂತವಾಗಿ ತಮ್ಮ ಸ್ವಹಿತಾಸಕ್ತಿಯೇ ಮುಖ್ಯವಾಗಿರುವುದರಿಂದ ಮಾರುಕಟ್ಟೆಯಲ್ಲಿ ಸರ್ಕಾರದ ಮಧ್ಯಪ್ರವೇಶ ನಿಜಕ್ಕೂ ಕೇವಲ ಸಾರ್ವಜನಿಕ ವಲಯಕ್ಕೆ ಮಾರುಕಟ್ಟೆ ಪ್ರಭಾವದ ವಿಸ್ತರಣೆಯಷ್ಟೇ ಎಂದು ವಾದಿಸುತ್ತಾರೆ. ಈ ದೃಷ್ಟಿಕೋನದಲ್ಲಿ ಸರ್ಕಾರದ ಮಧ್ಯಪ್ರವೇಶದ ವಿರುದ್ಧ ಮತ್ತು ಮುಕ್ತ ಮಾರುಕಟ್ಟೆಯ ಪರವಾದ ಒಲವು ಸೂಚ್ಯವಾಗಿ ಅಂತರ್ಗತವಾಗಿದೆ, ಏಕೆಂದರೆ ಸರ್ಕಾರದ ಕಾರ್ಯಕ್ರಮಗಳು ಮತ್ತು ನಿಯಮಗಳು ಕೇವಲ ಆರ್ಥಿಕ ಸ್ಪರ್ಧೆಗೆ ಇನ್ನೊಂದು ಅಖಾಡವಷ್ಟೇ.

ಮಾರುಕಟ್ಟೆಯ ಅಪರಿಪೂರ್ಣತೆಗಳನ್ನು ಸರಿಪಡಿಸಲು ಸರ್ಕಾರದ ಮಧ್ಯಪ್ರವೇಶ ಅವಶ್ಯಕ ಎಂದು ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಭಾವಿಸುತ್ತಾರೆ. ಅವರು ವ್ಯಕ್ತಿಯ ವರ್ತನೆಯನ್ನು ಬದಲಾಯಿಸಲು ಆರ್ಥಿಕ ಉತ್ತೇಜಕಗಳನ್ನು ಒದಗಿಸುವುದರ ಮೂಲಕ ಪ್ರೇರೇಪಿಸಿ ವ್ಯಕ್ತಿಯ ಸ್ವಹಿತಾಸಕ್ತಿಯನ್ನು ಪ್ರಭಾವಿಸುವಂತಹ ನೀತಿಗಳನ್ನು ಬೆಂಬಲಿಸುತ್ತಾರೆ. ಸ್ಥೂಲದೃಷ್ಟಿಕೋನದ ಅರ್ಥಶಾಸ್ತ್ರದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅವರಿಗೆ ಹಣದುಬ್ಬರದ ವಿಷಯದಲ್ಲಿ ಅತ್ಯಂತ ಆಸಕ್ತಿ ಇದೆ.

ಕೇನ್ಸ್ ನಂತರದ ಅರ್ಥಶಾಸ್ತ್ರಜ್ಞರು ಸರ್ಕಾರವು ಆರ್ಥಿಕತೆಯನ್ನು ಸ್ಥಿರಗೊಳಿಸಬೇಕು ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಬೇಕು ಎಂದು ಭಾವಿಸುತ್ತಾರೆ. ವಿಶೇಷವಾಗಿ ಅರ್ಥವ್ಯವಸ್ಥೆಯಲ್ಲಿನ ತೀವ್ರ ಸ್ವರೂಪದ ಆರ್ಥಿಕ ಅಸ್ಥಿರತೆ ಹಾಗೂ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಕೈಗಾರಿಕಾ ಯೋಜನೆಯ ಅಗತ್ಯತೆ ಕುರಿತಂತೆ ಕಾಳಜಿ ಹೊಂದಿರುತ್ತಾರೆ.

ಸಾರ್ವಜನಿಕ ನೀತಿಯನ್ನು ರೂಪಿಸುವುದೇ ಅರ್ಥಶಾಸ್ತ್ರಜ್ಞರ ಮೂಲಭೂತ ಕರ್ತವ್ಯ ಎಂದು ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಪರಿಗಣಿಸುತ್ತಾರೆ, ಮತ್ತು ಆರ್ಥಿಕತೆಯಲ್ಲಿ ಸರ್ಕಾರವು ಬಹು ಮುಖ್ಯವಾದ ಪಾತ್ರ ವಹಿಸುತ್ತದೆ ಎಂದು ಅವರು ನಂಬುತ್ತಾರೆ. ಸರ್ಕಾರದ ಪಾತ್ರ ಕೇವಲ ಖಾಸಗಿ ಹಿತಾಸಕ್ತಿಗಳ ನಡುವೆ ಮಧ್ಯಸ್ಥಿಕೆ ವಹಿಸುವುದಷ್ಟೇ ಅಲ್ಲ, ಸಾರ್ವಜನಿಕ ಹಿತಾಸಕ್ತಿಯನ್ನು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ಬೆಂಬಲಿಸುವುದೂ ಆಗಿದೆ ಎಂದು ಭಾವಿಸುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗುವುದೇ ಸರ್ಕಾರದ ಕಾರ್ಯ ಎಂಬುದನ್ನು ದತ್ತವೆಂದು ಮಾರ್ಕ್ಸ್‌ವಾದಿಗಳು ಪರಿಗಣಿಸುತ್ತಾರೆ. ಕೆಲವು ಮಾರ್ಕ್ಸ್‌ವಾದಿಗಳು ಪ್ರಭುತ್ವ ಎಂಬುದು ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಂಡವಾಳಶಾಹಿ ವರ್ಗದ ಸಾಧನವಾಗಿದ್ದು ಅದು ಬಂಡವಾಳಶಾಹಿ ವರ್ಗದ ಹಿತಾಸಕ್ತಿಗೆ ತಕ್ಕಂತೆ ಅವಶ್ಯಕವಾದ ಬದಲಾವಣೆಗಳನ್ನು ಬಲಪ್ರಯೋಗದಿಂದ ತರುವ ಅಧಿಕಾರ ಶಕ್ತಿ ಎಂದು ಪರಿಗಣಿಸುತ್ತಾರೆ. ಇತರ ಮಾರ್ಕ್ಸ್‌ವಾದಿಗಳು ಸರ್ಕಾರದ ಮಧ್ಯಪ್ರವೇಶದಿಂದ ಕಾರ್ಮಿಕ ವರ್ಗ, ಪರಿಸರ ಗುಂಪುಗಳು, ವೃದ್ಧರು, ಮಹಿಳೆಯರು, ಅಲ್ಪಸಂಖ್ಯಾತರು ಕೆಲವು ಅನುಕೂಲಗಳನ್ನು ಪಡೆಯಬಹುದು ಎಂದು ವಾದಿಸುತ್ತಾ ಪ್ರಭುತ್ವವನ್ನು ವರ್ಗ ಸಂಘರ್ಷ ನಡೆಯುವ ಮತ್ತೊಂದು ಅಖಾಡವನ್ನಾಗಿ ನೋಡುತ್ತಾರೆ. ತಳಮಟ್ಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಸಂಘಟಿಸುವಲ್ಲಿ ಭಾಗವಹಿಸುವುದು ಬದಲಾವಣೆಗೆಂದಿರುವ ಅವರ ಕಾರ್ಯತಂತ್ರವಾಗಿದೆ.

ಸಾರ್ವಜನಿಕ ಒಳಿತು ಮತ್ತು ಸಾರ್ವಜನಿಕ ಹಿತಾಸಕ್ತಿಯ ಪರಿಕಲ್ಪನೆಗಳು ಈ ಚರ್ಚೆಗೆ ಬಹು ಮುಖ್ಯವಾಗಿದೆ. ಕೇನ್ಸ್ ಚಿಂತನೆಯ ವಿವಿಧ ಪಂಥದ ಅರ್ಥಶಾಸ್ತ್ರಜ್ಞರನ್ನು ಮತ್ತು ಸಾಂಸ್ಥಿಕವಾದಿಗಳನ್ನು ರಾಜಕೀಯ ಉದಾರವಾದಿಗಳು ಎಂದು ಪರಿಗಣಿಸಲಾಗುತ್ತದೆ. ಅವರು ವ್ಯಕ್ತಿ ಸ್ವಾತಂತ್ರ್ಯವನ್ನು ಅತ್ಯಂತ ಶ್ರೇಷ್ಠ ಮೌಲ್ಯವೆಂದು ಪರಿಗಣಿಸಿದರೂ ಸಹ "ಸಾರ್ವಜನಿಕ ಒಳಿತು" ಎಂಬುದೊಂದಿದೆ ಮತ್ತು ಅದು ಪ್ರತಿ ವ್ಯಕ್ತಿಯು ಖಾಸಗಿ ಒಳಿತು ಎಂದು ನೋಡುವ ವಿಷಯಕ್ಕಿಂತ ಭಿನ್ನವಾದದ್ದು ಎಂದೂ ಸಹ ನಂಬುತ್ತಾರೆ. ಅಂತಹ ಸಾರ್ವಜನಿಕ ಗುರಿಗಳು ಇರುವ ತನಕ, ಸಾರ್ವಜನಿಕ ಹಿತಾಸಕ್ತಿ ಎಂಬುದನ್ನು ಯಾರಾದರೊಬ್ಬರು ಸಮರ್ಥಿಸಲೇಬೇಕಾಗಿದೆ.

## ಪ್ರಜೆಗಳ ಖಾಸಗಿ ಮತ್ತು ಸಾರ್ವಜನಿಕ ಬದುಕು

ಅರ್ಥಶಾಸ್ತ್ರದಲ್ಲಿ ನಾವು ವಿದ್ಯಾರ್ಥಿಗಳಿಗೆ ಯಾವುದು ನಿಮ್ಮ ಹಿತಾಸಕ್ತಿಗೆ ಹೆಚ್ಚು ಲಾಭದಾಯಕವೋ ಅದನ್ನು ಮಾಡಿ ಎಂದು ಕಲಿಸುತ್ತೇವೆ. ಪೌರನೀತಿಯನ್ನು ಕಲಿಸುವಾಗ ದೇಶಕ್ಕೆ ನಿಷ್ಠರಾಗಿರಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಭಾಗವಹಿಸುವುದು ಮುಖ್ಯ ಎನ್ನುವುದನ್ನು ಕಲಿಸುತ್ತೇವೆ. ಪಠ್ಯಕ್ರಮದ ಇವೆರಡು ಭಾಗಗಳ ಗುರಿಗಳಲ್ಲಿ ಅಸಮಂಜಸತೆ ಇದೆಯೇ? ಅರ್ಥಶಾಸ್ತ್ರದಲ್ಲಿ ವಿದ್ಯಾರ್ಥಿಗಳು ತಮ್ಮ ದೀರ್ಘಕಾಲೀನ ಸ್ವಹಿತಾಸಕ್ತಿಗೆ ಪ್ರಾಮುಖ್ಯತೆ ಕೊಡುವ ರೀತಿಯಲ್ಲಿ ಚಿಂತಿಸಲು ಕಲಿತಾಗ ಸಾಮಾನ್ಯವಾಗಿ ಅದು ವಿಶಾಲ ಸಮಾಜದ ಹಿತಾಸಕ್ತಿಗಾಗಿ ಕೆಲಸಮಾಡುವುದುನ್ನು ಒಳಗೊಳ್ಳುತ್ತದೆ ಮತ್ತು ಆದ್ದರಿಂದ ಬಹುಶಃ ಈ ಎರಡರ ಗುರಿಗಳ ನಡುವೆ ಅಸಮಂಜಸತೆ ಇಲ್ಲ ಎಂದು ಹೇಳಬಹುದು. ವೈಯಕ್ತಿಕ ನಿರ್ಧಾರಗಳು ಸಾಮಾನ್ಯವಾಗಿ ವ್ಯಾಪಕ ಪರಿಣಾಮಗಳನ್ನು ಹೊಂದಿರುತ್ತವೆ.

ನಮ್ಮ ಸಾರ್ವಜನಿಕ ಮತ್ತು ಖಾಸಗಿ ಬದುಕುಗಳನ್ನು ಪರಸ್ಪರ ಸ್ಪರ್ಧಿಗಳಂತೆ ನಾವು ಯೋಚಿಸಬಾರದು. ಸಾರ್ವಜನಿಕ ಬದುಕಿಗಿಂತ ಹೆಚ್ಚಾಗಿ ಖಾಸಗಿ ಬದುಕಿನ ಬಗ್ಗೆ, ಅಥವಾ ಖಾಸಗಿ ಬದುಕಿಗಿಂತ ಹೆಚ್ಚಾಗಿ ಸಾರ್ವಜನಿಕ ಬದುಕಿನ ಬಗ್ಗೆ ಯೋಚಿಸುವುದು ಸರಳೀಕೃತ ದ್ವಂದ್ವ (either/or thinking) ಚಿಂತನಾ ಕ್ರಮವಾಗಿದ್ದು ಅದು ಸಮಾಜಕ್ಕೆ ಹಾನಿಕಾರಕ. ಥಾಮಸ್ ಜೆಫರ್ಸನ್ (Thomas Jefferson) "ಸಾರ್ವಜನಿಕ" ಸಂತೋಷ ಎಂಬ ಪರಿಕಲ್ಪನೆಯನ್ನು "ಬದುಕು, ಸ್ವಾತಂತ್ರ್ಯ ಮತ್ತು ಸಂತೋಷದ ಹುಡುಕಾಟ" ಎಂಬ ತನ್ನ ನುಡಿಗಟ್ಟಿನಲ್ಲಿ ಪರಿಚಯಿಸಿದ ಆ ಸಂದರ್ಭದಲ್ಲಿ ಆತ ತನ್ನ ಗಮನವನ್ನು ಪ್ರಧಾನವಾಗಿ ಸಾರ್ವಜನಿಕ ಮತ್ತು ಖಾಸಗಿ ಬದುಕಿನ ನಡುವಿನ ಸಂಬಂಧದ ಮೇಲೆ ಕೇಂದ್ರೀಕರಿಸಿದ್ದನು. ಇಲ್ಲಿ ಸಂತೋಷ ಎನ್ನುವುದು ಕೇವಲ ಒಂದು ಖಾಸಗಿ ಹುಡುಕಾಟವಲ್ಲ, ಬದಲಿಗೆ ಅದು ಸಾರ್ವಜನಿಕ ಪ್ರಜ್ಞೆ, ಸೇವೆ ಮತ್ತು ಬೆಂಬಲದ ಮೂಲಕ ವೈಯಕ್ತಿಕ ಯೋಗಕ್ಷೇಮ ಮತ್ತು ಸಂತೋಷವನ್ನು ವೃದ್ಧಿಸುವ ಒಂದು ರೀತಿಯೂ ಕೂಡ ಆಗಿದೆ. ನಿಜವಾದ ಸಂತೋಷ ಎಂಬುದು ಬಹುತೇಕ ಯಾವಾಗಲೂ ಕೊಡುವ, ಸೇವೆಯ ಮತ್ತು ಒಳಗೊಳ್ಳುವಿಕೆಯ ಪ್ರಜ್ಞೆಯನ್ನು ಒಳಗೊಂಡಿರುತ್ತದೆ - ಅಂದರೆ, ಅದು ಸ್ವಾರ್ಥದ ಗಡಿಗಳನ್ನು ಮೀರಿ ಬದುಕುವುದಾಗಿದೆ. ಈ ಒಳಗೊಳ್ಳುವಿಕೆ ಎಂಬ ನೆಲದಲ್ಲಿ ನಮ್ಮ ರಾಜಕೀಯ ಮತ್ತು ಆರ್ಥಿಕತೆಯ ಬೇರುಗಳು ಗಟ್ಟಿಯಾಗಿ ನೆಡಲ್ಪಟ್ಟಿವೆ. ನಮ್ಮ ಖಾಸಗಿ ಆರ್ಥಿಕ ಮತ್ತು ರಾಜಕೀಯ ಒಳಿತು, ಸಮುದಾಯದ ಒಳಿತನ್ನು ಅವಲಂಬಿಸಿದೆ. "ಸರಿಯಾಗಿ ಅರ್ಥೈಸಿಕೊಂಡ, ಸ್ವಹಿತಾಸಕ್ತಿ" ಎಂಬ ಆಡಂ ಸ್ಮಿತ್‌ನ ಹೇಳಿಕೆಯ ಅರ್ಥ ಕೂಡ ಇದೇ ಆಗಿದೆ (Smith (ಸ್ಮಿತ್) 1937, ಪುಟ 57).

ಒಳಗೊಳ್ಳುವಿಕೆಯ ಈ ಪರಿಕಲ್ಪನೆಯಲ್ಲಿ ನಾವು ಬೆಳೆಸಿಕೊಳ್ಳಲೇಬೇಕಾದ ಬಹು ಮುಖ್ಯವಾದ ತಿಳುವಳಿಕೆ ಎಂದರೆ ಅದು ನಾವು ಒಂದು ಆಯಾಮದಲ್ಲಿ ತೆಗೆದುಕೊಳ್ಳುವ ನಿರ್ಧಾರ ಇನ್ನೊಂದು ಅಯಾಮದ ಮೇಲೂ ಪರಿಣಾಮ ಬೀರುತ್ತದೆ ಎಂದು. ಕೆಲಸ, ಬದುಕಿನ ಶೈಲಿ ಮತ್ತು ಕುಟುಂಬಕ್ಕೆ ಸಂಬಂಧಿಸಿದಂತೆ ನಾವು ಕೈಗೊಳ್ಳುವ ವೈಯಕ್ತಿಕ ನಿರ್ಧಾರಗಳು ಸಾರ್ವಜನಿಕ ವಲಯದ ಮೇಲೂ ಪರಿಣಾಮ ಬೀರುತ್ತದೆ. ಉದಾಹರಣೆಗೆ ಒಂದು ನಿರ್ದಿಷ್ಟವಾದ ಜೀವನಶೈಲಿಯನ್ನು ಅಳವಡಿಸಿಕೊಳ್ಳುತ್ತೇವೆ ಎಂಬ ನಿರ್ಧಾರ ರಾಜಕೀಯ, ನ್ಯಾಯಿಕ, ಆರ್ಥಿಕ, ಸಾಮಾಜಿಕ, ಕಲಾತ್ಮಕ, ನೈತಿಕ ಮತ್ತು ಪರಿಸರ ಸಂಬಂಧಿ ಪರಿಣಾಮಗಳನ್ನು ಹೊಂದಿರುತ್ತದೆ. ಈ ಎಲ್ಲ ಪರಿಣಾಮಗಳು ಸಾರ್ವಜನಿಕ ನೀತಿಯ ಮೇಲೆ ಹೆಚ್ಚು ವ್ಯಾಪಕವಾದ ದೂರಗಾಮಿಯ ಪರಿಣಾಮವನ್ನು ಬೀರುತ್ತದೆ. ಬಡ್ಡಿದರದ ಏರಿಕೆಯಿಂದ ಮೊದಲ್ಗೊಂಡು ಆದ್ಯಾನುಕೂಲ ಆರಂಭಿಕ ಶಿಕ್ಷಣ

ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ತನಕ ಸಾರ್ವಜನಿಕ ನೀತಿ ನಿರ್ಧಾರಗಳು ವ್ಯಕ್ತಿಗಳ ಮೇಲೆ ವೈಯಕ್ತಿಕವಾಗಿ ಪರಿಣಾಮ ಬೀರುತ್ತವೆ ಎಂಬುದು ಸ್ಪಷ್ಟ.

**ನೀತಿಗಳ ರಚನೆ: ಒಂದು ಕಲಿಕಾ ಕಾರ್ಯತಂತ್ರ**

ಅರ್ಥಶಾಸ್ತ್ರದ ಅಧ್ಯಯನವು ನೀತಿ ರಚನೆಯ ಕಾರ್ಯತಂತ್ರಗಳನ್ನು ಬಳಸುವುದನ್ನು ಬೇಡುತ್ತದೆ. ಈ ಕೆಳಗಿನ ಅಧ್ಯಯನ ನಿದರ್ಶನಕ್ಕೆ (ಹೆಚ್ಚಿನ ವಿವರಗಳಿಗೆ 13ನೇ ಅಧ್ಯಾಯವನ್ನು ನೋಡಿ) ನೀವು ಅನ್ವಯಿಸಲು ಸಾಧ್ಯವಾಗಲೆಂದು ಅಂತಹದೊಂದು ಕಾರ್ಯತಂತ್ರವನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ನೀತಿ ರೂಪಿಸುವುದಕ್ಕೆ ಬಳಿಸಿರುವ ಈ ಸಾಮಾನ್ಯ ಕಾರ್ಯತಂತ್ರವು ಒಂದು ಆದರ್ಶಮಾದರಿ ಹಾಗೂ ವಾಸ್ತವದ ನಡುವಿನ, ಸಾಮಾಜಿಕ/ವೈಯಕ್ತಿಕ ತತ್ತ್ವಗಳು ಹಾಗೂ ಜೀವನದ "ವಾಸ್ತವಾಂಶಗಳ" ನಡುವಿನ ಕ್ರಿಯಾಶಕ್ತಿಯ ಪರಿಶೋಧನೆಯ ಮೇಲೆ ಆಧಾರಿತವಾಗಿದೆ. ಅದು ನಾವು ನಂಬುವುದನ್ನು ನಾವು ಮಾಡುವುದರೊಂದಿಗೆ ಹೋಲಿಸಿ ನೋಡುವಂತ ಸಾರ್ವಜನಿಕ ಸಂವಾದವನ್ನು ನಡೆಸುವಂತೆ ಪ್ರೋತ್ಸಾಹಿಸುತ್ತದೆ. ತತ್ತ್ವಗಳು ಹಾಗೂ ಆಚರಣೆಗಳ ನಡುವಿನ ಅಂತರವನ್ನು ಕಡಮೆ ಮಾಡುವ ರೀತಿಯಲ್ಲಿ ನಾವು ನೀತಿಗಳನ್ನು ಹೇಗೆ ರೂಪಿಸುವುದು?

ಈ ಮಾದರಿಯನ್ನು ಬಳಸುವುದಕ್ಕೆ ವಿದ್ಯಾರ್ಥಿಗಳಿಗೆ ನೀತಿಯನ್ನು ರೂಪಿಸಲು ಹಾಗೂ ಅಳವಡಿಸಿಕೊಳ್ಳಲು ಅವಶ್ಯಕವಾದ ಸಾಮರ್ಥ್ಯ ಹಾಗೂ ಮನೋಭಾವನೆಗಳನ್ನು ಬೆಳೆಸಿಕೊಳ್ಳಲು ನೆರವಾಗುವಂತಹ ಕಲಿಕಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವುದನ್ನು ಬೇಡುತ್ತದೆ. ಅವು ಈ ಕೆಲಗಿನವುಗಳನ್ನು ಒಳಗೊಳ್ಳುತ್ತದೆ:

- **ಕಲ್ಪಿಸಿಕೊಳ್ಳುವುದು**. ಸಮಾಜದಲ್ಲಿನ ವ್ಯಕ್ತಿಗಳು ಸಾಧಿಸಬೇಕು ಎಂದು ಕಲ್ಪಿಸಿಕೊಳ್ಳುವ ಇರುವಿಕೆಯ ಆದ್ಯತೆಯ ಸ್ಥಿತಿಯನ್ನು ವಿವರಿಸುವಂತಹ ಸಾಮಾಜಿಕ ಆದರ್ಶ ಮಾದರಿಗಳನ್ನು ಹಾಗೂ ಸಿದ್ಧಾಂತಗಳನ್ನು ಗುರುತಿಸುವುದು, ಅಭಿವೃದ್ಧಿಗೊಳಿಸುವುದು ಹಾಗೂ ಅವುಗಳ ಮೌಲ್ಯಮಾಪನ ಮಾಡುವುದು.
- **ವಾಸ್ತವ ಸ್ಥಿತಿಯನ್ನು ನಿರ್ಣಯಿವುದು**. ಸಂಖ್ಯಾಶಾಸ್ತ್ರೀಯ ದತ್ತಾಂಶ ಹಾಗೂ ಗುಣಾತ್ಮಕ ಮಾಹಿತಿಗಳು ಹಾಗೂ ಅನಿಸಿಕೆಗಳು ಸೇರಿದಂತೆ ನೀವು ಬದಲಾಯಿಸಲು ಇಚ್ಚಿಸುವ ಸಾಮಾಜಿಕ ಅಥವಾ ವೈಯಕ್ತಿಕ ಬದುಕಿನ ವಿಷಯಗಳಿಗೆ ಸಂಬಂಧಿಸಿದಂತೆ ಜ್ಞಾನವನ್ನು ಸಂಪಾದಿಸಲು ವೈಜ್ಞಾನಿಕ ಹಾಗೂ ಇತರ ಕ್ರಮಗಳನ್ನು ಬಳಸುವುದು; ವಿವರಣೆಗಳನ್ನು (ಸಿದ್ಧಾಂತಗಳನ್ನು) ರೂಪಿಸುವುದು.
- **ನೀತಿಗಳನ್ನು ರೂಪಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಜಾರಿಗೊಳಿಸುವುದು**. ಮಧ್ಯದಲ್ಲಿ ಬದಲಾವಣೆಗಳನ್ನು ಮಾಡಲು ನಿರಂತರವಾಗಿ ವಾಸ್ತವಾಂಶ ಹಾಗೂ ಆದರ್ಶಮಾದರಿ ಪರಿಸ್ಥಿತಿಯನ್ನು ಹೋಲಿಸುವುದು.

ಈ ಸಾಮರ್ಥ್ಯ ಅಥವಾ ಮನೋಭಾವನೆಗಳನ್ನು ಕೆಳಗಿನ ಅಧ್ಯಯನ ನಿದರ್ಶನವನ್ನು ಓದುವಾಗ ಗಮನದಲ್ಲಿ ಇಟ್ಟುಕೊಳ್ಳಿ.

## ಅಧ್ಯಯನ ನಿದರ್ಶನ: ಅಮೇರಿಕ ಸಂಯುಕ್ತ ರಾಷ್ಟ್ರದ ಸಾಲ

ಸಾಂಪ್ರದಾಯಿಕವಾಗಿ, ರಾಷ್ಟ್ರದ ಬಜೆಟ್ಟಿನಲ್ಲಿ ಸಮತೋಲನ ಸಾಧಿಸುವುದು ಚುನಾವಣಾ ಸಮಯದಲ್ಲಿ ಜನರನ್ನು ಒಂದುಗೂಡಿಸುವ ಒಂದು ಕರೆಯಾಗಿ ಇದ್ದಿದೆ. ಕೇನ್ಸ್‌ನ ಅರ್ಥಶಾಸ್ತ್ರ ಮಹತ್ವ ಗಳಿಸುವ ಮುನ್ನ ಹಾಗೂ ಎರಡನೆಯ ವಿಶ್ವ ಯುದ್ಧದ ನಂತರದಲ್ಲಿ ಸರ್ಕಾರ ಹಾಗೂ ಕುಟುಂಬಗಳಿಗೆ ಒಂದು ಸಮತೋಲಿತ ಬಜೆಟ್ ವಿವೇಕಯುತವಾದ ಹಣಕಾಸು ನಿರ್ವಹಣೆಯ ಭಾಗವೆಂದು ರಾಜಕಾರಣಿಗಳು ಹಾಗೂ ಪ್ರಜೆಗಳು ಭಾವಿಸಿದ್ದರು. ಅಧ್ಯಕ್ಷ ರೂಸ್‌ವೆಲ್ಟ್ ಕೂಡ 1932ರಲ್ಲಿ ಸಮತೋಲಿತ ಬಜೆಟ್ಟಿನ ಪರವಾಗಿ ಪ್ರಚಾರಮಾಡಿದ್ದರು. ಅಂತೆಯೇ 1980ರಲ್ಲಿ ಅಧ್ಯಕ್ಷ ರೀಗನ್ ಕೂಡ. ಇಂದು

ಸಮತೋಲಿತ ಬಜೆಟ್ಟೊಂದನ್ನು ಕಾಯ್ದುಕೊಳ್ಳುವುದು ಹಲವು ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳಿಗೆ ಕಾನೂನಿನ ದೃಷ್ಟಿಯಿಂದ ಅವಶ್ಯಕವಾಗಿದೆ. ಆದಾಗ್ಯೂ, ಕೇನ್ಸ್ ಗಂಭೀರವಾದ ಆರ್ಥಿಕ ಕುಸಿತ ಸಮಯದಲ್ಲಿ ಸರ್ಕಾರ ಹೆಚ್ಚು ವ್ಯಯಿಸುವ ಅಥವಾ ತೆರಿಗೆಯನ್ನು ಕಡಮೆ ಮಾಡುವ ಮೂಲಕ ಒಟ್ಟು ಬೇಡಿಕೆಯನ್ನು ಹೆಚ್ಚಿಸಬೇಕು ಎಂದು ವಾದಿಸಿದ. ಎರಡನೆಯ ಮಹಾಯುದ್ಧ ನಂತರದ ಯುಗದಲ್ಲಿ ಹೆಚ್ಚಿನ ಅರ್ಥಶಾಸ್ತ್ರಜ್ಞರು ವಾಣಿಜ್ಯ ಆವರ್ತನದ (business cycle) ಸಮಯದಲ್ಲಿ ಬಜೆಟ್‌ನಲ್ಲಿ ಸಮತೋಲನ ಸಾಧಿಸುವುದನ್ನು ಪ್ರತಿಪಾದಿಸಿದರು. ಆರ್ಥಿಕ ಹಿಂಜರಿತದ ಸಮಯದಲ್ಲಿ ಕೊರತೆಯ ಬಜೆಟ್ ಹಾಗೂ ಆರ್ಥಿಕ ವಿಸ್ತರಣೆಯ ಸಮಯದಲ್ಲಿ ಉಳಿಕೆಯ ಬಜೆಟ್‌ನ್ನು ಬೆಂಬಲಿಸಿದರು.

ಇತ್ತೀಚಿನ ದಿನಗಳಲ್ಲಿ ಅಮೇರಿಕಾ ರಾಷ್ಟ್ರ ಸರ್ಕಾರದ ಸಾಲ ಹಿಗ್ಗಿರುವುದಕ್ಕೆ ಹಲವು ಕಾರಣಗಳಿವೆ:

1. ಸರ್ಕಾರದ ಸೇವೆಗಳಿಗೆ ಅಥವಾ ಭಾದ್ಯತೆಗಳಿಗೆ ಮಾಡಬೇಕಾದ ಪಾವತಿಗಳನ್ನು ಮಾಡುವುದಕ್ಕೆ ತೆರಿಗೆದಾರರು ಹೆಚ್ಚೆಚ್ಚು ಇಚ್ಛೆ ತೋರದೇ ಇರುವುದು.
2. 1981-83ರಲ್ಲಿ ಆದಂತಹ ಗಂಭೀರ ಹಿಂಜರಿತ ಹಾಗೂ ಮಂದಗತಿಯ ಆರ್ಥಿಕ ಬೆಳವಣಿಗೆ; ಮತ್ತು
3. ರೀಗನ್ ಆಳ್ವಿಕೆಯಲ್ಲಿ ತೆರಿಗೆ ಕಡಿತದ ಜೊತೆಯಲ್ಲೇ ಮಾಡಿದ ದುಬಾರಿ ರಕ್ಷಣಾ ವೆಚ್ಚ.

ಅಮೇರಿಕಾ ಸಂಯುಕ್ತ ರಾಷ್ಟ್ರದ ಕೊರತೆಯನ್ನು ಕಡಮೆ ಮಾಡುವ ಉದ್ದೇಶದಿಂದ ಕಾಂಗ್ರೆಸ್ ಗ್ರಾಮ್-ರಡ್ಮೆನ್-ಹಾಲಿಂಗ್ಸ್ ಕಾಯ್ದೆ (Gramm-Rudmann-Hollings Act) ಯನ್ನು 1985ರಲ್ಲಿ ಜಾರಿಗೆ ತಂದಿದ್ದು ಅದು ಕೊರತೆಯನ್ನು ಕ್ರಮೇಣ ಕಡಮೆ ಮಾಡುತ್ತಾ 1991ರ ವೇಳೆಗೆ ಒಂದು ಸಮತೋಲನದ ಬಜೆಟ್ಟನ್ನು ಸಾಧಿಸುವುದನ್ನು ಕಡ್ಡಾಯಗೊಳಿಸಿತು. ಆ ಕಾಯ್ದೆಯ ಪ್ರಕಾರ ನಿಗದಿತ ಮಿತಿಗಿಂತ ಬಜೆಟ್ ಕೊರತೆ ಹೆಚ್ಚಾದ ಯಾವುದೇ ವರ್ಷದಲ್ಲಿ ಅಧ್ಯಕ್ಷರು ಪ್ರತಿಯೊಂದು ವೆಚ್ಚದಲ್ಲೂ ಕಡಿತಮಾಡುವುದನ್ನು ಬೇಡುತ್ತದೆ. ಆದಾಗ್ಯೂ, 1985ರ ಕಾಯ್ದೆಯು ಕೊರತೆಯನ್ನು ಕಡಮೆ ಮಾಡುವುದರಲ್ಲಿ ಕೇವಲ ಅತ್ಯಲ್ಪದ ಪರಿಣಾಮ ಬೀರಿದಾಗಿದ್ದು ಅದು ಕೆಲವು ಕಾನೂನುಕರ್ತರು ಪ್ರತಿವರ್ಷ ಬಜೆಟ್ ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂಬ ಸಂವಿಧಾನಾತ್ಮಕ ತಿದ್ದುಪಡಿಯನ್ನು ಬೆಂಬಲಿಸಲು ಕಾರಣವಾಯಿತು.

ಆಯಾ ವರ್ಷದ ಸರ್ಕಾರದ ಆದಾಯ ಹಾಗೂ ವೆಚ್ಚಗಳ ನಡುವಿನ ವ್ಯತ್ಯಾಸ *'ರಾಷ್ಟ್ರ ಸರ್ಕಾರದ ಕೊರತೆ'ಯಾಗುತ್ತದೆ.* ಸರ್ಕಾರದ ಬಜೆಟ್ಟಿನಲ್ಲಿ ಕೊರತೆ ಆದರೆ ವ್ಯತ್ಯಾಸವನ್ನು ಸರಿದೂಗಿಸಲು ಅದು ಸಾಲವನ್ನು ಮಾಡಬೇಕಾಗುತ್ತದೆ. ಕೊರತೆಯನ್ನು ತೀರಿಸಲು ಹಿಂದಿನ ವರ್ಷಗಳಲ್ಲಿ ಅಮೇರಿಕಾ ಸಂಯುಕ್ತ ಸರ್ಕಾರ ಮಾಡಿದ ಸಾಲದಲ್ಲಿ ಪಾವತಿಸಬೇಕಾದ ಬಾಕಿ ಉಳಿದ ಒಟ್ಟು ಮೊತ್ತವು *'ಸಾಲ'* ಎಂದು ಕರೆಸಿಕೊಳ್ಳುತ್ತದೆ. ಸರ್ಕಾರವು ಅದು ಪಡೆದ ಸಾಲಕ್ಕೆ ಭರಿಸಬೇಕಾದ ವೆಚ್ಚವೊಂದೆಂದರೆ ಅದು ತೆರಿಗೆದಾರರ ಹಣದಿಂದ ಸರ್ಕಾರದ ಬಾಂಡುಗಳು ಹಾಗೂ ಟ್ರೆಷರಿ ಬಿಲ್ಲುಗಳನ್ನು (government bonds and reasury bills – ಒಂದು ರೀತಿಯ ಸರ್ಕಾರದ ಸಾಲ ಪತ್ರಗಳು) ಹೊಂದಿರುವವರಿಗೆ ಬಡ್ಡಿ ಕಟ್ಟಬೇಕಾಗಿರುವುದು.

ನಾಗರಿಕರು ಹಾಗೂ ರಾಜಕಾರಣಿಗಳು ಈಗಿನ ಬಜೆಟ್ ಕೊರತೆಗೆ ಪರಿಹಾರ ಏನು ಎಂಬುದರ ಬಗ್ಗೆ ಚರ್ಚಿಸುತ್ತಲೇ ಇದ್ದಾರೆ. ಕೆಲವರ ದೃಷ್ಟಿಯಲ್ಲಿ ಕೊರತೆ ಒಂದು ಪ್ರಮುಖ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆ ಆಗಿದ್ದು ಅದನ್ನು ತೆರಿಗೆ ಹೆಚ್ಚು ಮಾಡಬೇಕಾಗಿ ಬಂದರೂ ಮಾಡಿ ತಕ್ಷಣ ಪರಿಹರಿಸಬೇಕು. ಇನ್ನು ಕೆಲವರ ಪ್ರಕಾರ ಕೊರತೆ ಒಂದು ಸಮಸ್ಯೆ ಅಲ್ಲ ಮತ್ತು ಅಗತ್ಯವಾದರೆ ನಾವು ರಕ್ಷಣೆ ಹಾಗೂ ಸಾಮಾಜಿಕ ಯೋಜನೆಗಳಿಗೆ ಖರ್ಚು ಮಾಡುವುದನ್ನು ಮುಂದುವರಿಸಬೇಕು - ಸಾಲ ಮಾಡಬೇಕಾಗಿ ಬಂದರೂ ಸಹ ಎಂಬುದು. ಇನ್ನು ಕೆಲವರು ಕೊರತೆ ಒಂದು ಸಮಸ್ಯೆ ಎಂದೇ ನಂಬುತ್ತಾರೆ ಮತ್ತು ಅದನ್ನು ಕೇವಲ ಖರ್ಚನ್ನು ಕಡಮೆ ಮಾಡುವುದರಿಂದ ಮಾತ್ರ ಪರಿಹರಿಸಬಹುದು, ಏಕೆಂದರೆ ಈಗಾಗಲೇ ತೆರಿಗೆ ಹೆಚ್ಚಿದೆ ಎಂಬ ಕಾರಣಕ್ಕೆ. ಇತರರು ಕೊರತೆಯನ್ನು ಒಂದು ಸಮಸ್ಯೆಯನ್ನಾಗಿ ಗುರುತಿಸುತ್ತಾರಾದರೂ ಖರ್ಚನ್ನು ಕಡಮೆ ಮಾಡುವುದು ಕೊರತೆಗಿಂತ ದೊಡ್ಡ ದುರಂತ ಎಂದು ಪರಿಗಣಿಸುತ್ತಾರೆ.

ಸಂಯುಕ್ತ ರಾಷ್ಟ್ರ ಸರ್ಕಾರದ ಕೊರತೆ ನಿಜವಾಗಿ ಚಿಂತಿಸಬೇಕಾದಷ್ಟು ಗಂಭೀರವಾದ ವಿಷಯವೇ? ಹೌದಾದರೆ ಆರ್ಥಿಕವಾಗಿ ಯಾವುದೇ ಹಾನಿಯಾಗದಂತೆ ಕೊರತೆಯನ್ನು ಕಡಿತಗೊಳಿಸಿಲು ಸಾಧ್ಯವೇ? ನಮ್ಮ ಮುಂದಿರುವ ದಾರಿಗಳ್ಯಾವುವು? ಈ ಚರ್ಚೆ ವಿಶೇಷವಾಗಿ ಆಸಕ್ತಿದಾಯಕ ಏಕೆಂದರೆ ಅದು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿಷಯದಷ್ಟೇ ಮುಖ್ಯವಾಗಿ ಮೌಲ್ಯಗಳು ಹಾಗೂ ರಾಷ್ಟ್ರೀಯ ಆದ್ಯತೆಗಳಿಗೆ ಸಂಬಂಧಿಸಿದ ವಿಷಯವಾಗಿದೆ.

ಕೋಷ್ಟಕ 8.1ರಲ್ಲಿ ಕಾಲಾಂತರದಲ್ಲಿ ಒಟ್ಟು ಸಾಲ, ಕೊರತೆ ಹಾಗೂ ಬಡ್ಡಿ ಪಾವತಿಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದೊಂದಿಗೆ (GNP (ಜಿಎನ್‌ಪಿ)) ಹೋಲಿಸಲಾಗಿದೆ. ಜಿಎನ್‌ಪಿಯೊಂದಿಗಿನ ಈ ಸಂಖ್ಯೆಗಳ ಅನುಪಾತವು ಕಾಲಾಂತರದಲ್ಲಿ ಸ್ಥಿರವಾಗಿದ್ದರೆ ಸಾಲವು (ಅಥವಾ ಕೊರತೆ) ಕೇವಲ ಆರ್ಥಿಕತೆಯ ಬೆಳವಣಿಗೆಯ ಪ್ರಮಾಣಕ್ಕೆ ಸರಿಸಮವಾಗಿದೆ ಎಂದರ್ಥ.

ಇದಕ್ಕೆ ಸಂಬಂಧಿಸಿದ ಇನ್ನೊಂದು ವಿಷಯವೆಂದರೆ ಸರ್ಕಾರದ ಗಾತ್ರ ಹಾಗೂ ನಿಜವಾದ ಕಾರ್ಯದ ಕುರಿತು ಇರುವ ಭಿನ್ನಾಭಿಪ್ರಾಯ. ಸಂಯುಕ್ತ ಸರ್ಕಾರದ ಕೊರತೆಯನ್ನು ಕಡಿತಗೊಳಿಸುವ ಪ್ರಕ್ರಿಯೆಯಲ್ಲಿ ಯಾರಿಗೆ ತೊಂದರೆಯಾಗುವುದು? ಕೋಷ್ಟಕ 8.2ರಲ್ಲಿ ಎರಡನೆಯ ಮಹಾಯುದ್ಧದ ನಂತರದ ಆವಧಿಯಲ್ಲಿ ರಾಷ್ಟ್ರ ಸರ್ಕಾರ ವಿವಿಧ ಬಾಬ್ತಿನಲ್ಲಿ ಮಾಡಿದ ಖರ್ಚು ಹಾಗೂ ವಿವಿಧ ಮೂಲಗಳಿಂದ ಸಂಗ್ರಹವಾದ ತೆರಿಗೆ ಆದಾಯಗಳ ಸಂರಚನೆಯಲ್ಲಿನ ಬದಲಾವಣೆಗಳನ್ನು ವಿವರಿಸುತ್ತದೆ. ಸರ್ಕಾರದ ಖರ್ಚಿನಲ್ಲಿ ಅತಿ ದೊಡ್ಡ ಪಾಲು ರಕ್ಷಣೆ ಹಾಗೂ ಪಾವತಿಯ ವರ್ಗಾವಣೆಯದ್ದು (ಸಾಮಾಜಿಕ ಭದ್ರತೆ ಹಾಗೂ ವೈದ್ಯಕೀಯ ಅವಶ್ಯಕತೆಗಳಿಗಾಗಿ ಮಾಡಿದ್ದು). ಸಾಪೇಕ್ಷವಾಗಿ ಖರ್ಚಿನ ಒಂದು ಸಣ್ಣ ಭಾಗ ರಕ್ಷಣೇತರ ವಸ್ತುಗಳನ್ನು ಕೊಳ್ಳುವುದಕ್ಕೆ ಹಾಗೂ ಸ್ಥಳೀಯ ಸರ್ಕಾರಗಳಿಗೆ ಅನುದಾನವಾಗಿ ನೀಡುವುದಕ್ಕೆ ಬಳಸಲಾಗುತ್ತದೆ. ಅದು ಶಿಕ್ಷಣ, ಔಷಧ ಸಂಬಂಧಿ ಕಾನೂನು ಜಾರಿ ಇಲಾಖೆ, ರಸ್ತೆ ಹಾಗೂ ವಿಮಾನ ನಿಲ್ದಾಣಗಳು, ಪರಿಸರ ಮಾಲಿನ್ಯ ಶುಚೀಕರಣ, ಬಡತನ ನಿರ್ಮೂಲನ ಕಾರ್ಯಕ್ರಮ, ವಿದೇಶಿ ಸಾಲ, ಆರೋಗ್ಯ ಹಾಗೂ ವೈಜ್ಞಾನಿಕ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಸರ್ಕಾರ ನಡೆಸಲು ತಗಲುವ ವೆಚ್ಚದಂತಹ ಸಂಯುಕ್ತ ರಾಷ್ಟ್ರದ ವ್ಯಯಗಳನ್ನೂ ಒಳಗೊಂಡಿರುತ್ತದೆ.

ಸರ್ಕಾರಿ ಸಾಲವನ್ನು ಉಳಿದ ಸಾಲದಲ್ಲಾಗುವ ಬದಲಾವಣೆಗಳೊಂದಿಗೆ ಹೋಲಿಸಬಹುದು. ಕೆಲವರು ಸರ್ಕಾರದ ಸಾಲ ಈ ಇತರ ರೀತಿಯ ಸಾಲಗಳಷ್ಟು ವೇಗವಾಗಿ ಹೆಚ್ಚಿಲ್ಲ ಮತ್ತು ಆರ್ಥಿಕ ಬೆಳವಣಿಗೆಗೆ ಸಾಲ ಮಾಡಿದರೆ ಅದು ಒಳ್ಳೆಯದೆ ಎಂದು ವಾದಿಸುತ್ತಾರೆ. ಅವರು ಸಾಲ- ಬಾಂಡ್ಸ್, ಟ್ರೆಷರಿ ಬಿಲ್ಸ್, ವಾಣಿಜ್ಯ ಪತ್ರಗಳು, ಸ್ಥಿರಾಸ್ತಿ ಅಡಮಾನಗಳು - ಇವೆಲ್ಲಾ ಸಾಲಗಾರನಿಗೆ, ಅಂದರೆ ಸಾಮಾನ್ಯವಾಗಿ ಅಮೇರಿಕಾದ ಪ್ರಜೆ ಅಥವಾ ಕಾರ್ಪೊರೇಷನ್ನಿಗೆ ಆಸ್ತಿ ಅಥವಾ ಸಂಪತ್ತು ಎಂದು ಸೂಚಿಸುತ್ತಾರೆ. ಕೋಷ್ಟಕ 8.3 ಆಯ್ದ ಕೆಲವು ವರ್ಷಗಳ ಸಾಲದ ವಿವಿಧ ಮೂಲಗಳ ಸಂರಚನೆಯನ್ನು ವಿವರಿಸುತ್ತದೆ.

**ಕೋಷ್ಟಕ 8.1 ಅಮೇರಿಕಾ ಸಂಯುಕ್ತ ರಾಷ್ಟ್ರದ ಸಾಲ ಹಾಗೂ ಕೊರತೆಯಲ್ಲಿನ ಬದಲಾವಣೆಗಳು: 1929-92**

| ವರ್ಷ | ಸಂಯುಕ್ತ ರಾಷ್ಟ್ರದ ಸಾಲ ಜಿಎನ್‌ಪಿಯ ಶೇಕಡಾವಾರು | ಬಡ್ಡಿಯ ಜಿಎನ್‌ಪಿಯ ಶೇಕಡಾವಾರು | ಕೊರತೆ (ಪ್ರಸ್ತುತದ $ ಬಿಲಿಯನ್ಸ್)[1] | ಕೊರತೆ ಜಿಎನ್‌ಪಿಯ ಶೇಕಡಾವಾರು | ಸರ್ಕಾರದ ಖರ್ಚು ಜಿಎನ್‌ಪಿಯ ಶೇಕಡಾವಾರು |
|---|---|---|---|---|---|
| 1929 | 16% | 0.7% | 0.7 | | |
| 1940 | 51 | 1.1 | -2.9 | 3.0% | 6.8% |
| 1946 | 124 | 2.0 | -15.9 | 7.5 | 18.5 |
| I960 | 57 | 1.2 | 0.3 | ಉಳಿಕೆ | 18.3 |
| 1972 | 36 | 1.2 | -23.4 | 2.0 | 18.0 |
| 1976 | 36 | 1.7 | -73.7 | 4.3 | 17.6 |
| 1980 | 35 | 2.4 | -73.8 | 2.8 | 19.4 |
| 1982 | 36 | 2.7 | -128.0 | 4.0 | 23.5 |
| 1986 | 51 | 3.2 | -221.2 | 5.3 | 18.4 |

| | | | | | |
|---|---|---|---|---|---|
| 1990 | 58 | 3.3 | -221.4 | 4.0 | 22.5 |
| 1992 | 66 | 3.3 | -290.4 | 4.8 | 22.8 |

[1]The deficit *includes* deposit insurance outlays.

*Source:* Economic Report of the President, *1990, 1992, 1994*.

**ಕೋಷ್ಟಕ 8.2: ಅಮೇರಿಕ ಸರ್ಕಾರದ ವಿತ್ತೀಯ ವರ್ಷದ ಬಜೆಟ್, ವಿಮೆಯ ಹೂಡಿಕೆಯಲ್ಲಿ ಕೊರತೆಯನ್ನು ಹೊರತುಪಡಿಸಿ: ಕೆಲವು ಆಯ್ದ ವರ್ಷಗಳಿಗೆ (ಪ್ರಸ್ತುತದ $ ಬಿಲಿಯನ್ ಗಳಲ್ಲಿ)**

| | 1946 | 1960 | 1966 | 1972 | 1980 | 1986 | 1991 | 1993 |
|---|---|---|---|---|---|---|---|---|
| **ಆದಾಯ** | **40** | **78** | **134** | **218** | **538** | **814** | **1122** | **1249** |
| ವೈಯಕ್ತಿಕ ಆದಾಯ ತೆರಿಗೆಗಳು | 16 | 41 | 58 | 100 | 249 | 353 | 476 | 512 |
| ಕಾರ್ಪೋರೇಟ್ ಆದಾಯ ತೆರಿಗೆಗಳು | 12 | 22 | 31 | 34 | 70 | 80 | 105 | 135 |
| ಸಾಮಾಜಿಕ ಭದ್ರತಾ ತೆರಿಗೆಗಳು | 5[1] | 6[1] | 30 | 63 | 182 | 327 | 461 | 516 |
| ಇತರೆ | 7 | 9 | 15 | 20 | 36 | 54 | 77 | 86 |
| **ಹೂಡಿಕೆ** | **60** | **77** | **134** | **237** | **587** | **1018** | **1309** | **1484** |
| **ಖರೀದಿ** | | | | | | | | |
| ರಾಷ್ಟ್ರೀಯ ರಕ್ಷಣಾ ವೆಚ್ಚ | 48 | 51 | 56 | 76 | 137 | 274 | 326 | 307 |
| ಇತರೆ ಖರೀದಿಗಳು | | | 18 | 28 | 64 | 100 | 120 | 138 |
| ಪಾವತಿಗಳ ವರ್ಗಾವಣೆ | | | 34 | 79 | 241 | 393 | 509 | 646 |
| ಸ್ಥಳೀಯ ಸರ್ಕಾರಗಳಿಗೆ ಅನುದಾನಗಳು | | | 13 | 33 | 87 | 108 | 147 | 182 |
| ಸಾಲದ ಮೇಲಿನ ಬಡ್ಡಿ | 5 | 9 | 9 | 14 | 50 | 131 | 183 | 181 |
| ಸಬ್ಸಿಡಿಗಳು | | | 5 | 6 | 10 | 22 | 23 | 30 |
| ಇತರೆ ಎಲ್ಲಾ | 8 | 16 | | | | | | |
| **ಕೊರತೆ** | **-21** | **+1** | **-.3** | **-19.2** | **-49.0** | **-203.9** | **-187.8** | **-235.2** |

[1]Not just social security.

*Source:* Economic Report of the President, *1962, 1987, 1992, 1994.*

**ಕೋಷ್ಟಕ 8.3: ಅಮೇರಿಕಾದ ಸಾಲದ ವಿವಿಧ ಖಾತೆಗಳು:**

**ಕೆಲವು ಆಯ್ದ ವರ್ಷಗಳಿಗೆ, 1960-1990 (ಪ್ರಸ್ತುತದ $ ಬಿಲಿಯನ್ ಗಳಲ್ಲಿ)**

| ವರ್ಷ | ಅನುಭೋಗಿಯ ಸಾಲ | ಅಡಮಾನ ಸಾಲ | ಕಾರ್ಪೊರೇಟ್ ಸಾಲ | ಸರ್ಕಾರದ ಸಾಲ | | |
|---|---|---|---|---|---|---|
| | | | | ರಾಜ್ಯ/ಸ್ಥಳೀಯ | ಸಂಯುಕ್ತ ರಾಷ್ಟ್ರ | ಜಿಎನ್‌ಪಿ |
| I960 | 60 | 207 | 939 | 70 | 284 | 515 |
| 1970 | 132 | 474 | 2,084 | 144 | 371 | 1,016 |
| 1975 | 205 | 792 | 3,444 | 220 | 533 | 1,598 |
| 1980 | 350 | 1,460 | 5,471 | 336 | 909 | 2,732 |
| 1985 | 592 | 2,303 | 9,400 | 569 | 1,817 | 4,015 |
| 1990 | 794 | 3,912 | ಲಭ್ಯವಿಲ್ಲ | ಲಭ್ಯವಿಲ್ಲ | 3,206 | 5,524 |

*Source:* Economic Report of the President, *1990, 1992*.

## ಸುಧಾರಣೆಗೆ ಪರ್ಯಾಯ ದೃಷ್ಟಿಕೋನಗಳು ಮತ್ತು ಶಿಫಾರಸ್ಸುಗಳು

### ಸಾರ್ವಜನಿಕ ಆಯ್ಕೆಯ ಶಿಫಾರಸ್ಸುಗಳು

ಜೇಮ್ಸ್ ಬ್ಯುಕ್ಯಾನನ್ ಕೊರತೆಗಳು ಕೇನ್ಸ್‌ವಾದದ ಕ್ರಾಂತಿಯ ಸಹಜ ಫಲಿತಾಂಶ ಎಂದು ವಾದಿಸುತ್ತಾನೆ. ಸರ್ಕಾರ ಅನಿರ್ಬಂಧಿತ ಅಧಿಕಾರ ಹೊಂದುವುದನ್ನು ಸಮ್ಮತಿಸಿದ ಕೇನ್ಸ್‌ವಾದ ಸದಾ ಅಸ್ತಿತ್ವದಲಿರುವ ಪ್ರವೃತ್ತಿಯೊಂದನ್ನು ಪ್ರೋತ್ಸಾಹಿಸಿತು - ವಿಶೇಷ-ಹಿತಾಸಕ್ತಿಗಳನ್ನು ಸಮರ್ಥಿಸುವ (special–interest pleading - ನೆಪಮಾತ್ರಕ್ಕೆ ಸಾರ್ವಜನಿಕ ಪ್ರಯೋಜನಕ್ಕೆ ಎಂದು ಸಮರ್ಥಿಸುವ ಸರ್ಕಾರವು ವಾಸ್ತವವಾಗಿ ತಮ್ಮ ಸಂಕುಚಿತ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಶಾಸಕಾಂಗ ಅಥವಾ ಸರ್ಕಾರವನ್ನು ಪ್ರಭಾವಿಸಲು ಪ್ರಯತ್ನಿಸುವ ವ್ಯಕ್ತಿ ಅಥವಾ ಗುಂಪುಗಳ ವಿಶೇಷ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು.) ಮೂಲಕ ಪ್ರಭುತ್ವದ ಅಧಿಕಾರವನ್ನು ವರ್ಧಿಸಿತು. ಅದು ಪ್ರಭುತ್ವವನ್ನು ಒಂದು ಪೆಡಂಭೂತವನ್ನಾಗಿ ರೂಪಾಂತರಿಸುತ್ತದೆ ಮತ್ತು ಅದರ ಹೆಚ್ಚುತ್ತಿರುವ ತೆರಿಗೆ ಹಾಗೂ ಖರ್ಚನ್ನು ನಿಯಂತ್ರಿಸುವುದು ಕಷ್ಟಸಾಧ್ಯದ ವಿಷಯವಾಗುವುದು ಎಂಬುದು ಅವನ ವಾದವಾಗಿತ್ತು.

ಮಾರುಕಟ್ಟೆಯ ಹಂಚಿಕೆ ಹಾಗೂ ಮುಕ್ತ ಉದ್ದಿಮೆಗೆ ಸಾರ್ವಜನಿಕ ಆಯ್ಕೆ ಬೆಂಬಲ ದತ್ತವಾಗಿರುವುದರಿಂದ ಸಂಯುಕ್ತ ರಾಷ್ಟ್ರ ಸರ್ಕಾರದ ಗಾತ್ರವನ್ನು ಕುಗ್ಗಿಸುವುದು ಪ್ರಮುಖ ಗುರಿಯಾಗಿದೆ; ಕೊರತೆಯನ್ನು ಕಡಮೆ ಮಾಡುವುದು ಅನುಷಂಗಿಕ ವಿಷಯವಾಗಿದೆ. ಅದೇನೇ ಇದ್ದರೂ, ಈ ಅರ್ಥಶಾಸ್ತ್ರಜ್ಞರರು ಸಾರ್ವಜನಿಕ ಕೊರತೆಗೆ ಸಂಬಂಧಿಸಿದಂತೆ ಬದಲಾಗದ ವಿರೋಧಿಸುವ ನಿಲುವನ್ನು ಹೊಂದಿದ್ದಾರೆ. ಅವರು ಕೊರತೆಗಳು ಬಡ್ಡಿಯನ್ನು ಪಾವತಿಸಲು ಹಾಗೂ ಬಹುಶಃ ಸಾಲವನ್ನು ತೀರಿಸುವ ಹೊರೆಯನ್ನು ಭವಿಷ್ಯದ ಪೀಳಿಗೆಯ ಮೇಲೆ ಹೇರುವುದನ್ನು ಒಳಗೊಳ್ಳುತ್ತದೆಯಾದ್ದರಿಂದ ಅದು ಪ್ರಜಾಸತ್ತಾತ್ಮಕ ಸಮಾಜದ ಮೂಲ ತತ್ತ್ವಕ್ಕೇ ವಿರೋಧಾತ್ಮಕವಾಗಿದೆ ಎಂದು ನಂಬುತ್ತಾರೆ. ಭವಿಷ್ಯದ ತೆರಿಗೆದಾರರು ಅವರ ಸಮ್ಮತಿ ಇಲ್ಲದೆ ನಮ್ಮ ಇಂದಿನ ಉಪಭೋಗಕ್ಕೆ ಹಣ ತೆರುತ್ತಿರುವುದು ಸ್ಪಷ್ಟವಾಗಿ ಪ್ರಾತಿನಿಧ್ಯತೆಯಿಲ್ಲದೆ ತೆರಿಗೆ ತೆತ್ತುವ ಸಂಗತಿಯಾಗಿದ್ದು ಅದನ್ನು ಸಂವಿಧಾನಾತ್ಮಕ ಹಾಗೂ ನೈತಿಕ ಎರಡೂ ಅಲ್ಲವೆಂದು ಪರಿಗಣಿಸುತ್ತಾರೆ.

ಸಾರ್ವಜನಿಕ ಆಯ್ಕೆಯ ಅರ್ಥಶಾಸ್ತ್ರಜ್ಞರು ಸಾರ್ವಜನಿಕ ಕೊರತೆಗಳನ್ನು ನಿಷೇಧಿಸಲು ಸಂವಿಧಾನಾತ್ಮಕ ತಿದ್ದುಪಡಿಯನ್ನು ಪ್ರತಿಪಾದಿಸುತ್ತಾರೆ. ಕೆಲವರ ದೃಷ್ಟಿಯಲ್ಲಿ ಪ್ರತಿವರ್ಷವೂ ಬಜೆಟ್ ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂದರೆ ಇತರರು ಒಂದು ಬಲವಾದ, ಜಾರಿಗೊಳಿಸಬಹುದಾದ ಕಾನೂನನ್ನು ರೂಪಿಸಬಹುದಾದರೆ ಅದನ್ನು ವಾಣಿಜ್ಯ ಆವರ್ತನ ಕಾಲಾವಧಿಯಲ್ಲಿ ಸಮತೋಲನ ಸಾಧಿಸುವುದು ಸ್ವೀಕಾರಾರ್ಹ ಎಂದು ವಾದಿಸುತ್ತಾರೆ.

**ನವ ಸಾಂಪ್ರದಾಯಿಕ ವಿಧಾನಗಳು**

ಮುಖ್ಯವಾಹಿನಿಯ ಅರ್ಥಶಾಸ್ತ್ರಜ್ಞರು ಕೂಡ ಅದೇ ಕಾರಣಗಳಿಗೆ ದೊಡ್ಡ ಪ್ರಮಾಣದ ಕೊರತೆಯನ್ನು ಮತ್ತು ಹೆಚ್ಚಾಗುತ್ತಿರುವ ಸಾರ್ವಜನಿಕ ಸಾಲವನ್ನು ವಿರೋಧಿಸುತ್ತಾರೆ. ಅವರು ಸರ್ಕಾರದ ಹೂಡಿಕೆಯ ಬದಲು ಖಾಸಗಿ ಹೂಡಿಕೆಯನ್ನು ಬೆಂಬಲಿಸುತ್ತಾರೆ. ಅವರ ದೃಷ್ಟಿಯಲ್ಲಿ ಸಾರ್ವಜನಿಕ ಕೊರತೆಯು ಧೀರ್ಘ ಅವಧಿಯಲ್ಲಿ ಆರ್ಥಿಕತೆಯ ಮೇಲೆ ನಾಶಕಾರಿಯ ಪರಿಣಾಮವನ್ನು ಬೀರಿದ್ದು ಅದು ಖಾಸಗಿಯಾಗಿ ವ್ಯವಸ್ಥಿತಗೊಂಡ ಆರ್ಥಿಕ ಬೆಳವಣಿಗೆಯ ಅಡಿಪಾಯವನ್ನು ಸವೆಸಿ ಬಿಡುತ್ತದೆ. ಅವರು ಸಂಯುಕ್ತ ರಾಷ್ಟ್ರ ಸರ್ಕಾರದ ಕೊರತೆ ಹೆಚ್ಚಾದರೆ ಖಾಸಗಿ ಹೂಡಿಕೆ ಕಮ್ಮಿಯಾಗುತ್ತದೆ, ಏಕೆಂದರೆ ಸರ್ಕಾರ ಸಾಲ ತೆಗೆದುಕೊಳ್ಳಬಹುದಾದ ನಿಧಿಗಳಿಗೆ ಬೇಡಿಕೆ ಹೆಚ್ಚಾಗಿ ಅದು ಬಡ್ಡಿ ದರವನ್ನು ಹೆಚ್ಚಿಸುತ್ತದೆ; ಇದು ಸರ್ಕಾರ ಪಡೆದುಕೊಳ್ಳುವ ಹೆಚ್ಚಿನ ಸಾಲದ ಕಾರಣದಿಂದ ಏರಿಕೆಯಾದ ಬಡ್ಡಿ ದರವನ್ನು ತೆರಲು ಬಯಸದ ಖಾಸಗಿ ಸಾಲಗಾರರನ್ನು "ದೂರ ಇರಿಸುತ್ತದೆ" ಎಂದು ವಾದಿಸುತ್ತಾರೆ. ಖಾಸಗಿ ಉದ್ದಿಮೆಗಳು ನಿಜವಾದ ಕಾರ್ಖಾನೆಗಳು ಹಾಗೂ ಉಪಕರಣಗಳಲ್ಲಿ ಹಣಕಾಸು ಹೂಡಿಕೆ ಮಾಡುವುದರಿಂದ, ಹೆಚ್ಚಾದ ಸರ್ಕಾರದ ಸಾಲವು ರಾಷ್ಟ್ರದ ಬಂಡವಾಳದ ದಾಸ್ತಾನು ಬೆಳೆಯುವುದನ್ನು ಕುಂಠಿತಗೊಳಿಸುತ್ತದೆ. ಸರ್ಕಾರದ ಸಾಲ ಬಡ್ಡಿದರವನ್ನು ಅವಲಂಬಿಸಿರುವುದಿಲ್ಲವಾದರೂ ಖಾಸಗಿ ಸಾಲ ಅದನ್ನು ಅವಲಂಬಿಸುತ್ತದೆ, ತತ್ಪರಿಣಾಮ ಅದು ಖಾಸಗಿ ಉದ್ದಿಮೆಗಳು ಹೂಡಿಕೆ ಮಾಡುವುದನ್ನು ತಡೆಯುತ್ತದೆ. ಹೀಗೆ, ಸರ್ಕಾರದ ಹೂಡಿಕೆಯು ಖಾಸಗಿ ಹೂಡಿಕೆಗೆ ಹಾಗೂ ಖಾಸಗಿ ಆರ್ಥಿಕತೆಗೆ ನಿಜವಾದ ಸಂಪನ್ಮೂಲಗಳು ಲಭ್ಯವಾಗದಂತೆ ಮಾಡುತ್ತದೆ.

ಹೆಚ್ಚಿನ ಪ್ರಮಾಣದ ಸಂಯುಕ್ತ ರಾಷ್ಟ್ರ ಸರ್ಕಾರದ ಕೊರತೆಗಳು ಹಣದುಬ್ಬರವನ್ನು ತಡೆಯಲು ವಿತ್ತೀಯ ನೀತಿಯನ್ನು ಬಳಸುವುದನ್ನು ಅಡ್ಡಿಪಡಿಸುತ್ತದೆ. ಈ ಮೇಲೆ ಗಮನಿಸಿದಂತೆ, ಹೆಚ್ಚಿನ ಸಂಯುಕ್ತ ರಾಷ್ಟ್ರ ಸರ್ಕಾರದ ಸಾಲವು ಬಡ್ಡಿದರದ ಮೇಲೆ ಒತ್ತಡವನ್ನು ಉಂಟುಮಾಡುವುದಾಗಿದ್ದು ಅದನ್ನು ಕೇವಲ ಫೆಡರಲ್ ರಿಸರ್ವ್ ಅಥವಾ ಕೇಂದ್ರ ಬ್ಯಾಂಕ್ ಹಣದ ಪೂರೈಕೆಯನ್ನು ಹೆಚ್ಚಿಸುವುದರಿಂದ ಮಾತ್ರವೇ ಸರಿದೂಗಿಸಬಹುದು. ಆದಾಗ್ಯೂ, ಅದು ಹಣದುಬ್ಬರದ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರಿಗೆ ವಿದೇಶಿ ಸಾಲಗಾರರನ್ನು ಅವಲಂಬಿಸುವ ವಿಷಯದಲ್ಲೂ ಆತಂಕವಿದೆ. ನಮ್ಮ ಅಗತ್ಯತೆಗಳನ್ನು ಪೂರೈಸಲು ಸಾಕಾಗುವಷ್ಟು ಹಣದೊಂದಿಗೆ ಮುಂದುವರೆಯಲು ವಿದೇಶಿ ಹೂಡಿಕೆಯನ್ನು ನೆಚ್ಚಿಕೊಳ್ಳಲಾಗುವುದಿಲ್ಲ. ಮುಂದುವರೆದು, ಅಮೇರಿಕಾದಲ್ಲಿ ವಿದೇಶಿಯ ಸಾಲ ಹಾಗೂ ಹೂಡಿಕೆ ಮಾಡುವುದು ಸಂದಾಯವಾದ ಬಡ್ಡಿ ಪಾವತಿಗಳು ಮತ್ತು ವಿದೇಶಿಯರು ಗಳಿಸಿದ ಲಾಭಗಳೆಲ್ಲವೂ ದೇಶದಿಂದ ಹೊರ ಹರಿದು ಹೋಗುವಂತಾಗುವುದು.

ಸಂಯುಕ್ತ ರಾಷ್ಟ್ರ ಸರ್ಕಾರದ ಕೊರತೆಯ ಗಾತ್ರದ ಕುರಿತಂತಿರುವ ಆತಂಕದ ಹೊರತಾಗಿಯೂ ನವ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಸಮತೋಲಿತ ಬಜೆಟ್ಟಿಗೆ ಸಂಬಂಧಿಸಿದಂತೆ ತಿದ್ದುಪಡಿ ತರವುದನ್ನು ಬೆಂಬಲಿಸದಿದ್ದು ಅದು ಆರ್ಥಿಕ ನೀತಿ ರೂಪಿಸುವುದನ್ನು ಮತ್ತಷ್ಟು ರಾಜಕೀಯ ವಿಷಯವನ್ನಾಗಿ ಮಾಡಿಬಿಡುತ್ತದೆ. ಇದು ಸ್ಥಿರ ಆರ್ಥಿಕ ಪ್ರಗತಿಯನ್ನು ಕಾಯ್ದುಕೊಳ್ಳುವುದನ್ನು ಮತ್ತಷ್ಟು ಕಷ್ಟಕರವಾಗಿಸುತ್ತದೆ. ಮುಂದುವರೆದು, ಕೊರತೆ ಕಾಣುವಷ್ಟು ಗಂಭೀರವಾದದ್ದಲ್ಲ ಎಂಬುದು ಅವರ ನಂಬಿಕೆ. ಉದಾಹರಣೆಗೆ, ಕೊರತೆಯಲ್ಲಿ ಸಾರ್ವಜನಿಕ ಹೂಡಿಕೆಗಾಗಿ ಮಾಡಿದ ಸಾಲವೂ ಸೇರಿದ್ದು ಅದು ಅದರ ಆರಂಭದ ವೆಚ್ಚಕ್ಕಿಂತ ಹೆಚ್ಚಿನ ಹಣವನ್ನು ಗಳಿಸುತ್ತದೆ.

## ಕೇನ್ಸ್, ಕೇನ್ಸ್ ನಂತರದ ಹಾಗೂ ಸಾಂಸ್ಥಿಕ ಅರ್ಥಶಾಸ್ತ್ರಜ್ಞರ ವಿಶ್ಲೇಷಣೆ

ನವಸಾಂಪ್ರದಾಯಿಕ ಹಾಗೂ ಸಾರ್ವಜನಿಕ ಆಯ್ಕೆಯ ಅರ್ಥಶಾಸ್ತ್ರಜ್ಞರಿಗೆ ವ್ಯತಿರಿಕ್ತವಾಗಿ, ಈ ಅರ್ಥಶಾಸ್ತ್ರಜ್ಞರು ಸಾರ್ವಜನಿಕ ಕಲ್ಯಾಣವನ್ನು ಕುರಿತಂತೆ ಹೆಚ್ಚು ಸಮಗ್ರತಾ ದೃಷ್ಟಿಯಿಂದ ಯೋಚಿಸುತ್ತಾರೆ, ಮತ್ತು ಅವರು ಸಾರ್ವಜನಿಕ ಸೇವೆಗಳು ಒಂದು ಆರೋಗ್ಯಕರ ಆರ್ಥಿಕತೆಯ ನಿರ್ಣಾಯಕ ಭಾಗ ಎಂದು ನಂಬುತ್ತಾರೆ. ಸರ್ಕಾರದ ಕೊರತೆಗಳನ್ನು ಆರ್ಥಿಕ ಹಿಂಜರಿತಗಳ ಸಮಯದಲ್ಲಿ ಮಂದಗತಿಯಲ್ಲಿರುವ ಒಟ್ಟು ಬೇಡಿಕೆಯನ್ನು ಉತ್ತೇಜಿಸುವ ಒಂದು ರೀತಿ ಎಂದವರು ನಂಬುತ್ತಾರೆ. ಹಿಂಜರಿತದ ಸಮಯದಲ್ಲಿ ಬಜೆಟ್ಟಿನಲ್ಲಿ ಸಮತೋಲನ ಸಾಧಿಸುವ ಪ್ರಯತ್ನವು ಅವಿವೇಕತನ ಎಂದು ವಾದಿಸುತ್ತಾರೆ. ಆದಾಗ್ಯೂ, ಕೇನ್ಸ್ವಾದಿಗಳು ಜಿಎನ್‌ಪಿಯ ಶೇಕಡಾವಾರಿನ ಭಾಗವಾಗಿ ಕೊರತೆಯು ಹೆಚ್ಚಾಗುವ ಸಾಧ್ಯತೆಯ ಕುರಿತು ಆತಂಕ ವ್ಯಕ್ತಿಪಡಿಸುತ್ತಾರೆ. ಆದರೆ ಸಂಯುಕ್ತ ರಾಷ್ಟ್ರದ ಕೊರತೆಯನ್ನು ವಿದೇಶಿ ಸಾಲದ ಮೂಲಕ ನೀಗಿಸಿಕೊಳ್ಳುವುದರಿಂದ ಸ್ವಾಯತ್ತತೆಯನ್ನು ಕಳೆದುಕೊಳ್ಳಬಹುದು ಎಂಬುದನ್ನು ಅವರು ಗುರುತಿಸುತ್ತಾರೆ.

ಕೇನ್ಸ್ವಾದಿಗಳಂತೆಯೇ ಕೇನ್ಸ್ ನಂತರದ ಕೆಲವು ಅರ್ಥಶಾಸ್ತ್ರಜ್ಞರು ಮುಂದುವರಿದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳು ಸ್ಥಗಿತಗೊಳ್ಳುವ ಪ್ರವೃತ್ತಿಯನ್ನು ಹೊಂದಿವೆ ಮತ್ತು ಆದ್ದರಿಂದ ವಾಣಿಜ್ಯದ ವಿಸ್ತರಣೆಗೆ ಒಂದು ಆರೋಗ್ಯಕರ ವಾತಾವರಣವನ್ನು ಕಾಪಾಡಿಕೊಳ್ಳಲು ನೆರವಾಗುವಂತ ಒಟ್ಟು ಬೇಡಿಕೆಯನ್ನು ಉತ್ತೇಜಿಸುವ ಸರಕಾರದ ನೀತಿಗಳು ಅಗತ್ಯವೆಂದು ಅವರು ಪರಿಗಣಿಸುತ್ತಾರೆ. ಇದು ಹೆಚ್ಚಿನ ಸಂದರ್ಭದಲ್ಲಿ ಸರ್ಕಾರದ ಕೊರತೆ ಅವಶ್ಯಕ ಎಂದು ಸೂಚಿಸುತ್ತದೆ.

ಸಾಮಾನ್ಯವಾಗಿ, ಸಾಂಸ್ಥಿಕ ಅರ್ಥಶಾಸ್ತ್ರಜ್ಞರಿಗೆ ಸರ್ಕಾರಿ ಸಾಲದ ಗಾತ್ರವನ್ನು ಕುರಿತಂತೆ ಅಂತಹ ಆತಂಕವಿಲ್ಲ. ಆರ್ಥಿಕತೆಯಲ್ಲಿ ಸರ್ಕಾರದ ಪಾತ್ರ ಮುಖ್ಯ ಎಂದು ಬೆಂಬಲಿಸುವ ಅದೇ ನಿಟ್ಟಿನಲ್ಲಿ ಅವರು ಸರ್ಕಾರದ ಸಾರ್ವಜನಿಕ ಹೂಡಿಕೆ ಮುಖ್ಯ ಎಂದು ಪರಿಗಣಿಸುತ್ತಾರೆ. ಸಾಲ ಬೆಳವಣಿಗೆಯನ್ನು ಬೆಂಬಲಿಸುವುದರಿಂದ ಅದು ಆಧುನಿಕ ಜಗತ್ತಿನಲ್ಲಿ ಒಂದು ಅವಶ್ಯಕ ಸಂಸ್ಥೆ ಎಂದು ಅವರು ವಾದಿಸುತ್ತಾರೆ. ಮುಂದುವರೆದು ಅವರು ಅದನ್ನು ಉಪಭೋಗವನ್ನು ಕಡಮೆಮಾಡುವುದರ ಮೂಲಕ ಅಲ್ಲದೆ ಅದು ಉತ್ತೇಜಿಸುವ ಬೆಳವಣಿಗೆಯ ಮೂಲಕ ತೀರಿಸಲಾಗುತ್ತದೆ ಎಂದು ಹೇಳುತ್ತಾರೆ. ಹೀಗೆ, ಉತ್ತಮ ವಿಮಾನ ನಿಲ್ದಾಣ, ರಸ್ತೆ ನಿರ್ಮಾಣ, ಸಾರ್ವಜನಿಕ ಶಿಕ್ಷಣ, ಆರೋಗ್ಯ ಆರೈಕೆ, ಇಂತಹವುಗಳಲ್ಲಿ ಹಣ ಹೂಡುವುದರ ಮೂಲಕ ಇಂದಿನ ಸರ್ಕಾರದ ವ್ಯಯವು ಆರ್ಥಿಕ ಪ್ರಗತಿಯನ್ನು ಹೆಚ್ಚಿಸದಲ್ಲಿ, ಈ ಉತ್ತೇಜನ ಪಾವತಿಸಬೇಕಾದ ಹೆಚ್ಚುವರಿ ಬಡ್ಡಿಗಿಂತ ಹೆಚ್ಚಿನ ಲಾಭವನ್ನು ದಕ್ಕಿಸಿ ಕೊಡುತ್ತದೆ. ಆದಾಗ್ಯೂ, ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಸಾಲ ಹಾಗೂ ಕಡಮೆ ಬಡ್ಡಿ ದರಕ್ಕೆ ಸಮನಾದ ಲಭ್ಯಾವಕಾಶ, ಮತ್ತು ಉತ್ಪಾದನೆಯ ಅವಶ್ಯಕತೆಗಳಿಗೆ ಸ್ಪಂದಿಸಬೇಕಾದ ಸಾಲಗಾರರ ಜವಾಬ್ದಾರಿಯ ಮಹತ್ವಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ.

ಕೇನ್ಸ್‌ವಾದಿಗಳು ಹಾಗೂ ಸಾಂಸ್ಥಿಕ ಅರ್ಥಶಾಸ್ತ್ರಜ್ಞರು ಸಾಲಗಾರರನ್ನು ದೂರ ತಳ್ಳುತ್ತದೆ ಎಂಬ ಗೃಹೀತವನ್ನು ತಳ್ಳಿಹಾಕುತ್ತಾರೆ. ಅವರು ಇಂದು ಹಣಕಾಸಿನ ಮಾರುಕಟ್ಟೆಗಳು ಇಡೀ ಜಗತ್ತನ್ನು ವ್ಯಾಪಿಸಿಕೊಂಡಿವೆ ಎಂದು ವಾದಿಸುತ್ತಾರೆ. ಅಂದರೆ ಅಮೇರಿಕಾದ ಟ್ರೆಷರಿಯ ಸಾಲದ ಬೇಡಿಕೆಯನ್ನು ಕೇವಲ ದೇಶೀಯ ಸಾಲದ ಮೂಲವನ್ನು ಮಾತ್ರ ಅವಲಂಬಿಸಿದ ಪ್ರಮಾಣಕ್ಕೆ ಹೋಲಿಸಿದರೆ ಅದು ಅಷ್ಟೊಂದು ಗಣನೀಯವಲ್ಲ ಎಂದರ್ಥ. ಫೆಡರಲ್ ರಿಸರ್ವ್ ಅಥವಾ ಕೇಂದ್ರ ಬ್ಯಾಂಕ್ ಸಾಲದ ಲಭ್ಯತೆಯ ಮೇಲೆ ಪರಿಣಾಮ ಬೀರಬಹುದು ಹಾಗೂ ಹಣದುಬ್ಬರವು ಅಧಿಕ ಖಾಸಗಿ ಬೇಡಿಕೆಯಿಂದ ಉಂಟಾಗುವಷ್ಟೇ ಅಧಿಕ ಸಾರ್ವಜನಿಕ ಹೂಡಿಕೆಯಿಂದ ಉಂಟಾಗುತ್ತದೆ ಎಂಬುದನ್ನು ಸೂಚಿಸಲು ಅವರು ಮರೆಯುವುದಿಲ್ಲ.

## ಮಾರ್ಕ್ಸ್‌ವಾದಿಯರ ದೃಷ್ಟಿಕೋನಗಳು

ಮಾರ್ಕ್ಸ್‌ವಾದಿಗಳು ಸಂಯುಕ್ತ ರಾಷ್ಟ್ರ ಕೊರತೆಯ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಿಲ್ಲ, ಆದರೆ ಅವರು ಅದಕ್ಕೆ ವಿವರಣೆಗಳನ್ನು ಒದಗಿಸುತ್ತಾರೆ. ಅವರು ದೊಡ್ಡ ಪ್ರಮಾಣದ ಸಾರ್ವಜನಿಕ ಕೊರತೆಯನ್ನು ಮುಂದುವರಿದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳಲ್ಲಿರುವ ಹೆಚ್ಚು ಗಹನವಾದ ವೈರುಧ್ಯಗಳ ಲಕ್ಷಣವನ್ನು ವ್ಯಕ್ತಪಡಿಸುವ ವಿಷಯವನ್ನಾಗಿ ನೋಡುತ್ತಾರೆ.

ಜೇಮ್ಸ್ ಒ ಕಾನರ್ (James O'Connor) ತೆರಿಗೆ ಕಟ್ಟಲು ತೆರಿಗೆದಾರರ ವಿರೋಧ ಹಾಗೂ ಸರ್ಕಾರದ ಹೂಡಿಕೆ ಮತ್ತು ಸಾರ್ವಜನಿಕ ಖರ್ಚಿಗೆ ಹೆಚ್ಚುತಿರುವ ಬೇಡಿಕೆಗೆ ಸಂಬಂಧಿಸಿದಂತೆ ಇರುವ ವಿರೋಧಾತ್ಮಕ ಪ್ರವೃತ್ತಿಗಳ ಕಾರಣ ಮುಂದುವರಿದ ಬಂಡವಾಳಶಾಹಿ ದೇಶಗಳು ನಿರಂತರವಾಗಿ "ಪ್ರಭುತ್ವ ವಿತ್ತೀಯ ಬಿಕ್ಕಟ್ಟಿನಿಂದ" ಬಳಲುತ್ತಿವೆ ಎಂದು ವಾದಿಸಿರುತ್ತಾನೆ. ಒಂದೆಡೆ, ವ್ಯಾಪಾರ ಉದ್ದಿಮೆಯ ಅಗತ್ಯಗಳ ಪೂರೈಸುವಿಕೆಗೆ ಕೆಲವು ಹೂಡಿಕೆಗಳನ್ನು ಬಂಡವಾಳಶಾಹಿಗಳು ಮಾಡಲು ಸಾಧ್ಯವಿಲ್ಲ  ಅಥವಾ ಅವುಗಳಿಗೆ ಹಣ ಕೊಡಲು ಸಿದ್ಧರಿಲ್ಲದಿರುವ ಸಂದರ್ಭದಲ್ಲಿ ಸರ್ಕಾರವು ಅದಕ್ಕೆ ಸ್ಪಂದಿಸಬೇಕಾದ ಅನಿವಾರ್ಯತೆ ಎದುರಾದಾಗ *'ಸಾರ್ವಜನಿಕ ಹೂಡಿಕೆ'* ಮಾಡಬೇಕಾದ ಒತ್ತಡವು ಅದರ ಮೇಲೆ ಬೀಳುತ್ತದೆ. ಉದಾಹರಣೆಗೆ, ಜಾಗತಿಕ ಆರ್ಥಿಕತೆಯಲ್ಲಿ ಸ್ಪರ್ಧಿಸಲು ಒಂದು ಆರೋಗ್ಯಕರ ಹಾಗೂ ಶಿಕ್ಷಿತ ಕಾರ್ಮಿಕ ಪಡೆ, ಆಧುನಿಕ ಮೂಲಸೌಕರ್ಯ, ಸಂಶೋಧನೆ ಹಾಗೂ ಬೆಳವಣಿಗೆಯಲ್ಲಿ ಸಕ್ರಿಯವಾದ, ದೊಡ್ಡ ಪ್ರಮಾಣದ, ಅಪಾಯ ಸಂಭವದ ಹೂಡಿಕೆ,  ಇತ್ಯಾದಿಗಳು ಇವೆ ಎಂಬುದನ್ನು ನಾವು ನೋಡಿಕೊಳ್ಳಬೇಕಾಗುತ್ತದೆ.

ಮತ್ತೊಂದು ಕಡೆ, ವಿಭಜಕ ವರ್ಗ ಸಂಘರ್ಷವನ್ನು ತಪ್ಪಿಸಲು ಪ್ರಭುತ್ವವು ನಿರುದ್ಯೋಗ ಪರಿಹಾರ, ಸಾಮಾಜಿಕ ಭದ್ರತೆ, ಪರಿಸರ ಶುಚೀಕರಣ, ಸಾರ್ವಜನಿಕ ಆರೋಗ್ಯ ಸೇವೆಗಳು, ಮತ್ತು ಬಡವರ ಕಲ್ಯಾಣ ಯೋಜನೆಯಂತಹ ನಿರಂತರವಾಗಿ ಹೆಚ್ಚುತ್ತಲೇ ಇರುವ *'ಸಾಮಾಜಿಕ ಖರ್ಚುಗಳನ್ನು'* ಮಾಡಬೇಕಾಗುತ್ತದೆ. ವ್ಯಯಿಸಲು ಸರ್ಕಾರದ ಮೇಲೆ ಹೆಚ್ಚುತ್ತಲೇ ಹೋಗುತ್ತಿರುವ ಬೇಡಿಕೆಗಳ ಜೊತೆಗೆ ಇಂತಹ ಕಾರ್ಯಕ್ರಮಗಳಿಗೆ ಹಣ ಕೊಡಲು ತೆರಿಗೆದಾರರ ಹೆಚ್ಚುತ್ತಿರುವ ಅಸಮ್ಮತಿಯು "ಪ್ರಭುತ್ವದ ವಿತ್ತೀಯ ಬಿಕ್ಕಟ್ಟನ್ನು" ಸೃಷ್ಟಿಸುತ್ತದೆ. ಸಾರ್ವಜನಿಕ ಬಜೆಟ್ ಕುರಿತಂತೆ ನಡೆಯುತ್ತಿರುವ ಈ ಸಮರವು ಪ್ರಸ್ತುತ ಯುಗದಲ್ಲಿ ವರ್ಗ ಸಂಘರ್ಷದ ಸ್ವರೂಪವನ್ನು ತೆಗೆದುಕೊಳ್ಳುತ್ತದೆ.

**ಚಟುವಟಿಕೆ**

**ಅಧ್ಯಯನ ನಿದರ್ಶನದ ವಿಶ್ಲೇಷಣೆ**

ಯಾರು ಸಾರ್ವಜನಿಕ ಆಯ್ಕೆಯನ್ನು, ನವ ಸಾಂಪ್ರದಾಯಿಕ ಅಥವಾ ಕೇನ್ಸ್‌ವಾದ ನಂತರ/ಸಾಂಸ್ಥಿಕ ಅರ್ಥಶಾಸ್ತ್ರಜ್ಞರ ನಿಲುವನ್ನು ಒಪ್ಪುತ್ತಾರೆ ಎಂಬುದನ್ನು ತರಗತಿಯಲ್ಲಿ ಅಭಿಪ್ರಾಯ ಸಂಗ್ರಹಿಸಿ. ನಂತರ ಒಂದೇ ಅಭಿಪ್ರಾಯಗಳನ್ನು ಹೊಂದಿರುವ ಮೂರು ಅಥವಾ ನಾಲ್ಕು ಜನರನ್ನೊಳಗೊಂಡ ತಂಡಗಳನ್ನು ರಚಿಸಿ. ಅಮೇರಿಕಾ ಸಂಯುಕ್ತ ರಾಷ್ಟ್ರದ ಸಾಲದ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಆರ್ಥಿಕ ನೀತಿಯನ್ನು ರೂಪಿಸಲು ಈ ಕೆಳಗೆ ನೀಡಿರುವ ರೂಪರೇಷೆಯನ್ನು ಒಂದು ಚೌಕಟ್ಟಾಗಿ ಬಳಸಿ. ನಿಮ್ಮ ನೀತಿ ರೂಪಿಸಿದ ಮೇಲೆ ಅದನ್ನು ನಿಮ್ಮ ತರಗತಿಯಲ್ಲಿ ಹಂಚಿಕೊಳ್ಳಲು ಸಿದ್ಧರಾಗಿರಿ.

A. ಸಮಸ್ಯೆಯನ್ನು ಗೊತ್ತುಪಡಿಸಿ
   - ಹಿಂದಿನ ಸಾರ್ವಜನಿಕ ನೀತಿಯ ಗುರಿಗಳೇನು?
   - ಏನು ತಪ್ಪಾಯಿತು ಮತ್ತು ಏಕೆ ಆಯಿತು? ತಪ್ಪಾಗಿರುವುದಕ್ಕೆ ಯಾರು ಹೊಣೆ? ಅದಕ್ಕೆ ಪುರಾವೆಗಳೇನು?
   - ವಿವಾದದ ಸ್ವರೂಪವೇನು? ವಾಸ್ತಾವಾಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳು, ವ್ಯಾಖ್ಯೆಯಲ್ಲಿನ ಸಮಸ್ಯೆಗಳು, ಕಾನೂನಾತ್ಮಕ ಹಕ್ಕುಸಾಧನೆಯ ಸಮಸ್ಯೆಗಳು (ಯಾವುದಾದರೂ ಇದ್ದರೆ) ಹಾಗೂ ಮೌಲ್ಯದಲ್ಲಿನ ಸಂಘರ್ಷಗಳು ಇವೆಲ್ಲವನ್ನೂ ಅದರಲ್ಲಿ ಸೇರಿಸಿಕೊಳ್ಳಿ.

B. ಒಂದು ಹೆಚ್ಚು ಆದರ್ಶ ಮಾದರಿಯ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳಿ

- ನಿಮ್ಮ ತಂಡದಲ್ಲಿ ಒಂದು "ಆದರ್ಶ ಮಾದರಿಯ" ಅಥವಾ ಸುಧಾರಿತ ಪರಿಸ್ಥಿತಿಯನ್ನು ಕುರಿತಂತೆ ನಿಮ್ಮ ಅಭಿಪ್ರಾಯಗಳ ಒಂದು ಹೇಳಿಕೆಯನ್ನು ಸಿದ್ಧಪಡಿಸಿ. ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕೆ ಹೊಂದುವಂತೆ ನಿಮ್ಮ ಹೇಳಿಕೆಯನ್ನು ರೂಪಿಸಿ. ನಿಮ್ಮ ನಿಲುವಿಗೆ ಸಂಬಂಧಿಸಿದಂತೆ ನೀವು ಯಾವ ರೀತಿಯ ಪರಿಣಾಮಗಳಾಗಬಹುದು ಎಂದು ಮುನ್ನಾಣುವಿರಿ.

C. ಖಾಸಗಿ ನಿರ್ಧಾರಗಳನ್ನು ಸಾರ್ವಜನಿಕ ನೀತಿಯೊಂದಿಗೆ ಸಂಬಂಧಿಸಿ

- ಖಾಸಗಿ ನಿರ್ಧಾರಗಳು ಹಾಗೂ ಸಾರ್ವಜನಿಕ ನೀತಿಗಳು ಪರಸ್ಪರ ಹೇಗೆ ಪೂರಕವಾಗಿರುತ್ತವೆ ಅಥವಾ ಅಡ್ಡಿಮಾಡುತ್ತವೆ?
- ಖಾಸಗಿ ನಿರ್ಧಾರಗಳು ಈ ಸಮಸ್ಯೆಯನ್ನು ಪರಿಹರಿಸಲು ಹೇಗೆ ಸಹಾಯಕವಾಗಬಹುದು? ಅದನ್ನು ಸಂಬಂಧಪಟ್ಟ ವ್ಯಕ್ತಿಗಳು ಒಪ್ಪಿಕೊಳ್ಳುವ ಸಾಧ್ಯತೆಗಳೇನು?

D. ಒಂದು ನೀತಿಯನ್ನು ರೂಪಿಸಿ

ಈ ಕೆಳಗಿನ ಅಂಶಗಳನ್ನು ಒಳಗೊಂಡಂತೆ ಒಂದು ನೀತಿಗೆ ಸಂಬಂಧಿಸಿದ ಹೇಳಿಕೆಯನ್ನು (ಅಥವಾ ಕ್ರಿಯಾಯೋಜನೆಯನ್ನು) ಸಿದ್ಧಪಡಿಸಿ:

- ಹೆಚ್ಚು ಆದರ್ಶ ಮಾದರಿಯಾದ ಪರಿಸ್ಥಿತಿಯನ್ನು ಗುರಿಯಾಗಿ ಇಟ್ಟುಕೊಂಡು ಒಂದು ಹೇಳಿಕೆ
- ನಿಮ್ಮ ಗುರಿಯನ್ನು ಸಾಧಿಸುವಲ್ಲಿ ಅಡ್ಡಿಯಾಗಬಹುದಾದ ಸಮಸ್ಯೆಗಳು
- ಅಪೇಕ್ಷಿತ ಬದಲಾವಣೆಗಳನ್ನು ತರುವಂತೆ ಯಾವ ಚಟುವಟಿಕೆಗಳು ಅನುಕೂಲವಾಗಬಹುದು ಎಂದು ನೀವು ಭಾವಿಸಿದ್ದೀರಿ. ಅದನ್ನು ಸಾಧಿಸಲು ಬೇಕಾದ ಕಾಲಾವಧಿಯನ್ನು ವಿವರಿಸಿ.

ಈ ವಿಷಯದಲ್ಲಿನ ಮುಖ್ಯ ಪ್ರಶ್ನೆಗಳನ್ನು ಕೇಂದ್ರವಾಗಿಟ್ಟುಕೊಂಡು ನಿಮ್ಮ ಚಟುವಟಿಕೆಯನ್ನು ವ್ಯವಸ್ಥಿತಗೊಳಿಸಿಕೊಳ್ಳಿ. ಉದಾಹರಣೆಗೆ:

- ಆರ್ಥಿಕತೆಯಲ್ಲಿ ಸರ್ಕಾರದ ಸೂಕ್ತವಾದ ಪಾತ್ರವೇನು?
- ಸರ್ಕಾರದ ಸೇವೆಗಳಿಗೆ ನಾವು ಹೇಗೆ ಪಾವತಿಸಬೇಕು?
- ಆರ್ಥಿಕತೆಯನ್ನು ಉತ್ತೇಜಿಸುವ ಹೊಣೆಗಾರಿಕೆ ಸರ್ಕಾರದ್ದಾಗಿರಬೇಕೆ?
- ಜನರ ವೈಯಕ್ತಿಕ ಆಸಕ್ತಿಗಳಿಗಿಂತ ಭಿನ್ನವಾದ ಸಾರ್ವಜನಿಕ ಆಸಕ್ತಿ ಎಂಬುದೊಂದು ಇದೆಯೆ?

**ಚಟುವಟಿಕೆ**

**ಅಧ್ಯಯನದ ಆರ್ಥಿಕ ನಿದರ್ಶನವೊಂದನ್ನು ವಿನ್ಯಾಸಗೊಳಿಸುವುದು**

ಈ ಹಿಂದೆ ನೀಡಿರುವ ಅಧ್ಯಯನ ನಿದರ್ಶನವನ್ನು ಒಂದು ಮಾದರಿಯಾಗಿಟ್ಟುಕೊಂಡು ಒಂದು ಆರ್ಥಿಕ ವಿಷಯವನ್ನು ಕುರಿತಂತೆ ಒಂದು ಬೋಧನಾ ಘಟಕವನ್ನು ಯೋಜಿಸಿ. ವಿದ್ಯಾರ್ಥಿಗಳ ಬಳಸಲು ಬೇಕಾದ ಮಾಹಿತಿಯನ್ನು ನೀವು ಎಲ್ಲಿಂದ ಸಂಗ್ರಹಿಸುವಿರಿ? ಅವರಿಗೆ ಎಷ್ಟು ಮಾಹಿತಿ ಬೇಕಾಗುತ್ತದೆ? ವಿಷಯಕ್ಕೆ ಸಂಬಂಧಿಸಿದ ವಿವಿಧ ದೃಷ್ಟಿಕೋನಗಳನ್ನು ಹೇಗೆ ಮುಂದಿಡುವಿರಿ? ಯಾವ ರೀತಿಯ ನೀತಿ ರೂಪಿಸುವ ಮಾದರಿಯನ್ನು ವಿದ್ಯಾರ್ಥಿಗಳಿಗೆ ಬಳಸಿಕೊಳ್ಳುವಿರಿ? ಸಾಧ್ಯವಾದಷ್ಟು ಮಟ್ಟಿಗೆ ವಿವರವಾಗಿ ಘಟಕದ ರೂಪುರೇಷೆಗಳನ್ನು ರಚಿಸಿ.

## ಅಧ್ಯಾಯ ಕುರಿತು ಪರ್ಯಾಲೋಚಿಸುವುದು

ಈ ಆಧ್ಯಾಯದ ಪ್ರಾರಂಭದಲ್ಲಿ ರಚಿಸಿದ ಅರ್ಥಶಾಸ್ತ್ರದ ಪರಿಕಲ್ಪನಾತ್ಮಕ ನಕ್ಷೆಯನ್ನು ಮತ್ತೆ ಪರಿಶೀಲಿಸಿ. ಈಗ ಆ ನಕ್ಷೆಯನ್ನು ಹೇಗೆ ಪರಿಷ್ಕರಿಸುತ್ತೀರಿ? ನಿಮ್ಮ ಸ್ವಂತ ಅಭಿಪ್ರಾಯಗಳು ಯಾವ ಆರ್ಥಿಕ ಸಂಪ್ರದಾಯ ಅಥವಾ ಚಿಂತನಾ ಪಂಥವನ್ನು ಹೆಚ್ಚು ಹೋಲುತ್ತದೆ? ಈ ವಿಷಯಗಳಿಗೆ ಸಂಬಂಧಿಸಿದಂತೆ ನಿಮ್ಮ ದಿನಚರಿಯ ಪುಸ್ತಕದಲ್ಲಿ ನಿಮ್ಮ ಕೆಲವು ಆಲೋಚನೆಗಳನ್ನು ಕುರಿತು ಬರೆಯಿರಿ.

**References**

Albeda, R.,C. Gunn, and W.Waller. *Alternatives to Economic Orthodoxy.* Armonk, N.Y.:M.E. Sharpe, 1987.

Ayers, C. *Theory of Economic Progress*. New York: Schocken Books, 1962.

Baran, P., and P. Sweezy. *Monopoly Capital: An Essay on the American Economic and Social Order*. New York: Socialist Review Press, 1966.

Barber, W. J., *The History of Economic Thought*. New York: Penguin, 1967.

Bottomore, T., et al. *A Dictionary of Marxist Thought*. Cambridge: Harvard University Press, 1983.

Buchanan, J., and R.D. Tollison, eds. *The Theory of Public Choice II*. Ann Arbor: University of Michigan Press, 1984.

Buchanan, J., and G. Tullock. *The Calculus of Consent*. Ann Arbor: University of Michigan Press, 1962.

Commons, J.R. *Institutional Economics*. New York: Macmillan, 1934.

Dewey, J. *Logic: The Theory of Inquiry.* New York: Henry Holt, 1938.

Eatwell, J., M. Milgate, and P. Newman, eds. *The New Palgraves: A Dictionary of Economics*. New York: Stockton Press, 1987.

Fusfield, D. *The Age of the Economist*, 2nd ed. Glenview, III.: Scott, Foresman, 1990.

Galbraith, J.K. *The New Industrial State*, 4th ed. Boston: Houghton Mifflin, 1985.

Gruchy, A. *Modern Economic Thought: The American Contribution*. Englewood Cliffs, N.J.: Prentice Hall, 1947.

Gwartney, J. B., and R.E. Wagner. "The Public Choice Revolution." *Intercollegiate Review* 23, no. 2 (Spring 1988): 17-26.

Heilbroner, R.L., *Marxism For and Against*. New York: W.W. Norton, & Co., Inc., 1980.

_____. *The Nature and Logic of Capitalism*. New York: W.W. Norton, & Co., Inc., 1985.

_____. *The Worldly Philosophers*, 6th ed. New York: Simon & Schuster, Touchstone, 1986.

_____, ed. *The Essential Adam Smith*. New York: W.W. Norton, & Co., Inc., 1986.

Helburn, S., and D. Bramhall, eds. *Marx, Schumpeter, Keynes: A Centenary Celebration of Dissent.* Armonk, N.Y.: M.E. Sharpe, 1986.

Kane, E.J. *The S & L Insurance Mess: How Did It Happen*?. Washington, D. C.: Urban Institute Press, 1989.

Landreth, H., and D. Colander. *History of Economic Theory*, 2nd ed. Boston: Houghton Mifflin, 1989.

Mayer, M., *The Greatest-ever Bank Robbery: The Collapse of the Savings and Loan Industry*. New York: Charles Scribner's, 1990.

Minsky, H.P. *John Maynard Keynes*. New York: Columbia University Press, 1975.

O' Connor, J. *Fiscal Crisis of the State*. New York: St. Martin's Press, 1973.

______. *The Corporation and the State: Essays in the Theory of Capitalism and Imperialism*. New York: Harper & Row, 1974.

Olson, M. *The Logic of Collective Action: Public Goals and the Theory of Groups*. Ann Arbor: University of Michigan Press, 1965.

Pheby, J. *Methodology and Economics: A Critical Introduction*. New York: Macmillan, 1988.

Smith, A. *The Wealth of Nations*. New York: Modern Library, 1939.

Tollison, R.D. "Chicago Political Economy." *Public Choice* 63, no. 3 (December 1989): 293-97.

Veblen, T. *The Place of Science in Modern Civilization*. New York: B. W. Huebsch, 1919.

**Teaching Resources**

*Applied Economics*. Colorado Springs, Colo.: Junior Achievement, Inc.

Armento, B.J. "Promoting Economic Literacy". In *Social Studies and Social Sciences: A Fifty-Year Perspective*, ed. S.P Wronski and D. H. Bragaw, 97-110. Washington, D.C: National Council for the Social Studies, 1986.

Banaszak, R.A., and E. Clawson. *Strategies for Teaching Economics: Junior High School Level. Grades 7-9.* New York: National Council on Economic Education, 1981.

Brimmer, A. F. "Nature and Content of Contemporary Economics". In *Citizenship for the 21st Century*, ed. W.T. Callahans, Jr., and R.A. Banaszak, 103-115. Bloomington, Ind.: Social Studies Development Centre and ERIC Clearinghouse for Social Studies/ Social Science Education, 1991.

Clow, J.E., et al. *Teaching Strategies: Consumer Economics (Secondary*). New York: National Council on Economic Education, 1985.

*Decisions, Decisions: Balancing the Budget*. Watertown, Mass.: Tom Snyder Productions, n.d. Computer simulation.

*Economics: Global Perspective Series*. Boca Raton, Fla.: SIRS, annual.

*Economics: What and When?* New York: National Council on Economic Education, 1990.

*Economics: 94/95: Annual Editions Series.* Guilford, Conn.: Dushkin, 1994.

Galbraith, J.K. "On Teaching a Fractured Economics." *Journal of Economic Education* 18, no. 2 (1987): 213-26.

*Global Recall*. Philadelphia: World Game Institute.

Miller, S.L. *Economic Education for Citizenship*. Bloomington, Ind.: ERIC Clearinghouse for Social Studies/ Social Science Education, 1988.

National Council on Economic Education, Two Park Avenue, New York, NY 10016.

*Pacific Century, The*. South Burlington, Vt.: Corporation for Public Broadcasting, 1993. Video series.

*Rural Communities: Legacy and Change*. South Burlington, Vt.: Corporation for Public Broadcasting, 1993. Video series.

Schug, M.C. "Solving the Economic Mysteries of American History." *Social Education 58*, no. 1 (1994): special issue.

Schur, L. "What Economics is Worth Teaching?" In *Economics in the School Curriculum, K-12*, ed. Mark C. Schug, 21-32. Washington, D.C.: Joint Council on Economics Education and the National Education Association, 1985.

*Simplicon*. Culver City, Calif.: Social Studies School Service, n.d. Computer simulation.